
ಮಾರ್ಚ್ 8, 2026
41ನೇ ವರ್ಷದಲ್ಲಿ
http//policenews.news Police News
police_news
ಸ್ಥಾಪಕ ಸಂಪಾದಕ: ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2027
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹ 20/-

## ಎಲ್‌ಎಲ್‌ಬಿ ಸ್ಟೂಡೆಂಟ್ ರೇವಂತ್ ಕಗ್ಗೊಲೆ!

# ರೌಡಿ ರೇವಾ ಗ್ಯಾಂಗ್ ಸಿಸಿಬಿ ಪೊಲೀಸ್ ಬ್ಯಾಂಗ್ ಬ್ಯಾಂಗ್!



ವರ್ತೂರು ಪಿಐ ಸೋನಾರ್ ಸಸ್ಪೆಂಡ್!



## 'ಅಹಿಂದ' ಉತ್ತರಾಧಿಕಾರಿ ಸಾಹುಕಾರ್?!

## ದಳಪತಿ ವಿಜಯ್ ಸಂಸಾರಕ್ಕೆ ಮುಳ್ಳಾದಳೇ ತ್ರಿಷಾ?!



## ಆನ್‌ಲೈನ್ ಬೆಟ್ಟಿಂಗ್ ಆಡಲು ವೃದ್ಧೆಗೆ ಚಟ್ಟ ಕಟ್ಟಿದ್ದ ಪಾಪಿ!



## ಮಹಿಳೆ-ಮಕ್ಕಳ ರಕ್ಷಣೆಗೆ 'ಅಕ್ಕಪಡೆ'!

## ಮುತ್ತ್ಯಾ ವಿರುದ್ಧ ಪೋಕ್ಸೋ ಕೇಸ್!



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

## ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......



### ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

ಜನನ : 29-03-1954 ಮರಣ : 22-11-2005

#### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ಕಾನೂನು ಪಾಲಿಸಿ... ಆದರ್ಶ ಪೊಲೀಸ್ ಅಧಿಕಾರಿಗಳಾಗಿ...

ಕರ್ನಾಟಕ ಪೊಲೀಸ್ ಇಲಾಖೆಗೆ ಐನೂರ ನಲ್ವತ್ತೆರಡು ಯುವ ಸಬ್ ಇನ್ಸಪೆಕ್ಟರ್‌ಗಳು ಸೇರ್ಪಡೆಯಾಗುತ್ತಿದ್ದಾರೆ. ಹೊಸ ತಲೆಮಾರು, ಹೊಸ ಕನಸುಗಳೊಂದಿಗೆ ಕರ್ನಾಟಕದ ಲಾ ಅಂಡ್ ಅರ್ಡರ್ ವ್ಯವಸ್ಥೆಯನ್ನು ಸರಿದಾರಿಯಲ್ಲಿ ನಡೆಸಲು ಸಜ್ಜಾಗುತ್ತಿದ್ದಾರೆ. ಅವರನ್ನು ತರಬೇತುಗೊಳಿಸುವ ಜವಬ್ದಾರಿಯೊಂದನ್ನು ಡಿಐಜಿ ಶ್ರೀ ಪುಟ್ಟಮಾದಯ್ಯ ಸರ್ ಅವರು ನನ್ನ ಹೆಗಲಿಗೇರಿಸಿದ್ದರು. ಒಂದು ವರ್ಷ ನಡೆಯುವ ತರಬೇತಿಯ ಒಂದು ದಿನದ ತರಬೇತಿಯನ್ನು ನಾನು ನೀಡಿದೆನು. ಆ ಹೊಸಬರನ್ನು ಎದುರುಗೊಳ್ಳಲು, ಅವರಿಗೆ ಪೊಲೀಸ್ ಇಲಾಖೆಯ ಮೂಲಭೂತ ಸಮಸ್ಯೆ, ಸವಾಲು ಮತ್ತು ಜವಾಬ್ದಾರಿಗಳ ಕುರಿತಂತೆ ತರಬೇತುಗೊಳಿಸಲು ಬೆಂಗಳೂರಿನಿಂದ ಆರುನೂರು ಕಿಮಿ ದೂರ ಪ್ರಯಾಣಿಸಿ ಗುಲ್ಬರ್ಗಾಕ್ಕೆ ಹೋಗಿದ್ದೆ. ಸಾಮಾನ್ಯವಾಗಿ ಪೊಲೀಸ್ ಇಲಾಖೆಗೆ ಸೇರ ಬಯಸುವ ಬಹುತೇಕರಿಗೆ ಸಾಂಗ್ಲಿಯಾನ, ಕೆಂಪಯ್ಯ ತರ ಪ್ರಸಿದ್ಧವಾಗಿಬಿಡುವ, ರಾತ್ರೋರಾತ್ರಿ ಬದಲಾವಣೆ ತಂದುಬಿಡುವ ಕನಸುಗಳಿರುತ್ತವೆ. ಅವರೆಲ್ಲರಿಗೂ ನಾನು ಅನೇಕ ಸಂಗತಿಗಳನ್ನು ಮನದಟ್ಟು ಮಾಡಿದೆ.






ಪೊಲೀಸ್ ಇಲಾಖೆ ಬಗ್ಗೆ ಜನರಲ್ಲಿರುವ ತಪ್ಪು ಕಲ್ಪನೆಗಳಿಗೆ ನಮ್ಮ ನಡೆ ನುಡಿಗಳು ಹೇಗೆ ಕಾರಣವಾಗುತ್ತಿವೆ ಮತ್ತು ಅನ್ನ ಕೊಡುವ ಇಲಾಖೆಗೆ ನಾವೆಷ್ಟು ಪ್ರಾಮಾಣಿಕರಾಗಿರಬೇಕು ಎಂಬುದನ್ನು ಒಳಗೊಂಡಂತೆ, ಮೂಲಭೂತ ಕಾನೂನುಗಳು, ಒತ್ತಡ

☞ 3

# ಪಾಸ್‌ಪೋರ್ಟ್ ಪರಿಶೀಲನೆ ಹೆಸರಿನಲ್ಲಿ ನಡೆಯುತ್ತಿದ್ದ ಅಕ್ರಮಗಳಿಗೆ ಬ್ರೇಕ್? ಇನ್ನು ಮುಂದೆ ಪೊಲೀಸರಿಗೆ ಬಾಡಿವೋರ್ನ್ ಕ್ಯಾಮೆರಾ ಕಡ್ಡಾಯ!



ಸಂಪಾದಕ
**ಎಂ. ರಾಹುಲ್**

**ಪಾ**ಸ್‌ಪೋರ್ಟ್ ಪರಿಶೀಲನೆ ಎಂಬುದು ಸರಳ ಆಡಳಿತಾತ್ಮಕ ಪ್ರಕ್ರಿಯೆಯಾಗಬೇಕಾದರೆ, ಇತ್ತೀಚಿನ ವರ್ಷಗಳಲ್ಲಿ ಅದು ಅನೇಕ ನಾಗರಿಕರಿಗೆ ಭೀತಿಯ ಅನುಭವವಾಗಿ ಮಾರ್ಪಟ್ಟಿತ್ತು. ಪೊಲೀಸ್ ಠಾಣೆ ಅಲೆದಾಟ, ಅನಗತ್ಯ ಪ್ರಶ್ನೆಗಳು, ಸಮಯ ವಿಳಂಬ, ಮತ್ತು ಕೆಲವೊಮ್ಮೆ 'ಪ್ರತಿಕೂಲ ವರದಿ' ಹೆಸರಿನಲ್ಲಿ ನಡೆಯುತ್ತಿದ್ದ ಮಾನಸಿಕ ಕಿರುಕುಳ ಇವೆಲ್ಲವೂ ಸಾರ್ವಜನಿಕ ವಲಯದಲ್ಲಿ ಗಂಭೀರ ಚರ್ಚೆಗೆ ಕಾರಣವಾಗಿದ್ದವು. ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಪೊಲೀಸ್ ವ್ಯವಸ್ಥೆ ಇದೀಗ ಪಾಸ್‌ಪೋರ್ಟ್ ಪರಿಶೀಲನೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕಠಿಣ ಹಾಗೂ ಮಹತ್ವದ ಮಾರ್ಗಸೂಚಿಗಳನ್ನು ಜಾರಿಗೊಳಿಸಿದೆ. ಈ ಆದೇಶವನ್ನು ಪೊಲೀಸ್ ವ್ಯವಸ್ಥೆಯೊಳಗಿನ ದೊಡ್ಡ ಶುದ್ಧೀಕರಣದ ಪ್ರಾರಂಭವೆಂದು ಹೇಳಲಾಗುತ್ತಿದೆ.

ಪಾಸ್‌ಪೋರ್ಟ್ ಪಡೆಯುವುದು ಪ್ರತಿ ಭಾರತೀಯ ನಾಗರಿಕನ ಕಾನೂನು ಹಕ್ಕು. ಆದರೆ ಆ ಹಕ್ಕನ್ನು ಬಳಸಿಕೊಳ್ಳುವ ಸಂದರ್ಭದಲ್ಲಿ ನಾಗರಿಕರು ಅನುಭವಿಸುತ್ತಿದ್ದ ತೊಂದರೆಗಳು, ಪೊಲೀಸ್ ವ್ಯವಸ್ಥೆಯ ಮೇಲೆಯೇ ಪ್ರಶ್ನಾರ್ಥಕ ಗುರುತು ಮೂಡಿಸಿದ್ದವು. 'ಒಮ್ಮೆ ಠಾಣೆಗೆ ಬನ್ನಿ', 'ನಾಳೆ ಮತ್ತೆ ಬನ್ನಿ', 'ನೆರೆಹೊರೆಯವರನ್ನು ಕರೆದುಕೊಂಡು ಬನ್ನಿ' ಎಂಬ ಮಾತುಗಳು ಸಾಮಾನ್ಯವಾಗಿದ್ದವು. ಕೆಲ ಪ್ರಕರಣಗಳಲ್ಲಿ ಅರ್ಜಿದಾರರ ಮನೆಗೆ ಭೇಟಿ ನೀಡದೇ ನೇರವಾಗಿ ಠಾಣೆಗೆ ಕರೆಸಿ ವಿಚಾರಣೆ ನಡೆಸಲಾಗುತ್ತಿತ್ತು ಎಂಬ ಆರೋಪಗಳು ಕೇಳಿಬಂದಿದ್ದವು. ಇದರಿಂದಾಗಿ ಪಾಸ್‌ಪೋರ್ಟ್ ಪರಿಶೀಲನೆ ಪ್ರಕ್ರಿಯೆ ಪಾರದರ್ಶಕತೆಯನ್ನು ಕಳೆದುಕೊಳ್ಳುತ್ತಿದೆ ಎಂಬ ಭಾವನೆ ಸಾರ್ವಜನಿಕರಲ್ಲಿ ಬೇರೂರಿತ್ತು.

ಇನ್ನೂ ಗಂಭೀರವಾದ ಅಂಶವೆಂದರೆ, ಸ್ಪಷ್ಟ ಪುರಾವೆಗಳಿಲ್ಲದೆ 'ಅಡ್ವರ್ಸ್ ರಿಪೋರ್ಟ್' ಸಲ್ಲಿಸಲಾಗುತ್ತಿದೆ ಎಂಬ ದೂರುಗಳು. ಒಂದು ಬಾರಿ ಪ್ರತಿಕೂಲ ವರದಿ ಸಲ್ಲಿಸಿದರೆ, ಪಾಸ್‌ಪೋರ್ಟ್ ಪ್ರಕ್ರಿಯೆ ತಿಂಗಳುಗಳ ಕಾಲ ಸ್ಥಗಿತಗೊಳ್ಳುತ್ತದೆ. ಇದರಿಂದ ಉದ್ಯೋಗ, ವಿದೇಶ ಪ್ರವಾಸ, ಶಿಕ್ಷಣ, ಚಿಕಿತ್ಸೆ ಹಲವು ಅಗತ್ಯ ಕಾರ್ಯಗಳು ಅಡಚಣೆಗೆ ಒಳಗಾಗುತ್ತವೆ. ಈ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಕೆಲ ಕಡೆಗಳಲ್ಲಿ ಲಂಚದ ಬೇಡಿಕೆ ಇರುತ್ತಿದೆ ಎಂಬ ಆರೋಪಗಳು ಕೂಡ ಮೇಲಾಧಿಕಾರಿಗಳ ಗಮನಕ್ಕೆ ಬಂದಿದ್ದವು ಎಂದು ಹೇಳಲಾಗುತ್ತಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿಯೇ ಪೊಲೀಸ್ ಪ್ರಧಾನ ಕಚೇರಿ ಮಹತ್ವದ ನಿರ್ಧಾರ ಕೈಗೊಂಡಿದೆ. ಪಾಸ್ಪೋರ್ಟ್ ಪರಿಶೀಲನೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಪಾರದರ್ಶಕಗೊಳಿಸುವುದು, ಪೊಲೀಸ್ ಸಿಬ್ಬಂದಿಯ ಜವಾಬ್ದಾರಿಯನ್ನು ಹೆಚ್ಚಿಸುವುದು ಮತ್ತು ನಾಗರಿಕರ ಮೇಲಿನ ಅನಗತ್ಯ ಕಿರುಕುಳವನ್ನು ತಡೆಯುವುದು ಈ ಹೊಸ ಮಾರ್ಗಸೂಚಿಗಳ ಮುಖ್ಯ ಉದ್ದೇಶವಾಗಿದೆ. ಆದೇಶದ ಪ್ರಕಾರ, ಇನ್ನು ಮುಂದೆ ಪಾಸ್‌ಪೋರ್ಟ್ ಪರಿಶೀಲನೆಗಾಗಿ ಯಾವುದೇ ಅರ್ಜಿದಾರರನ್ನು ಪೊಲೀಸ್ ಠಾಣೆಗೆ ಕರೆಸುವಂತಿಲ್ಲ. ಪರಿಶೀಲನೆ ಸಂಪೂರ್ಣವಾಗಿ ಅರ್ಜಿದಾರರು ನೀಡಿರುವ ವಿಳಾಸದಲ್ಲೇ ನಡೆಯಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳಲಾಗಿದೆ.




ಈ ಕ್ರಮವು ನಾಗರಿಕರ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಇದುವರೆಗೆ ಠಾಣೆಗೆ ಹೋಗಿ ಗಂಟೆಗಟ್ಟಲೆ ಕಾಯುವುದು, ಕೆಲಸ ಬಿಟ್ಟು ಹಾಜರಾಗುವುದು, ಮತ್ತೆ ಮತ್ತೆ ದಾಖಲೆಗಳನ್ನು ತೋರಿಸುವುದು ಸಾಮಾನ್ಯವಾಗಿತ್ತು. ಈಗ ಈ ಎಲ್ಲಾ ಅಲೆದಾಟಕ್ಕೆ ಕಡಿವಾಣ ಬೀಳುವ ನಿರೀಕ್ಷೆ ಮೂಡಿದೆ. ಪರಿಶೀಲನೆಗೆ ತೆರಳುವ ಮುನ್ನ ಪೊಲೀಸ್ ಸಿಬ್ಬಂದಿಯವರು ಕನಿಷ್ಠ 24 ಗಂಟೆಗಳ ಮುಂಚಿತವಾಗಿ ಅರ್ಜಿದಾರರಿಗೆ ಮಾಹಿತಿ ನೀಡಬೇಕು. SMS ಅಥವಾ ದೂರವಾಣಿ ಕರೆ ಮೂಲಕ ನೀಡುವ ಈ ಮಾಹಿತಿ, ಪ್ರಕ್ರಿಯೆಯನ್ನು ಹೆಚ್ಚು ವ್ಯವಸ್ಥಿತಗೊಳಿಸಲಿದೆ ಎಂಬ ನಿರೀಕ್ಷೆ ಇದೆ.

ಹೊಸ ಆದೇಶದಲ್ಲಿ ಅತ್ಯಂತ ಗಮನಾರ್ಹ ಅಂಶವೆಂದರೆ ಬಾಡಿ ಕ್ಯಾಮೆರಾಗಳ ಕಡ್ಡಾಯ ಬಳಕೆ. ಪಾಸ್ಪೋರ್ಟ್ ಪರಿಶೀಲನೆ ನಡೆಸುವ ಪ್ರತಿಯೊಬ್ಬ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರು, ಪರಿಶೀಲನೆ ಪ್ರಾರಂಭದಿಂದ ಅಂತ್ಯವರೆಗೆ ಬಾಡಿವೋರ್ನ್ ಕ್ಯಾಮೆರಾ ಧರಿಸಲೇಬೇಕು. ಯಾವುದೇ ಹಂತದಲ್ಲೂ ಕ್ಯಾಮೆರಾವನ್ನು ಆಫ್ ಮಾಡುವಂತಿಲ್ಲ. ಈ ನಿಯಮವನ್ನು ಕಠಿಣವಾಗಿ ಜಾರಿಗೆ ತರಲಾಗುತ್ತಿದೆ. ಇದರ ಮೂಲಕ ಅರ್ಜಿದಾರರೊಂದಿಗೆ ನಡೆಯುವ ಪ್ರತಿಯೊಂದು ಸಂಭಾಷಣೆ, ಪ್ರಶ್ನೆ ಮತ್ತು ಪರಿಶೀಲನಾ ಕ್ರಮ ದಾಖಲೆಯಾಗಲಿದೆ.

ಬಾಡಿವೋರ್ನ್ ಕ್ಯಾಮೆರಾ ಬಳಕೆ ಕೇವಲ ನಾಗರಿಕರ ರಕ್ಷಣೆಗೆ ಮಾತ್ರವಲ್ಲ, ಪೊಲೀಸ್ ಸಿಬ್ಬಂದಿಗೂ ರಕ್ಷಣೆಯಂತೆ ಕಾರ್ಯನಿರ್ವಹಿಸಲಿದೆ ಎನ್ನಲಾಗುತ್ತಿದೆ. ಸುಳ್ಳು ಆರೋಪಗಳು, ತಪ್ಪು ದೂರುಗಳು ಮತ್ತು ಗೊಂದಲಕಾರಿ ಸಂದರ್ಭಗಳಲ್ಲಿ ಈ ದೃಶ್ಯ ದಾಖಲೆಗಳು ಸ್ಪಷ್ಟತೆ ತರಲಿವೆ. ಆದರೆ ಅದೇ ಸಮಯದಲ್ಲಿ, ಲಂಚದ ಬೇಡಿಕೆ, ಅನಗತ್ಯ ಪ್ರಶ್ನೆಗಳು ಅಥವಾ ಕಿರುಕುಳ ನೀಡುವ ಯಾವುದೇ ಪ್ರಯತ್ನಗಳು ಕ್ಯಾಮೆರಾದಲ್ಲಿ ದಾಖಲಾಗುವ ಭೀತಿ ಇರುವುದರಿಂದ, ಅಕ್ರಮಗಳಿಗೆ ದೊಡ್ಡ ಮಟ್ಟದ ತಡೆ ಸಿಗಲಿದೆ ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ.

ಪ್ರತಿಕೂಲ ವರದಿ ಸಲ್ಲಿಸುವ ವಿಚಾರದಲ್ಲಿಯೂ ಮಹತ್ವದ ಬದಲಾವಣೆ ತರಲಾಗಿದೆ. ಇನ್ನು ಮುಂದೆ ಯಾವುದೇ ಸ್ಪಷ್ಟ ಮತ್ತು ಸಮರ್ಥ ಪುರಾವೆಗಳಿಲ್ಲದೆ 'ಅಡ್ವರ್ಸ್ ರಿಪೋರ್ಟ್' ಸಲ್ಲಿಸುವಂತಿಲ್ಲ ಎಂದು ಆದೇಶದಲ್ಲಿ ಖಡಕ್ ಎಚ್ಚರಿಕೆ ನೀಡಲಾಗಿದೆ. ಅನುಮಾನ, ವೈಯಕ್ತಿಕ ಅಭಿಪ್ರಾಯ ಅಥವಾ ಆಧಾರರಹಿತ ಆರೋಪಗಳ ಮೇಲೆ ವರದಿ ಸಲ್ಲಿಸಿದರೆ, ಅದರ ಹೊಣೆಗಾರಿಕೆ ನೇರವಾಗಿ ಸಂಬಂಧಪಟ್ಟ ಪೊಲೀಸ್ ಸಿಬ್ಬಂದಿಯ ಮೇಲೆಯೇ ಬೀಳಲಿದೆ. ಇದು ಪಾಸ್‌ಪೋರ್ಟ್ ಅರ್ಜಿದಾರರ ಪಾಲಿಗೆ ದೊಡ್ಡ ಭರವಸೆಯಾಗಿದೆ.

ಈ ನಿಯಮಗಳು ಕೇವಲ ಕಾಗದದ ಮೇಲಷ್ಟೇ ಉಳಿಯಬಾರದು ಎಂಬ ಕಾರಣಕ್ಕೆ, ಎಲ್ಲಾ ವಿಭಾಗೀಯ ಉಪ ಪೊಲೀಸ್ ಆಯುಕ್ತರಿಗೆ ನೇರ ಮೇಲ್ವಿಚಾರಣೆಯ ಜವಾಬ್ದಾರಿ ನೀಡಲಾಗಿದೆ. ಪ್ರತಿ ವಾರವೂ ಪಾಲನಾ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಯಾವ ಠಾಣೆಯಲ್ಲಿ ನಿಯಮ ಉಲ್ಲಂಘನೆಯಾಗಿದೆ, ಯಾವ ಅಧಿಕಾರಿಯ ವಿರುದ್ಧ ದೂರು ಬಂದಿದೆ ಎಂಬುದನ್ನು ನೇರವಾಗಿ ಮೇಲ್ದರ್ಜೆಯ ಅಧಿಕಾರಿಗಳು ಪರಿಶೀಲಿಸಲಿದ್ದಾರೆ.

ಇದು ಪೊಲೀಸ್ ವ್ಯವಸ್ಥೆಯೊಳಗೆ ಜವಾಬ್ದಾರಿಯ ಭಾವನೆಯನ್ನು ಹೆಚ್ಚಿಸಲಿದೆ ಎನ್ನಲಾಗಿದೆ. ಇದಲ್ಲದೆ, ಕೆಲ ವಿಶೇಷ ಸಂದರ್ಭಗಳಲ್ಲಿ ನಿಯಮಗಳಿಂದ ವಿನಾಯಿತಿ ಬೇಕಿದ್ದರೆ, ಲಿಖಿತ ಮನವಿ ಸಲ್ಲಿಸಿ ಪೂರ್ವಾನುಮತಿ ಪಡೆಯಬೇಕೆಂದು ಸ್ಪಷ್ಟಪಡಿಸಲಾಗಿದೆ. ತುರ್ತು ಅಥವಾ ಅನಿವಾರ್ಯ ಕಾರಣಗಳ ಹೆಸರಿನಲ್ಲಿ ನಿಯಮ ಉಲ್ಲಂಘನೆಗೆ ಅವಕಾಶವಿಲ್ಲ. ಇದರಿಂದಾಗಿ 'ಕಾರಣ' ಹೇಳಿ ನಿಯಮ ಮೀರುವ ಪ್ರವೃತ್ತಿಗೆ ಕಡಿವಾಣ ಬೀಳಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಈ ಆದೇಶಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಸಾಮಾನ್ಯ ನಾಗರಿಕರು ಈ ಕ್ರಮವನ್ನು ಸ್ವಾಗತಿಸುತ್ತಿದ್ದು, ಪಾಸ್‌ಪೋರ್ಟ್ ಪರಿಶೀಲನೆ ಪ್ರಕ್ರಿಯೆಯಲ್ಲಿ ಇನ್ನು ಮುಂದೆ ಶೋಷಣೆ ಮತ್ತು ಕಿರುಕುಳ ಕಡಿಮೆಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ. 'ಇನ್ನು ಠಾಣೆಗೆ ಅಲೆದಾಟ ಬೇಡ', 'ಎಲ್ಲವೂ ಕ್ಯಾಮೆರಾ ಕಣ್ಣಿನಡಿ' ಎಂಬ ಭಾವನೆ ಜನರಲ್ಲಿ ಮೂಡಿದೆ. ಆದರೆ ಕೆಲವರು ಈ ನಿಯಮಗಳು ನೆಲಮಟ್ಟದಲ್ಲಿ ಎಷ್ಟು ಪರಿಣಾಮಕಾರಿಯಾಗಿ ಜಾರಿಯಾಗುತ್ತವೆ ಎಂಬುದನ್ನು ಕಾದು ನೋಡಬೇಕಿದೆ ಎಂದು ಅಭಿಪ್ರಾಯಪಡುತ್ತಿದ್ದಾರೆ.

ಪೊಲೀಸ್ ವ್ಯವಸ್ಥೆಯ ಒಳವಲಯದಲ್ಲಿಯೂ ಈ ಆದೇಶ ಚರ್ಚೆಗೆ ಗ್ರಾಸವಾಗಿದೆ. ಕೆಲ ಸಿಬ್ಬಂದಿ ಇದನ್ನು ಶಿಸ್ತು ಮತ್ತು ಪಾರದರ್ಶಕತೆಗೆ ಅಗತ್ಯವಾದ ಕ್ರಮವೆಂದು ಸ್ವಾಗತಿಸಿದರೆ, ಇನ್ನು ಕೆಲವರು ಬಾಡಿ ಕ್ಯಾಮೆರಾ ಬಳಕೆ ಕಾರ್ಯಭಾರವನ್ನು ಹೆಚ್ಚಿಸಲಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಮೇಲಾಧಿಕಾರಿಗಳ ದೃಷ್ಟಿಯಲ್ಲಿ ಇದು ಅನಿವಾರ್ಯ ಬದಲಾವಣೆ ಎನ್ನುವುದು ಸ್ಪಷ್ಟವಾಗಿದೆ.

ಒಟ್ಟಿನಲ್ಲಿ, ಪಾಸ್‌ಪೋರ್ಟ್ ಪರಿಶೀಲನೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಜವಾಬ್ದಾರಿ ಮತ್ತು ಶಿಸ್ತು ತರಲು ಈ ಹೊಸ ಮಾರ್ಗಸೂಚಿಗಳು ಮಹತ್ವದ ಹೆಜ್ಜೆಯಾಗಿವೆ. ನಾಗರಿಕರ ಹಕ್ಕುಗಳನ್ನು ರಕ್ಷಿಸುವುದರ ಜೊತೆಗೆ, ಪೊಲೀಸ್ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಪುನಃ ಕಟ್ಟುವ ಪ್ರಯತ್ನವೆಂದು ಇದನ್ನು ಕಾಣಬಹುದು. ಈ ಆದೇಶಗಳು ಕೇವಲ ಘೋಷಣೆಯಲ್ಲದೇ, ನೆಲಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾರಿಯಾದರೆ, ಪಾಸ್‌ಪೋರ್ಟ್ ಪರಿಶೀಲನೆ ಎಂಬ ಪ್ರಕ್ರಿಯೆ ಇನ್ನು ಮುಂದೆ ಭೀತಿಯಲ್ಲ, ಬದಲಾಗಿ ಸರಳ ಮತ್ತು ನಂಬಿಕಾರ್ಹ ವ್ಯವಸ್ಥೆಯಾಗಿ ರೂಪಾಂತರಗೊಳ್ಳಲಿದೆ ಎಂಬ ನಿರೀಕ್ಷೆ ಸಾರ್ವಜನಿಕರಲ್ಲಿ ಮೂಡಿದೆ.....

**-ಸಂ.**



ಡಿಐಜಿಪಿ ಎಂ. ಪುಟ್ಟಮಾದಯ್ಯ


2 ☞ ನಿರ್ವಹಣೆ, ಸಂಯಮದಿಂದ ಯೋಚಿಸಿದರೆ ಆಗುವ ಅನುಕೂಲಗಳು, ಪಕ್ಷಪಾತರಹಿತ ವರ್ತನೆಗಳ ಕುರಿತಂತೆ ಮಾತನಾಡಿದೆ. ಒಂದೆರಡು ಗಂಟೆಗಳ ಕಾಲ ನಡೆಯಬಹುದೆಂದು ಭಾವಿಸಿದ್ದ ನನ್ನ ತರಬೇತಿ ಅವಧಿ ಬರೋಬ್ಬರಿ ಏಳು ಗಂಟೆಗಳ ಕಾಲ ನಡೆಯಿತು. ಅಷ್ಟೂ ಸಮಯ ತದೇಕಚಿತ್ತದಿಂದ ನನ್ನ ಮಾತುಗಳನ್ನು ಆಲಿಸಿದರಲ್ಲದೆ, ಆತ್ಮವಿಶ್ವಾಸದಿಂದ ನನ್ನೊಂದಿಗೆ ಸಂವಾದ ನಡೆಸಿದರು. ಅನೇಕ ಪ್ರಶ್ನೆಗಳ ಮೂಲಕ ತಮ್ಮ ಜ್ಞಾನವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದ್ದ ಅವರುಗಳ ಬಗ್ಗೆ ನನ್ನ ನಂಬಿಕೆ ಇನ್ನಷ್ಟು ಹೆಚ್ಚಾಯಿತು. ಆ ಸಭೆಯ ನಂತರ ಆ ಎಲ್ಲರೂ ಬಂದು ಮೆಚ್ಚಿ ಮಾತನಾಡಿದ್ದು ನನ್ನ ಶ್ರಮ ಸಾರ್ಥಕ 'ವಾದಂತಾಯಿತು! ಆ ಎಲ್ಲಾ ಹೊಸ ಅಧಿಕಾರಿಗಳಿಗೆ ಅಭಿನಂದನೆಗಳು. ಅವರೆಲ್ಲರೂ ರಾಜ್ಯ ಪೊಲೀಸ್ ಇಲಾಖೆಗೆ ಘನತೆಯನ್ನು ತರುತ್ತಾರೆಂದು ನಂಬಿದ್ದೇನೆ. ಇಂತಹ ಕೆಲಸಕ್ಕೆ ನಾನು ಸೂಕ್ತವೆಂದು ನಂಬಿ, ಆಹ್ವಾನಿಸಿದ ಪುಟ್ಟಮಾದಯ್ಯ ಸರ್ ಅವರಿಗೆ ಮತ್ತೊಮ್ಮೆ ಧನ್ಯವಾದಗಳು..

ಅಂದಹಾಗೆ, ಇದು ನನ್ನ ಜೀವನದ ಬಹು ಅಮೂಲ್ಯ ಕ್ಷಣವಾಗಿ ಬದುಕಿನುದ್ದಕ್ಕೂ ನೆನಪಲ್ಲಿ ಉಳಿಯಲಿದೆ.....

**-ಎಲ್.ವೈ. ರಾಜೇಶ್**
ಡಿವೈಎಸ್ಪಿ (ಲೋಕಾಯುಕ್ತ)



# ಅಹಿಂದ ಉತ್ತರಾಧಿಕಾರಕ್ಕೆ 'ಸಿಎಂ' ಸಿದ್ಧತೆ ಹಿಂದುಳಿದ ವರ್ಗಗಳ ನಾಯಕನ ಪಟ್ಟಕ್ಕೆ ಸಾಹುಕಾರ್?!



ಸದ್ಯ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಹಿಂದ ರಾಜಕೀಯದ ನಿರ್ವಿವಾದದ ನಾಯಕನಾಗಿ ಉಳಿದಿದ್ದಾರೆ. ಆದರೆ ಸಿದ್ದರಾಮಯ್ಯ ನಂತರ ಅಹಿಂದ ಚಳುವಳಿಯನ್ನು ಯಾರು ಮುನ್ನಡೆಸುತ್ತಾರೆ? ಎಂಬ ಬಗ್ಗೆ ಈಗ ರಾಜಕೀಯ ವಲಯಗಳಲ್ಲಿ ವ್ಯಾಪಕವಾಗಿ ಚರ್ಚಿಸಲಾಗುತ್ತಿದೆ.

ರಾಜ್ಯ ಕಾಂಗ್ರೆಸ್‌ನಲ್ಲಿ ಸಂಭಾವ್ಯ ನಾಯಕತ್ವ ಬದಲಾವಣೆಯ ಕುರಿತು ಮಾತುಕತೆಗಳು ಮತ್ತು ಊಹಾಪೋಹಗಳು ಹೆಚ್ಚಾಗುತ್ತಿದ್ದಂತೆ ತೆರೆಮರೆಯಲ್ಲಿ ರಾಜಕೀಯ ಲಾಬಿ ತೀವ್ರಗೊಂಡಿದೆ. ಈ ಚರ್ಚೆಗಳ ಕೇಂದ್ರಬಿಂದು ಅಹಿಂದ ಸಾಮಾಜಿಕ ಒಕ್ಕೂಟದ ಭವಿಷ್ಯದ ನಾಯಕತ್ವ, ಕಾಂಗ್ರೆಸ್ ಪಕ್ಷದ ಪ್ರಮುಖ ಚುನಾವಣಾ ಬೆನ್ನೆಲುಬು ಎಂದು ದೀರ್ಘಕಾಲದಿಂದ ಪರಿಗಣಿಸಲ್ಪಟ್ಟಿದೆ.

ಸದ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಹಿಂದ ರಾಜಕೀಯದ ನಿರ್ವಿವಾದದ ನಾಯಕನಾಗಿ ಉಳಿದಿದ್ದಾರೆ. ಆದರೆ ಸಿದ್ದರಾಮಯ್ಯ ನಂತರ ಅಹಿಂದ ಚಳುವಳಿಯನ್ನು ಯಾರು ಮುನ್ನಡೆಸುತ್ತಾರೆ? ಎಂಬ ಬಗ್ಗೆ ಈಗ ರಾಜಕೀಯ ವಲಯಗಳಲ್ಲಿ ವ್ಯಾಪಕವಾಗಿ ಚರ್ಚಿಸಲಾಗುತ್ತಿದೆ.

ಇದಕ್ಕೆ ಪುಷ್ಠಿ ನೀಡುವಂತೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೆಸರು ಕೇಳಿ ಬರುತ್ತಿದೆ. ಜಾರಕಿಹೊಳಿ ತಮ್ಮ ಇತ್ತೀಚಿನ ರಾಜಕೀಯ ನಡೆಗಳಿಂದ ಎಲ್ಲರ ಗಮನ ಸೆಳೆಯುತ್ತಿದ್ದಾರೆ. ಮುಂದಿನ ಪೀಳಿಗೆಯ ಅಹಿಂದ ನಾಯಕನಾಗಿ ತಮ್ಮನ್ನು ತಾವು ಇರಿಸಿಕೊಳ್ಳುವ ಲೆಕ್ಕಾಚಾರ ನಡೆಸುತ್ತಿದ್ದಾರೆ.

ಜಾರಕಿಹೊಳಿ ಇತ್ತೀಚೆಗೆ ನವದೆಹಲಿಗೆ ತೆರಳಿ, ಅಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ನಂತರ ಅವರ ರಾಜಕೀಯ ಚಟುವಟಿಕೆ ಗೋಚರವಾಗಿದೆ. ಹಿರಿಯ ನಾಯಕ ಕೆ.ಎನ್. ರಾಜಣ್ಣ ಭಾಗವಹಿಸಿದ್ದ ಈ ಸಭೆಯಲ್ಲಿ ಕರ್ನಾಟಕದ ವಿಕಸನಗೊಳ್ಳುತ್ತಿರುವ ರಾಜಕೀಯ ಪರಿಸ್ಥಿತಿ ಮತ್ತು ಪಕ್ಷದೊಳಗೆ ಎರಡನೇ ಹಂತದ ಅಹಿಂದ ನಾಯಕತ್ವವನ್ನು ಉತ್ತೇಜಿಸುವ ತುರ್ತು ಅಗತ್ಯದ ಬಗ್ಗೆ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿ ಅಹಿಂದ ಮತಗಳು ಕ್ರೋಢೀಕರಿಸಲ್ಪಟ್ಟಿದ್ದರೂ, ಸಿದ್ದರಾಮಯ್ಯ ನಿರ್ಗಮನದ ನಂತರ ಆ ಒಗ್ಗಟ್ಟನ್ನು ಕಾಪಾಡಿಕೊಳ್ಳುವುದು ಗಂಭೀರ ಸವಾಲಾಗಬಹುದು ಎಂದು ಜಾರಕಿಹೊಳಿ ಒತ್ತಿ ಹೇಳಿದರು. ಪಕ್ಷದ ದೀರ್ಘಕಾಲೀನ ಸ್ಥಿರತೆಗೆ ಪರ್ಯಾಯ ನಾಯಕತ್ವವನ್ನು ಬಲಪಡಿಸುವುದು ಈಗ ಅತ್ಯಗತ್ಯ ಎಂದು ಅವರು ವಾದಿಸಿದ್ದಾರೆ ಎಂದು ತಿಳಿದುಬಂದಿದೆ.

ದೆಹಲಿಯಿಂದ ಹಿಂದಿರುಗಿದ ನಂತರ, ಜಾರಕಿಹೊಳಿ ರಾಜ್ಯಾದ್ಯಂತ ಪ್ರಚಾರ ಪ್ರಯತ್ನಗಳನ್ನು ಹೆಚ್ಚಿಸಿದ್ದಾರೆ, ತಮ್ಮ ಪ್ರವಾಸಗಳ ಸಮಯದಲ್ಲಿ ಅಹಿಂದ ಸಮುದಾಯದ ನಾಯಕರೊಂದಿಗೆ ಸಭೆಗಳನ್ನು ನಡೆಸುತ್ತಿದ್ದಾರೆ.

☞12

# ಮುಂದಿನ ಮುಖ್ಯಮಂತ್ರಿ ಜಿ. ಪರಮೇಶ್ವರ್?!



ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಕರ್ನಾಟಕದ ಮುಖ್ಯಮಂತ್ರಿಯಾಗುವ ಬಗ್ಗೆ ಪ್ರಸ್ತುತ ಯಾವುದೇ ಅಧಿಕೃತ ತೀರ್ಮಾನವಾಗಿಲ್ಲ. ಈ ಕುರಿತ ಇತ್ತೀಚಿನ ಪ್ರಮುಖ ಮಾಹಿತಿಗಳು ಹೀಗಿವೆ:

**ಹೈಕಮಾಂಡ್ ನಿರ್ಧಾರ**

ಮುಖ್ಯಮಂತ್ರಿ ಬದಲಾವಣೆಯ ಕುರಿತು ಯಾವುದೇ ನಿರ್ಧಾರವನ್ನು ಕಾಂಗ್ರೆಸ್ ಹೈಕಮಾಂಡ್ ತೆಗೆದುಕೊಳ್ಳುತ್ತದೆ ಎಂದು ಡಾ. ಜಿ. ಪರಮೇಶ್ವರ ಅವರು ಸ್ಪಷ್ಟಪಡಿಸಿದ್ದಾರೆ.

**ಲಾಬಿ ಮಾಡುವುದಿಲ್ಲ**

ತಮಗೆ ಬೆಂಬಲಿಗರು 'ಮುಂದಿನ ಮುಖ್ಯಮಂತ್ರಿ' ಎಂದು ಘೋಷಣೆ ಕೂಗುತ್ತಿರುವುದಕ್ಕೂ ತಮಗೂ ಸಂಬಂಧವಿಲ್ಲ. ಮತ್ತು ಈ ಹುದ್ದೆಗಾಗಿ ತಾವು ಯಾವುದೇ ಲಾಬಿ ನಡೆಸುತ್ತಿಲ್ಲ ಎಂದು ಫೆಬ್ರವರಿ 2026ರ ಕೊನೆಯಲ್ಲಿ ಅವರು ತಿಳಿಸಿದ್ದಾರೆ.

**ಸಾಮರ್ಥ್ಯದ ಬಗ್ಗೆ ವಿಶ್ವಾಸ**

ಕೆಪಿಸಿಸಿ ಅಧ್ಯಕ್ಷರಾಗಿ ಎಂಟು ವರ್ಷ ಸೇವೆ ಸಲ್ಲಿಸಿದ ಅನುಭವ ಮತ್ತು ಉಪಮುಖ್ಯಮಂತ್ರಿಯಾಗಿ ಕೆಲಸ ಮಾಡಿರುವ ಹಿನ್ನೆಲೆಯಲ್ಲಿ, ತಾವು ಈ ಹುದ್ದೆಗೆ ಅರ್ಹರು ಹಾಗೂ ಸಂದರ್ಭ ಬಂದಾಗ ಹೈಕಮಾಂಡ್ ನಿರ್ಧರಿಸಲಿದೆ ಎಂದು ಅವರು ಹೇಳಿದ್ದಾರೆ.

**ಪ್ರಸ್ತುತ ಸ್ಥಿತಿ**

ಪ್ರಸ್ತುತ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿದ್ದು, ಅವರು ಮಾರ್ಚ್ 6, 2026 ರಂದು ರಾಜ್ಯ ಬಜೆಟ್ ಮಂಡಿಸಲು ಸಿದ್ಧತೆ ನಡೆಸುತ್ತಿದ್ದಾರೆ. ರಾಜ್ಯ ನಾಯಕತ್ವದಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆಯ ಪರಿಸ್ಥಿತಿ ಇಲ್ಲ ಎಂದು ಪರಮೇಶ್ವರ ಅವರೇ ಇತ್ತೀಚೆಗೆ ಹೇಳಿದ್ದಾರೆ. ಒಟ್ಟಾರೆಯಾಗಿ, ಅವರ ಬೆಂಬಲಿಗರು ಮತ್ತು ಕೆಲವು ನಾಯಕರು ದಲಿತ ಮುಖ್ಯಮಂತ್ರಿ ಪರವಾಗಿ ಧ್ವನಿ ಎತ್ತುತ್ತಿದ್ದರೂ, ಅಂತಿಮ ನಿರ್ಧಾರ ಪಕ್ಷದ ವರಿಷ್ಠರ ಕೈಯಲ್ಲಿದೆ.

☯

# ದಲಿತರರನ್ನು ಮುಂದೆ ಬಿಟ್ಟು ಡಿಕೆಶಿ ವಿರುದ್ಧ ಚಕ್ರವ್ಯೂಹ?!

ರಾಜ್ಯದಲ್ಲಿ ನಾಯಕತ್ವ ಕಿತ್ತಾಟ ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತಿರುವುದು ನಿಮಗೆ ಗೊತ್ತೇ ಇದೆ. ಈ ನಡುವೆ ದೆಹಲಿಯಲ್ಲಿ ಡಿಸಿಎಂ ಡಿ.ಕೆ ಶಿವಕುಮಾರ್ ಅವರ ಸರಣಿ ಭೇಟಿ ಮತ್ತು ಮಾತುಕತೆ ಸಂಚಲನ ಮೂಡಿಸಿರುವುದು ಸುಳ್ಳಲ್ಲ. ಇದರ ಮಧ್ಯೆ ಸಿಎಂ ಸಿದ್ದರಾಮಯ್ಯ ಬಣದಲಿತ ಸಿಎಂ ಅಸ್ತ್ರ ಮುಂದಿಟ್ಟುಕೊಂಡು ಅಖಾಡಕ್ಕೆ ಇಳಿದಿದೆ.

ಡಿ.ಕೆ. ಶಿವಕುಮಾರ್ ಉರುಳಿಸುತ್ತಿರುವ ಸಿಎಂ ದಾಳಕ್ಕೆ ಪ್ರತ್ಯುತ್ತರವಾಗಿ ದಲಿತ ಸಿಎಂ ವಿಚಾರವನ್ನು ಮತ್ತಷ್ಟು ಮುನ್ನಲೆಗೆ ತರುತ್ತಿದೆ. ಈ ಮೂಲಕ ಡಿಕೆಶಿ ವಿರುದ್ಧ ಚಕ್ರವ್ಯೂಹ ಹೂಡಲು ಸಿದ್ದರಾಮಯ್ಯ ಬಣ ಎಲ್ಲಾ ಸಿದ್ದತೆ ನಡೆಸುತ್ತಿದೆ. ಆದರೆ ಅಂತಮ ಹಂತದ ಹೋರಾಟ ಎಂಬಂತೆ ಡಿಕೆಶಿ ತನ್ನ ಪ್ರಯತ್ನವನ್ನ ಮುಂದುವರೆಸಿದ್ದಾರೆ.

ಅವರು ದೆಹಲಿ ಮಟ್ಟದಲ್ಲೇ ನಾನಾ ಕಸರತ್ತುಗಳನ್ನು ನಡೆಯುತ್ತಿದ್ದಾರೆ. ಸ್ವಲ್ಪ ದಿನಗಳ ಹಿಂದೆ ಎಲ್ಲವೂ ತಣ್ಣಗಿದೆ ಎಂಬಂತಿದ್ದ ವಾತಾವರಣ ಇದೀಗ ಬಿಸಿ ಏರತೊಡಗಿದೆ. ಈ ನಡುವೆ ಡಿ.ಕೆ. ಶಿವಕುಮಾರ್ ವಿರುದ್ಧ ಸಿದ್ದರಾಮಯ್ಯ ಬಣ ಚಕ್ರವ್ಯೂಹ ರಚನೆ ಮಾಡುತ್ತಿದ್ದಾರೆ. ದಲಿತಾಸ್ತ್ರ ಪ್ರಯೋಗ ಮೂಲಕ ಅವರ ಸಿಎಂ ರೇಸ್‌ಗೆ ಕಡಿವಾಣ ಹಾಕಲು ಮುಂದಾಗಿದ್ದಾರೆ.

ಮುಂದಿನ ಮಾರ್ಚ್ ನಲ್ಲಿ ಬಜೆಟ್ ಮಂಡನೆ ಮಾಡಲು ಸಿಎಂ ಸಿದ್ದರಾಮಯ್ಯ ಸಿದ್ದತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಸಿದ್ದರಾಮಯ್ಯ ಸೈಲೆಂಟಾಗಿದ್ದರೂ ಅವರ ಸುತ್ತ ಮುತ್ತ ಇರುವ ಆಪ್ತರು ಸೈಲೆಂಟಾಗಿಲ್ಲ. ಡಿಕೆಶಿ ದೆಹಲಿ ಪ್ರವಾಸ ಹಾಗೂ ಹೈಕಮಾಂಡ್ ನಾಯಕರ ಭೇಟಿ ಬೆನ್ನಲ್ಲೇ ಈ ಬಣ ಸಕ್ರಿಯಗೊಂಡಿದೆ. ಸಚಿವರಾದ ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಶಾಸಕ ಕೆ ಎನ್ ರಾಜಣ್ಣ ಸೇರಿದಂತೆ ಪ್ರಮುಖರು ಈ ನಿಟ್ಟಿನಲ್ಲಿ ಭಿನ್ನ ಭಿನ್ನ ಪ್ರಯೋಗ ಮಾಡುತ್ತಿದ್ದಾರೆ.



ಅಹಿಂದ ಮತ ಬ್ಯಾಂಕ್ ನಂಬಿರುವ ಕಾಂಗ್ರೆಸ್‌ಗೆ ಸಿದರಾಮಯ್ಯ ಬಣ ಪ್ರಯೋಗ ಮಾಡುತ್ತಿರುವ ದಲಿತ ಸಿಎಂ ವಿಚಾರ ಕಡೆಗಣಿಸುವ ಹಾಗಿಲ್ಲ. ಈ ಹಿಂದೆ ಕೂಡಾ ನಾಯಕತ್ವ ಬದಲಾವಣೆ ವಿಚಾರ ಮುನ್ನಲೆಗೆ ಬಂದಾಗ ದಲಿತ ಸಿಎಂ ಅಸ್ತ್ರ ಪ್ರಯೋಗವಾಗಿತ್ತು.

ಇದೀಗ ಅದು ಪ್ರಬಲ ಅಸ್ತ್ರವಾಗಿ ಪ್ರಯೋಗ ಆಗುತ್ತಿದೆ. ದಲಿತ ಸಮುದಾಯದ ಹಿನ್ನೆಲೆಯ ನಾಯಕರು ಇದನ್ನು ಸೂಕ್ತ ಆಯುಧ ಎಂಬಂತೆ ಪ್ರಯೋಗ ಮಾಡುತ್ತಿದ್ದಾರೆ. ಈ ಮೂಲಕ ಪಕ್ಷದ ಹೈಕಮಾಂಡ್ ನಾಯಕರಿಗೆ ಸಂದೇಶ ರವಾನೆ ಮಾಡಲು ಶುರು ಮಾಡಿದ್ದಾರೆ.

ತೆರಮರೆಯಲ್ಲಿ ನಾನಾ ಕಸರತ್ತು ಮಸಲತ್ತು ನಡೆದಿದ್ದರೂ ಬಹಿರಂಗವಾಗಿ ಯಾವುದೇ ಕಚ್ಚಾಟ ಬೇಡ ಎಂದು ಹೈಕಮಾಂಡ್ ಸ್ಪಷ್ಟ ಸೂಚನೆ ನೀಡಿದ ಹಿನ್ನಲೆಯಲ್ಲಿ ತೆರೆಮರೆಯಲ್ಲಿ ಕಚ್ಚಾಟ ತೀವ್ರಗೊಂಡಿದೆ! ಹೇಳಿಕೆ ಪ್ರತಿ ಹೇಳಿಕೆಗಳು ಮುನ್ನಲೆಗೆ ಬರುತ್ತಿದೆ.

ತಮ್ಮ ಬಣದ ಶಾಸಕರ ಮೂಲಕ ನಾಯಕರು ಅಭಿಪ್ರಾಯ ರೂಪಿಸುವ ಪ್ರಯತ್ನ ನಡೆಸುತ್ತಿದ್ದಾರೆ. ನಾಯಕತ್ವ ಬದಲಾವಣೆ ಆದರಲ್ಲಿ ಅದು ಉಂಟು ಮಾಡುವ ಪ್ರತಿಕೂಲ ಪರಿಣಾಮಗಳ ಬಗ್ಗೆ ಒಂದು ಬಣ ಹೇಳಿಕೊಳ್ಳುತ್ತಿದ್ದರೆ, ನಾಯಕತ್ವ ಬದಲಾವಣೆಯ ಅಗತ್ಯ ಏನಿದೆ? ಎಂಬ ಬಗ್ಗೆ ಮತ್ತೊಂದು ಬಣ ವಾದ ಮಂಡಿಸುತ್ತಿದೆ. ಈ ನಡುವೆ ಡಿಕೆಶಿ ಎಲ್ಲಾ ರೀತಿಯ ಪ್ರಯೋಗಗಳ ಮೂಲಕ ಹೈಕಮಾಂಡ್ ಗಮನ ಸೆಳೆಯುವ ಪ್ರಯತ್ನ ನಡೆಸುತ್ತಿದ್ದಾರೆ.

☯

# ಎಲ್‌ಎಲ್‌ಬಿ ವಿದ್ಯಾರ್ಥಿಯ ಕೊಲೆ ಕೇಸ್ : ರೌಡಿಗೆ ಸಹಕರಿಸಿ ಸಸ್ಪೆಂಡ್ ಆದ ಭ್ರಷ್ಟ ಪೊಲೀಸ್ ಇನ್ಸ್‌ಪೆಕ್ಟರ್ ಯೋಗಾನಂದ!


ಭ್ರಷ್ಟ ಪಿಐ ಯೋಗಾನಂದ ಸೋನಾರ್

ಬೆಂಗಳೂರು
✍ಹೆಚ್.ಕೆ. ಮಹದೇವ್

ಕಾನೂನು ಎನ್ನುವುದು ಸಮಾಜದ ಪ್ರತಿಯೊಬ್ಬ ನಾಗರಿಕನಿಗೆ ರಕ್ಷಣಾ ಕವಚವಾಗಬೇಕು. ಆದರೆ, ಅದೇ ಕಾನೂನನ್ನು ಎಲ್‌ಎಲ್‌ಬಿ ವ್ಯಾಸಂಗ ಮಾಡುತ್ತಿದ್ದ


ಕೊಲೆಯಾದ ಎಲ್‌ಎಲ್‌ಬಿ ಸ್ಟೂಡೆಂಟ್ ರೇವಂತ್

ಯುವಕನೊಬ್ಬ, ಸಂಕಷ್ಟದಲ್ಲಿದ್ದ ತನ್ನ ಸ್ನೇಹಿತನ ಪರವಾಗಿ ನ್ಯಾಯಕ್ಕಾಗಿ ನಿಂತಿದ್ದಕ್ಕೇ ಪ್ರಾಣ ತೆಗೆಯಲು ಬಳಸಿದರೆ ಹೇಗೆ?! ಅದಕ್ಕಿಂತಲೂ ಮಿಗಿಲಾಗಿ, ಆ ಅನ್ಯಾಯಕರ ಹತ್ಯೆಯ ತನಿಖೆ ನಡೆಸಬೇಕಾದ ಪೊಲೀಸ್ ಅಧಿಕಾರಿಯೆ ಹಂತಕರೊಂದಿಗೆ ಕೈ ಜೋಡಿಸಿದರೆ ಏನರ್ಥ?! ಸೂಲಿಕುಂಟೆಯ 24 ವರ್ಷದ ಎಲ್‌ಎಲ್‌ಬಿ ವಿದ್ಯಾರ್ಥಿ ರೇವಂತ್ ಹತ್ಯೆ ಪ್ರಕರಣ ಕೇವಲ ಒಂದು ಕ್ರೈಂ ಸ್ಟೋರಿಯಲ್ಲ; ಇದು ನಮ್ಮ ಪೊಲೀಸ್ ವ್ಯವಸ್ಥೆಯಲ್ಲಿ ಅಡಗಿರುವ 'ವ್ಯವಸ್ಥಿತ ಅನ್ಯಾಯ' ಮತ್ತು 'ಅಪವಿತ್ರ ಮೈತ್ರಿ'ಯ ಕರಾಳ ಪ್ರತಿಬಿಂಬ! ಕಳೆದ 2024ರ ಸೆಪ್ಟೆಂಬರ್ ನಲ್ಲಿ ನಡೆದ ರೇವಂತ್ ಎಂಬ ಎಲ್‌ಎಲ್‌ಬಿ ಸ್ಟೂಡೆಂಟ್ ಭೀಕರ ಹತ್ಯೆ ಪ್ರಕರಣದ ತನಿಖೆ ವರ್ಷ ಕಳೆದರೂ ತಾರ್ಕಿಕ ಅಂತ್ಯ ಕಾಣದೆ ಹಳಿ ತಪ್ಪುತ್ತಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಿದೆ.

**'ರಾಜಿ' ಎಂಬ ಹೆಸರಿನಲ್ಲಿ ನಡೆದ ವ್ಯವಸ್ಥಿತ ಸಂಚು?!**

ರೇವಂತ್ ಹತ್ಯೆಯು ಆವೇಶದಲ್ಲಿ ನಡೆದ ಕೃತ್ಯವಲ್ಲ, ಬದಲಾಗಿ ಅತ್ಯಂತ ವ್ಯವಸ್ಥಿತವಾಗಿ ರೂಪಿಸಿದ ಸಂಚು. ರೇವಾ ಎಂಬ ರೌಡಿಯಿಂದ ತನ್ನ ಸ್ನೇಹಿತ ಸ್ಟಾಲಿನ್ ಮೇಲೆ ನಡೆದಿದ್ದ ಹಲ್ಲೆಯನ್ನು ಪ್ರಶ್ನಿಸಿ, ಆತನಿಗೆ ನ್ಯಾಯ ಕೊಡಿಸಲು ಪೊಲೀಸ್ ದೂರು ನೀಡಲು ರೇವಂತ್ ನೆರವಾಗಿದ್ದನಂತೆ. ಇದರಿಂದ ರೇವಾ ಗಡಿಪಾರ್ ಆಗಿದ್ದನಂತೆ!

ಸೆಪ್ಟೆಂಬರ್ 18, 2024ರಂದು ತಮಿಳುನಾಡಿನ ಬಾಗಲೂರಿನಲ್ಲಿ ರೌಡಿಶೀಟರ್ ರೇವಾ ಮತ್ತು ಆತನ ಗ್ಯಾಂಗ್ 'ರಾಜಿ ಮಾತುಕತೆ'ಯ ನಾಟಕವಾಡಿ, ಸಂಧಾನದ ನೆಪದಲ್ಲಿ,ಅವನ ಅಂಕಲ್ ಶ್ರೀನಿವಾಸ್ ಮೂಲಕ ತಮ್ಮಲ್ಲಿಗೆ ಕರೆಸಿಕೊಂಡ ಹಂತಕರು, ಅಂಕಲ್ ಕಣ್ಣೆದುರೇ ಆತನನ್ನು ಭೀಕರವಾಗಿ ಹತ್ಯೆ ಮಾಡಿದ್ದಾರೆ! ನ್ಯಾಯದ ಪರವಾಗಿ ಧ್ವನಿ ಎತ್ತಿದ ಒಬ್ಬ ಕಾನೂನು ವಿದ್ಯಾರ್ಥಿಯನ್ನು ಸಂಧಾನದ ಹೆಸರಿನಲ್ಲಿ ಬಲಿಪಶು ಮಾಡಿದ್ದು ಈ ವ್ಯವಸ್ಥೆಯ ಕ್ರೂರ ಮುಖಕ್ಕೆ ಸಾಕ್ಷಿ.....

**90 ದಿನಗಳ 'ರಹಸ್ಯ' ಮತ್ತು ಪೊಲೀಸರು ನೀಡಿದ ಉಡುಗೊರೆ!!**

ಈ ಪ್ರಕರಣವು ತಮಿಳುನಾಡಿನ ಸೂಳಗಿರಿಯಿಂದ ಬೆಂಗಳೂರಿನ ವರ್ತೂರು ಪೊಲೀಸ್ ಠಾಣೆಗೆ ವರ್ಗಾವಣೆಯಾದ ನಂತರ ಅಸಲಿ ಆಟ ಶುರುವಾಯಿತು. ವರ್ತೂರು ಪೊಲೀಸ್ ಇನ್ಸ್‌ಪೆಕ್ಟರ್ ಯೋಗಾನಂದ್ ಸೋನಾರ್ ವಿರುದ್ಧ ಈಗ ಕೇಳಿಬರುತ್ತಿರುವ ಆರೋಪಗಳು ಆಘಾತಕಾರಿಯಾಗಿವೆ.


ಸಿಪಿ ಸೀಮಂತ್‌ಕುಮಾರ್ ಸಿಂಗ್


ಅ॥ ಕಮೀಷನರ್ ಅಜಯ್ ಹಿಲೋರಿ

ಕಾನೂನಿನ ಪ್ರಕಾರ, ಯಾವುದೇ ಗಂಭೀರ ಅಪರಾಧ ನಡೆದ 90 ದಿನಗಳ ಒಳಗೆ ದೋಷಾರೋಪ ಪಟ್ಟಿ (ಚಾರ್ಜ್ ಶೀಟ್) ಸಲ್ಲಿಸುವುದು ಕಡ್ಡಾಯ. ಇಲ್ಲದಿದ್ದರೆ ಆರೋಪಿಗಳಿಗೆ 'ಡಿಫಾಲ್ಟ್ ಬೇಲ್' ಅಥವಾ ತಾಂತ್ರಿಕ ಜಾಮೀನು ಸಿಗುತ್ತದೆ. ಈ ಪ್ರಕರಣದಲ್ಲಿ ಪೊಲೀಸರು 90 ದಿನಗಳ ಕಾಲ ಚಾರ್ಜ್ ಶೀಟ್ ಸಲ್ಲಿಸದೆ ಮೌನಕ್ಕೆ ಶರಣಾಗಿದ್ದು ಕೇವಲ 'ಆಕಸ್ಮಿಕ' ಲೋಪವಲ್ಲ. ಬದಲಾಗಿ, ಇದು ಭ್ರಷ್ಟ ಪೊಲೀಸ್ ಇನ್ಸ್‌ಪೆಕ್ಟರ್ ಯೋಗಾನಂದ ಆರೋಪಿಗಳಿಗೆ ನೀಡಿದ 'ಪ್ಲಾನ್ಡ್ ಎಸ್ಕೇಪ್ ರೂಟ್' ಎಂಬ ಬಲವಾದ ಶಂಕೆ ವ್ಯಕ್ತವಾಗಿದೆ! ಈ ತಾಂತ್ರಿಕ ಲೋಪದ ಫಲವಾಗಿ ಜೈಲಿನಲ್ಲಿದ್ದ ಏಳು ಮಂದಿ ಹಂತಕರು ಅತ್ಯಂತ ಸುಲಭವಾಗಿ ಜಾಮೀನು ಪಡೆದು ಇಂದು ರಾಜಾರೋಷವಾಗಿ ತಿರುಗುತ್ತಿದ್ದಾರೆ!




**ರೌಡಿಶೀಟರ್‌ಗಳಿಗೆ 'ಡೋರ್ ಸ್ಟೆಪ್' ಸೇವೆ ಕಾಕಿ ಮತ್ತು ಕ್ರೈಂ ಮೈತ್ರಿ!**

ಸಾಮಾನ್ಯ ನಾಗರಿಕನೊಬ್ಬ ಸಣ್ಣ ದೂರನ್ನು ನೀಡಲು ಠಾಣೆಯ ಮೆಟ್ಟಿಲು ಹತ್ತಿದರೆ ಗಂಟೆಗಟ್ಟಲೆ ಕಾಯಿಸುವ ಪೊಲೀಸರು, ಹಣವಿರೋ ರೌಡಿಶೀಟರ್‌ಗಳ ಮುಂದೆ ಹೇಗೆ ಮಂಡಿಯೂರುತ್ತಾರೆ ಎಂಬುದಕ್ಕೆ ಈ ಪ್ರಕರಣವೇ ಸಾಕ್ಷಿ. ಜಾಮೀನಿನ ಷರತ್ತಿನಂತೆ ಮುಖ್ಯ ಆರೋಪಿ ರೌಡಿ ಶೀಟರ್ ರೇವಾ ಪ್ರತಿದಿನ ಠಾಣೆಗೆ ಬಂದು ಸಹಿ ಹಾಕಬೇಕಿತ್ತು. ಆದರೆ ಇಲ್ಲಿ ಆಗುತ್ತಿರುವುದೇ ಬೇರೆ.


ರೌಡಿ ಶೀಟರ್ ರೇವಾ

'ನನ್ನ ಮಗನನ್ನು ಕೊಂದ ಹಂತಕ ಠಾಣೆಗೆ ಹೋಗುತ್ತಿಲ್ಲ, ಬದಲಾಗಿ ಇನ್ಸ್‌ಪೆಕ್ಟರ್ ಯೋಗಾನಂದನ ಪ್ರಭಾವದಿಂದ ಪೊಲೀಸರೇ ಆತನ ಐಷಾರಾಮಿ ಅಪಾರ್ಟ್‌ಮೆಂಟ್‌ಗೆ ಹೋಗಿ ಸಹಿ ಪಡೆದುಕೊಂಡು ಬರುತ್ತಿದ್ದಾರೆ. ಇದು ನ್ಯಾಯಕ್ಕೆ ಮಾಡುತ್ತಿರುವ ಅವಮಾನವಲ್ಲವೇ?' ಎಂದು ಸಂತ್ರಸ್ತನ ಕುಟುಂಬ ಆಕ್ರೋಶ ವ್ಯಕ್ತಪಡಿಸಿದೆ! ಸಾಮಾನ್ಯ ಜನರಿಗೆ ಸಿಗದ ಈ 'ವಿಐಪಿ ಟ್ರೀಟ್‌ಮೆಂಟ್' ರೌಡಿಗಳಿಗೆ ಸಿಗುತ್ತಿದೆ ಎಂದರೆ, ಪೊಲೀಸ್ ಇಲಾಖೆಯ ಘನತೆ ಎಲ್ಲಿಗೆ ಬಂದು ನಿಂತಿದೆ ಎಂಬುದು ಸ್ಪಷ್ಟವಾಗುತ್ತದೆ!

**ಕಾನೂನು ವಿದ್ಯಾರ್ಥಿಗೇ ಸಿಗದ ಕಾನೂನು ರಕ್ಷಣೆ..!!**

ಇಡೀ ಪ್ರಕರಣದ ಅತ್ಯಂತ ಕಹಿ ಸತ್ಯವೇನೆಂದರೆ, ಸೂಲಿಕುಂಟೆಯ ಸರಸ್ವತಿ ಎಂಬ ಮಹಿಳೆಯ ಒಬ್ಬನೇ ಮಗ ರೇವಂತ್ ಎಲ್‌ಎಲ್ ಬಿ ವಿದ್ಯಾರ್ಥಿಯಾಗಿದ್ದ. ನ್ಯಾಯ ಮತ್ತು ಅನ್ಯಾಯದ ನಡುವಿನ ವ್ಯತ್ಯಾಸವನ್ನು ಪುಸ್ತಕಗಳಲ್ಲಿ ಓದುತ್ತಿದ್ದ ಯುವಕನಿಗೆ, ತನ್ನದೇ ಪ್ರಕರಣದಲ್ಲಿ ನ್ಯಾಯ ಸಿಗುತ್ತಿಲ್ಲ! ಕಾನೂನು ಪುಸ್ತಕಗಳನ್ನು ಓದುತ್ತಿದ್ದ ಕೈಗಳು ಇಂದು ವ್ಯವಸ್ಥೆಯ ಕುತಂತ್ರದಿಂದಾಗಿ ಮಣ್ಣಾಗಿವೆ.


ಡಿಸಿಪಿ ಬಿ.ಎಲ್. ಶ್ರೀಹರಿಬಾಬು


ಡಿಸಿಪಿ ರಾಜಾ ಇಮಾಮ್ ಖಾಸೀಂ

ಒಬ್ಬ ಕಾನೂನು ಕಲಿಯುತ್ತಿದ್ದ ವಿದ್ಯಾರ್ಥಿಯ ಹತ್ಯೆ ಪ್ರಕರಣದಲ್ಲೇ ಇಷ್ಟೊಂದು ಬಹಿರಂಗ ಲೋಪಗಳು ನಡೆಯುತ್ತಿದ್ದರೆ, ಇನ್ನು ಯಾವುದೇ ಪ್ರಭಾವವಿಲ್ಲದ ಸಾಮಾನ್ಯ ಜನರ ಗತಿ ಏನು? ರೇವಂತ್ ಕುಟುಂಬ ಇಂದು ಉನ್ನತ ಮಟ್ಟದ ತನಿಖೆಗಾಗಿ ಬೀದಿಗಿಳಿದು ಹೋರಾಡಬೇಕಾದ ಸ್ಥಿತಿ ಬಂದಿರುವುದು ನಮ್ಮ ಪ್ರಜಾಪ್ರಭುತ್ವಕ್ಕೆ ಒದಗಿದ ದೊಡ್ಡ ದುರಂತವೇ ಸರಿ.

**ತನಿಖೆಯೋ ಅಥವಾ ಹಂತಕರ ರಕ್ಷಣೆಯೋ?!**

ಯಾವಾಗ ಭ್ರಷ್ಟ ಅಧಿಕಾರಿಗಳು ಮತ್ತು ಅಪರಾಧ ಲೋಕದ ರೌಡಿಗಳು ಒಂದೇ ನಾಣ್ಯದ ಎರಡು ಮುಖಗಳಾಗುತ್ತಾರೋ, ಆಗ ನ್ಯಾಯ ಎಂಬುದು ಕೇವಲ ನೆಪಮಾತ್ರವಾಗುತ್ತದೆ. ಇನ್ಸ್‌ಪೆಕ್ಟರ್ ಯೋಗಾನಂದ್ ಸೋನಾರ್ ವಿರುದ್ಧ ಕೇಳಿಬರುತ್ತಿರುವ ಆರೋಪಗಳು ಕೇವಲ ಒಬ್ಬ ವ್ಯಕ್ತಿಯ ಮೇಲಿನ ಆರೋಪಗಳಲ್ಲ, ಇದು ಇಡೀ ವ್ಯವಸ್ಥೆಯಲ್ಲಿರುವ ರೋಗದ ಲಕ್ಷಣಗಳು. ರೇವಂತ್ ಹತ್ಯೆ ಪ್ರಕರಣದಲ್ಲಿ ಆರೋಪಿಗಳಿಗೆ ಸಿಗುತ್ತಿರುವ ಈ 'ರಾಯಲ್ ಟ್ರೀಟ್‌ಮೆಂಟ್' ತಕ್ಷಣ ನಿಲ್ಲಬೇಕಿದೆ ಮತ್ತು ಈ ಭೀಕರ ಕೊಲೆ ಪ್ರಕರಣದ ಮರು ತನಿಖೆಯಾಗಬೇಕಿದೆ.


ಪ್ರತ್ಯಕ್ಷ ಸಾಕ್ಷಿ ಶ್ರೀನಿವಾಸ್

ನಮ್ಮ ಪೊಲೀಸ್ ವ್ಯವಸ್ಥೆಯು ರಕ್ಷಕನ ಪಾತ್ರವನ್ನು ಕಳಚಿಟ್ಟು, ಭಕ್ಷಕರೊಂದಿಗೆ ಕೈ ಕುಲುಕುತ್ತಿದ್ದರೆ, ಸಾಮಾನ್ಯ ಪ್ರಜೆಗಳು ನ್ಯಾಯಕ್ಕಾಗಿ ಇನ್ಯಾರ ಬಾಗಿಲನ್ನು ಬಡಿಯಬೇಕು ಹೇಳಿ?!

**ಸೋದರ ಮಾವನೇ ಹಂತಕ!!**

ಗಮನಿಯ ಸಂಗತಿ ಏನೆಂದರೆ, ಕೊಲೆಯಾಗಿರುವ ಎಲ್‌ಎಲ್‌ಬಿ ವಿದ್ಯಾರ್ಥಿ ರೇವಂತ (24)ನಿಗೆ ರೌಡಿ ಶೀಟರ್ ರೇವಾ ಸೋದರ ಮಾವನಗಬೇಕು! ತನ್ನ ದಾರಿಗೆ ಮುಳ್ಳಾಗಿದ್ದಾನೆ ಅಂತ ಮಿಸ್ ಅಂಡರ್ ಸ್ಟ್ಯಾಂಡ್ ಮಾಡಿಕೊಂಡು ನರರೂಪದ ರಾಕ್ಷಸ ರೇವಾ ಸೋದರಿಯ ಮಗನನ್ನೇ ಭೀಕರವಾಗಿ ಕೊಲ್ಲೆಗೈದಿದ್ದಾನೆ!

ತಾನು ಗ್ಯಾಂಗ್ ಕಟ್ಟಿಕೊಂಡು ರೇವಂತನ ಕೊಂದು ಆರೋಪವನ್ನು ಈ ಕೊಲೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಶ್ರೀನಿವಾಸ್ ತಲೆಗೆ ಕಟ್ಟಿ, ತಮಿಳುನಾಡಿನ ಸೇಲಂ ಜೈಲಿಗೆ

☞14

**ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತ ವರ್ತನೆ ಆರೋಪದ ಮೇಲೆ ಸ್ವಯಂ ಘೋಷಿತ ದೇವಮಾನವ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಕಲ್ಯಾಣ ಕರ್ನಾಟಕದಲ್ಲಿ ಭಾರೀ ಸಂಚಲನ ಮೂಡಿಸಿದೆ. ವೈರಲ್ ವಿಡಿಯೋ ಆಧಾರವಾಗಿ ಗೋಗಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಅವರ ನೇರ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಯುತ್ತಿದೆ.**



## ಅಪ್ರಾಪ್ತ ಬಾಲಕಿ ಜೊತೆ ಅನುಚಿತ ವರ್ತನೆ ಆರೋಪ

# ಸ್ವಯಂ ಘೋಷಿತ ದೇವಮಾನವ ಮುತ್ಯಾ ವಿರುದ್ಧ ಪೋಕ್ಸೋ ಕೇಸ್!

**ಯಾದಗಿರಿ**

✍ ವೀರನಗೌಡ

ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆಂಬ ಗಂಭೀರ ಆರೋಪದ ಮೇಲೆ ಸ್ವಯಂ ಘೋಷಿತ ದೇವಮಾನವ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿರುವುದು ರಾಜ್ಯದಾದ್ಯಂತ ತೀವ್ರ ಚರ್ಚೆಗೆ ಕಾರಣವಾಗಿದೆ. ಶಹಾಪುರ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ದೂರಿನ ಮೇರೆಗೆ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಗೋಗಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ಪ್ರಕರಣ ದಾಖಲಾಗುತ್ತಿದ್ದಂತೆಯೇ ಮಲ್ಲಿಕಾರ್ಜುನ ಮುತ್ಯಾ ಬಂಧನವಾಗುವ ಸಾಧ್ಯತೆಗಳ ಬಗ್ಗೆ ಮಾತುಕತೆಗಳು ಜೋರಾಗಿವೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ವಿಡಿಯೋ ದೃಶ್ಯಗಳು ಪ್ರಕರಣಕ್ಕೆ ಮತ್ತಷ್ಟು ಗಂಭೀರತೆಯನ್ನು ತಂದಿದ್ದು, ಅಪ್ರಾಪ್ತ ಬಾಲಕಿಯ ಸುರಕ್ಷತೆ ಹಾಗೂ ಗೌರವದ ಪ್ರಶ್ನೆಯನ್ನು ಸಾರ್ವಜನಿಕ ಚರ್ಚೆಯ ಕೇಂದ್ರಬಿಂದುಗೊಳಿಸಿದೆ.



ವೈರಲ್ ಆಗಿರುವ ವಿಡಿಯೋದಲ್ಲಿ ಮಲ್ಲಿಕಾರ್ಜುನ ಮುತ್ಯಾ ತಮ್ಮ ತೊಡೆಯ ಮೇಲೆ ಅಪ್ರಾಪ್ತ ಬಾಲಕಿಯನ್ನು ಕುಳ್ಳಿರಿಸಿಕೊಂಡಿರುವ ದೃಶ್ಯಗಳು ಕಂಡು ಬಂದಿದ್ದು, ಈ ದೃಶ್ಯಗಳನ್ನು ಅನೇಕರು ಅಸಭ್ಯ ಮತ್ತು ಅಸಂಗತವೆಂದು ಟೀಕಿಸಿದ್ದಾರೆ. ಈ ವಿಡಿಯೋ ಹೊರ ಬಿದ್ದ ಬಳಿಕ ಮಹಿಳಾ ಹಾಗೂ ಮಕ್ಕಳ ಹಕ್ಕುಗಳ ಪರ ಹೋರಾಟಗಾರರು ತಕ್ಷಣ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಇದರ ಬೆನ್ನಲ್ಲೇ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಧ್ಯಕ್ಷ ಶಶಿಧರ ಕೋಸಂಬೆ ಅವರು ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಪತ್ರ ಬರೆದಿದ್ದರು. ಆಯೋಗದ ಈ ಹಸ್ತಕ್ಷೇಪದ ನಂತರ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಅವರು ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿ, ಅಪ್ರಾಪ್ತ ಬಾಲಕಿಗೆ ಸಂಬಂಧಿಸಿದ ಆರೋಪಗಳನ್ನು ಯಾವುದೇ ರೀತಿಯ ಸಡಿಲಿಕೆ ಇಲ್ಲದೆ ತನಿಖೆ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ. 'ಪೋಕ್ಸೋ ಕಾಯ್ದೆಯಡಿ ದಾಖಲಾಗಿರುವ ಪ್ರಕರಣವನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ. ವಿಡಿಯೋ ದೃಶ್ಯಗಳ ತಾಂತ್ರಿಕ ವಿಶ್ಲೇಷಣೆ, ಸಾಕ್ಷ್ಯಾಧಾರಗಳ ಸಂಗ್ರಹ, ಪೋಷಕರ ಹಾಗೂ ಸಂಬಂಧಪಟ್ಟವರ ಹೇಳಿಕೆಗಳನ್ನು ದಾಖಲಿಸಲಾಗುತ್ತಿದೆ. ಕಾನೂನಿನ ಪ್ರಕಾರ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ' ಎಂದು ಎಸ್ಪಿ ಪೃಥ್ವಿಕ್ ಶಂಕರ್ ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಮಹಲ್ ರೋಜಾ ಪ್ರದೇಶದಲ್ಲಿ ನೆಲೆಸಿರುವ ಮಲ್ಲಿಕಾರ್ಜುನ ಮುತ್ಯಾ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಾತ್ರವಲ್ಲದೆ ನೆರೆಯ ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿಯೂ 'ಪವಾಡ ಪುರುಷ' ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. ಆಶೀರ್ವಾದ, ಭವಿಷ್ಯ ನುಡಿಗಳು ಹಾಗೂ ಪವಾಡಗಳ ಮೂಲಕ ಜನರನ್ನು ಆಕರ್ಷಿಸುತ್ತಿದ್ದ ಮುತ್ಯಾ ಅವರ ಮಠಕ್ಕೆ ಸಾವಿರಾರು ಭಕ್ತರು ಭೇಟಿ ನೀಡುತ್ತಿದ್ದರು. ಅನೇಕರು ತಮ್ಮ ವೈಯಕ್ತಿಕ ಹಾಗೂ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎಂಬ ನಂಬಿಕೆಯಿಂದ ಮಠಕ್ಕೆ ಆಗಮಿಸುತ್ತಿದ್ದರು. ಆದರೆ ಇದೀಗ ಅಪ್ರಾಪ್ತ ಬಾಲಕಿಯ ಕುರಿತ ಗಂಭೀರ ಆರೋಪ ಕೇಳಿಬಂದ ಬಳಿಕ ಮುತ್ಯಾ ಅವರ ವ್ಯಕ್ತಿತ್ವ ಮತ್ತು ಇಮೇಜ್ ಬಗ್ಗೆ ಗಂಭೀರ ಪ್ರಶ್ನೆಗಳು ಉದ್ಭವವಾಗಿವೆ.

ಪ್ರಕರಣ ದಾಖಲಾಗಿದ್ದರೂ ಸಹ ಮಠದತ್ತ ಭಕ್ತರ ಹರಿವು ಸಂಪೂರ್ಣವಾಗಿ ಕಡಿಮೆಯಾಗಿಲ್ಲ. ಮುತ್ಯಾ ಪರವಾಗಿ ನಿಂತಿರುವ ಕೆಲ ಭಕ್ತರು, 'ಅವರು ಈ ರೀತಿಯ ಕೃತ್ಯ ಮಾಡುವ ವ್ಯಕ್ತಿಯಲ್ಲ. ನಮ್ಮ ಜೀವನದಲ್ಲಿ ಸಾಕಷ್ಟು ಒಳ್ಳೆಯದಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋವನ್ನು ತಪ್ಪಾಗಿ ತಿರುಚಿ ಬಿಂಬಿಸಲಾಗಿದೆ' ಎಂದು ಹೇಳುತ್ತಿದ್ದಾರೆ. ಇನ್ನೊಂದೆಡೆ, ಮಹಿಳಾ ಹಾಗೂ ಮಕ್ಕಳ ಹಕ್ಕುಗಳ ಸಂಘಟನೆಗಳು, ಅಪ್ರಾಪ್ತ ಬಾಲಕಿಯ ವಿಚಾರದಲ್ಲಿ ಧಾರ್ಮಿಕ ನಂಬಿಕೆ ಅಥವಾ ಭಾವನಾತ್ಮಕ ವಾದಗಳಿಗೆ ಅವಕಾಶ ನೀಡದೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸುತ್ತಿವೆ.

ವೈರಲ್ ವಿಡಿಯೋದಲ್ಲಿರುವ ಬಾಲಕಿಯ ಪೋಷಕರು ಮಲ್ಲಿಕಾರ್ಜುನ ಮುತ್ಯಾ ಅವರ ಸಂಬಂಧಿಕರೆಂದು ತಿಳಿದುಬಂದಿದೆ. ಈ ಕುರಿತು ಮುತ್ಯಾ ಸಹೋದರ ಪರಶುರಾಮ ಮುತ್ಯಾ ಪ್ರತಿಕ್ರಿಯಿಸಿ, ಬಾಲಕಿ ಸಹೋದರನಂತೆ ಪ್ರೀತಿಯಿಂದ ಇದ್ದಳು, ಯಾವುದೇ ದುರುದ್ದೇಶ ಇರಲಿಲ್ಲ ಎಂದು ಹೇಳಿದ್ದಾರೆ. 'ಬಾಲಕಿಯ ತಂದೆಯೇ ಖುಷಿಯಿಂದ ವಿಡಿಯೋ ಮಾಡಿದ್ದಾರೆ. ಅದನ್ನು ಕಿಡಿಗೇಡಿಗಳು ದುರುಪಯೋಗಪಡಿಸಿಕೊಂಡು ತಪ್ಪಾಗಿ ವೈರಲ್ ಮಾಡಿದ್ದಾರೆ. ಮುತ್ಯಾ ಎಲ್ಲೂ ಪರಾರಿ ಆಗಿಲ್ಲ' ಎಂದು ಕುಟುಂಬ ಸ್ಪಷ್ಟಪಡಿಸಿದೆ. ಈ ಹೇಳಿಕೆ ಪ್ರಕರಣಕ್ಕೆ ಮತ್ತೊಂದು ಆಯಾಮ ನೀಡಿದೆ.



ಎಸ್ಪಿ ಪೃಥ್ವಿಕ್ ಶಂಕರ್

ಪೊಲೀಸ್ ಮೂಲಗಳ ಪ್ರಕಾರ, ಪೋಕ್ಸೋ ಕಾಯ್ದೆಯಡಿ ದಾಖಲಾಗಿರುವ ಪ್ರಕರಣವಾದ್ದರಿಂದ ತನಿಖೆ ಅತ್ಯಂತ ಕಟ್ಟುನಿಟ್ಟಾಗಿ ನಡೆಯುತ್ತಿದೆ. ಯಾದಗಿರಿ ಎಸ್ಪಿ ಪೃಥ್ವಿಕ್ ಶಂಕರ್ ಅವರ ನೇರ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಯುತ್ತಿದ್ದು, ಯಾವುದೇ ರೀತಿಯ ರಾಜಕೀಯ ಅಥವಾ ಧಾರ್ಮಿಕ ಒತ್ತಡಕ್ಕೆ ಒಳಗಾಗದೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೊಲೀಸ್ ಇಲಾಖೆ ಸ್ಪಷ್ಟಪಡಿಸಿದೆ. ತನಿಖೆ ಪೂರ್ಣಗೊಳ್ಳುವವರೆಗೆ ಯಾವುದೇ ಪೂರ್ವ ನಿರ್ಧಾರಕ್ಕೆ ಬರಲಾಗುವುದಿಲ್ಲ ಎಂಬ ನಿಲುವು ತೆಗೆದುಕೊಳ್ಳಲಾಗಿದೆ.



ಈ ಪ್ರಕರಣದ ನಡುವೆ ಮಲ್ಲಿಕಾರ್ಜುನ ಮುತ್ಯಾ ಅವರ ಹಳೆಯ ರಾಜಕೀಯ ಸಂಪರ್ಕಕ್ಕೆ ಸಂಬಂಧಿಸಿದ ಆಡಿಯೋ ಒಂದು ಮತ್ತೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 2023ರ ಕರ್ನಾಟಕ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ದಾಖಲಾಗಿದೆ ಎನ್ನಲಾದ ಈ ಆಡಿಯೋದಲ್ಲಿ ಗುರುಮಠಕಲ್ ಕ್ಷೇತ್ರದ ಮಾಜಿ ಸಚಿವ ಬಾಬುರಾವ್ ಚಿಂಚನಸೂರು ಅವರು ಮುತ್ಯಾ ಅವರ ಬಳಿ ಗೆಲುವಿಗಾಗಿ ಆಶೀರ್ವಾದ ಕೇಳುತ್ತಿರುವುದು ಕೇಳಿಸುತ್ತದೆ. ಆಡಿಯೋದಲ್ಲಿನ ಮಾತುಗಳು ಮುತ್ಯಾ ಅವರ ಅಹಂಕಾರ ಮತ್ತು ರಾಜಕೀಯ ಪ್ರಭಾವದ ಚರ್ಚೆಗೆ ಕಾರಣವಾಗಿವೆ.

ವಿಪರ್ಯಾಸವೆಂದರೆ, ಆ ಚುನಾವಣೆಯಲ್ಲಿ ಬಾಬುರಾವ್ ಚಿಂಚನಸೂರು ಅವರು ಸೋಲನುಭವಿಸಿದ್ದು, ಮುತ್ಯಾ ನೀಡಿದ್ದ ಆಶೀರ್ವಾದ ಫಲಿಸಿಲ್ಲ ಎಂಬ ಚರ್ಚೆ ಇದೀಗ ಮತ್ತೆ ಮುನ್ನೆಲೆಗೆ ಬಂದಿದೆ. ಹಳೆಯ ಆಡಿಯೋ ಮತ್ತು ಇತ್ತೀಚಿನ ಪೋಕ್ಸೋ ಪ್ರಕರಣ ಒಂದೇ ವೇಳೆ ಹೊರಬಂದಿರುವುದರಿಂದ, ಮುತ್ಯಾ ಅವರ 'ಪವಾಡ ಪುರುಷ' ಇಮೇಜ್‌ಗೆ ಭಾರೀ ಬಿರುಕು ಬಿದ್ದಿದೆ. ಧಾರ್ಮಿಕ ನಂಬಿಕೆಯನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲಾಗುತ್ತಿತ್ತೆ ಎಂಬ ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಜೋರಾಗಿವೆ.

ಪೋಕ್ಸೋ ಪ್ರಕರಣ ದಾಖಲಾಗುತ್ತಿದ್ದಂತೆಯೇ ಮಲ್ಲಿಕಾರ್ಜುನ ಮುತ್ಯಾ ಅಜ್ಞಾತ ಸ್ಥಳದಿಂದ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿ, ತಮ್ಮ ಮೇಲೆ ಬಂದ ಆರೋಪಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿದ್ದಾರೆ. ಇದರ ಬೆನ್ನಲ್ಲೇ ಮಹಾರಾಷ್ಟ್ರದ ಸೊಲ್ಲಾಪುರದಿಂದ ಬಾಲಕಿ ಪೋಷಕರೂ ವಿಡಿಯೋ ಬಿಡುಗಡೆ ಮಾಡಿ, 'ನಾವು ಮುತ್ಯಾ ಭಕ್ತರು. ಯಾವುದೇ ತಪ್ಪು ನಡೆದಿಲ್ಲ. ವಿಡಿಯೋವನ್ನು ಕಿಡಿಗೇಡಿಗಳು ತಿರುಚಿದ್ದಾರೆ' ಎಂದು ಹೇಳಿದ್ದಾರೆ. ಪರಸ್ಪರ ವಿರುದ್ಧ ಹೇಳಿಕೆಗಳು ಪ್ರಕರಣವನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತಿವೆ.



ಒಟ್ಟಾರೆ, ಅಪ್ರಾಪ್ತ ಬಾಲಕಿಯ ಕುರಿತ ಗಂಭೀರ ಆರೋಪ, ಪೋಕ್ಸೋ ಪ್ರಕರಣ, ಪೊಲೀಸ್ ತನಿಖೆ, ಧಾರ್ಮಿಕ ನಂಬಿಕೆ, ಕುಟುಂಬದ ಪ್ರತಿಕ್ರಿಯೆ, ರಾಜಕೀಯ ಸಂಪರ್ಕದ ಹಳೆಯ ಆಡಿಯೋ ಹಾಗೂ ಸಾಮಾಜಿಕ ಜಾಲತಾಣಗಳ ಪಾತ್ರ ಎಲ್ಲಾ ಸೇರಿ ಈ ಪ್ರಕರಣ ರಾಜ್ಯ ಮಟ್ಟದ ದೊಡ್ಡ ವಿಚಾರವಾಗಿ ಪರಿಣಮಿಸಿದೆ. ಯಾದಗಿರಿ ಎಸ್ಪಿ ಪೃಥ್ವಿಕ್ ಶಂಕರ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ ತನಿಖೆ ಯಾವ ತಿರುವು ಪಡೆಯುತ್ತದೆ, ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಯಾವ ರೀತಿಯ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಮೇಲೆ ಇಡೀ ರಾಜ್ಯದ ಗಮನ ನೆಟ್ಟಿದೆ. ☯

# ಆನ್‌ಲೈನ್ ಬೆಟ್ಟಿಂಗ್‌ನ ಭೀಕರ ಪರಿಣಾಮ ವೃದ್ಧೆಯ ಕೊಲೆ ಮಾಡಿ ಚಿನ್ನ ದೋಚಿದ!

**ಆನ್‌ಲೈನ್ ಬೆಟ್ಟಿಂಗ್ ಮತ್ತು ಗೇಮಿಂಗ್ ಚಟಕ್ಕೆ ಬಲಿಯಾದ ಯುವಕನೊಬ್ಬ ಸಾಲದ ಒತ್ತಡದಿಂದ ಮಾನವೀಯತೆಯ ಎಲ್ಲ ಮಿತಿಗಳನ್ನು ದಾಟಿ ವೃದ್ಧ ಮಹಿಳೆಯನ್ನು ಕೊಲೆ ಮಾಡಿ ಆಕೆಯ ಮೈಮೇಲಿದ್ದ ಚಿನ್ನಾಭರಣಗಳನ್ನು ದೋಚಿದ ಭೀಕರ ಘಟನೆ ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಅರುಂಡಿ ಗ್ರಾಮದಲ್ಲಿ ನಡೆದಿದ್ದು, ಈ ಪ್ರಕರಣವು ಸಮಾಜದ ಮುಂದೆ ಆನ್‌ಲೈನ್ ಜೂಜಾಟದ ಅಪಾಯವನ್ನು ಮತ್ತೊಮ್ಮೆ ಗಂಭೀರವಾಗಿ ಎತ್ತಿ ಹಿಡಿದಿದೆ. ಶಿಕಾರಿಪುರ ತಾಲ್ಲೂಕಿನ ಕಾಳೇನಹಳ್ಳಿ ಗ್ರಾಮದ ಕೆ. ಅಭಿಷೇಕ್ (23) ಎಂಬ ಯುವಕ ಈ ಪ್ರಕರಣದ ಆರೋಪಿ ಎಂದು ಪೊಲೀಸರು ಪತ್ತೆಹಚ್ಚಿದ್ದು, ಆತನ ಬಂಧನದೊಂದಿಗೆ ಪ್ರಕರಣಕ್ಕೆ ತೆರೆ ಎಳೆದಿದ್ದಾರೆ.**


ಕೊಲೆಯಾದ ಕಮಲಮ್ಮ


ಆರೋಪಿ ಅಭಿಷೇಕ್

**ದಾವಣಗೆರೆ**
ಹಿರಿಯೂರು ರಫೀಕ್

ಅಭಿಷೇಕ್ ಮೂಲತಃ ಮಧ್ಯಮ ವರ್ಗದ ಕುಟುಂಬದಿಂದ ಬಂದವನಾಗಿದ್ದು, ಉತ್ತಮ ಭವಿಷ್ಯ ಕಟ್ಟಿಕೊಳ್ಳಬೇಕಿದ್ದ ಯುವಕನಾಗಿದ್ದ. ಬಿ.ಕಾಂ. ವ್ಯಾಸಂಗವನ್ನು ಆರಂಭಿಸಿದ್ದ ಅವನು, ಶಿಕ್ಷಣವನ್ನು ಮಧ್ಯದಲ್ಲೇ ಕೈಬಿಟ್ಟು ತನ್ನ ಊರಾದ ಕಾಳೇನಹಳ್ಳಿಯಲ್ಲಿ ಅಡಿಕೆ ಖೇಣಿ ನಡೆಸುವ ಕೆಲಸಕ್ಕೆ ಇಳಿದಿದ್ದ. ಆರಂಭದಲ್ಲಿ ಸಣ್ಣ ಮಟ್ಟದಲ್ಲಿ ಜೀವನ ಸಾಗಿಸುತ್ತಿದ್ದ ಅಭಿಷೇಕ್, ಆನ್‌ಲೈನ್ ಬೆಟ್ಟಿಂಗ್ ಮತ್ತು ಗೇಮಿಂಗ್‌ಗೆ ಜೋತು ಬೀಳುತ್ತಿದ್ದಂತೆ ಅವನ ಬದುಕು ಸಂಪೂರ್ಣವಾಗಿ ದಿಕ್ಕು ತಪ್ಪಿತು. ಐಪಿಎಲ್ ಸೇರಿದಂತೆ ವಿವಿಧ ಆನ್‌ಲೈನ್ ಬೆಟ್ಟಿಂಗ್ ಆಟಗಳಿಗೆ ತನ್ನ ದುಡಿದ ಹಣವನ್ನೆಲ್ಲ ಹೂಡಿ, ಕೆಲವೇ ಸಮಯದಲ್ಲಿ ಸಂಪೂರ್ಣವಾಗಿ ನಷ್ಟ ಅನುಭವಿಸಿದ್ದಾನೆ. ಹಣ ಕಳೆದುಕೊಂಡ ಬಳಿಕವೂ ಬೆಟ್ಟಿಂಗ್‌ನಿಂದ ಹೊರಬರಲು ಸಾಧ್ಯವಾಗದೆ, ಮತ್ತೆ ಹಣ ಸಿಗಬಹುದು ಎಂಬ ಭ್ರಮೆಯಲ್ಲಿ ಮತ್ತಷ್ಟು ಸಾಲ ಮಾಡುತ್ತಿದ್ದಾನೆ. ಅಡಿಕೆ ವ್ಯಾಪಾರ ಮಾಡುತ್ತಿದ್ದೇನೆ, ದೊಡ್ಡ ಲಾಭ ಬರುತ್ತದೆ ಎಂದು ಹೇಳಿ ಪರಿಚಿತರು, ಸ್ನೇಹಿತರು ಹಾಗೂ ಇತರರಿಂದ ಸುಮಾರು 15ರಿಂದ 20 ಲಕ್ಷ ರೂಪಾಯಿ ವರೆಗೆ ಸಾಲ ಮಾಡಿಕೊಂಡಿದ್ದಾನೆ.

ಕಾಲ ಕಳೆದಂತೆ ಸಾಲಗಾರರು ಹಣ ವಾಪಸ್ ಕೇಳಲು ಆರಂಭಿಸಿದಾಗ ಅಭಿಷೇಕ್ ತೀವ್ರ ಒತ್ತಡಕ್ಕೆ ಸಿಲುಕಿದ್ದಾನೆ. ಸಾಲ ತೀರಿಸಲು ಯಾವುದೇ ಮಾರ್ಗ ಕಾಣದೆ, ತನ್ನ ಊರನ್ನು ಬಿಟ್ಟು ಸುಮಾರು ಆರು ತಿಂಗಳ ಕಾಲ ಅಲೆಮಾರಿಯಾಗಿ ಬದುಕಲು ಆರಂಭಿಸಿದ್ದಾನೆ. ಈ ಅವಧಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾನೆ. ಕೆಲವೊಮ್ಮೆ ಶಾಲೆಗಳಲ್ಲಿ, ಕೆಲವೊಮ್ಮೆ ಬಸ್ ನಿಲ್ದಾಣಗಳಲ್ಲಿ ರಾತ್ರಿ ಕಳೆದಿದ್ದಾನೆ ಎಂಬ ಅಂಶಗಳು ತನಿಖೆಯಲ್ಲಿ ಬೆಳಕಿಗೆ ಬಂದಿವೆ. ಈ ಅಲೆಮಾರಿ ಜೀವನದಲ್ಲೇ ಅವನ ಮನಸ್ಸು ಸಂಪೂರ್ಣವಾಗಿ ಅಪರಾಧದತ್ತ ತಿರುಗಿದ್ದು, ಹಣಕ್ಕಾಗಿ ಯಾವುದೇ ಕೃತ್ಯಕ್ಕೂ ಸಿದ್ಧನಾಗುವ ಮನಸ್ಥಿತಿಗೆ ತಲುಪಿದ್ದಾನೆ.


ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸ್ ಅಧಿಕಾರಿಗಳು

ಫೆಬ್ರವರಿ 2ರಂದು ಶಿವಮೊಗ್ಗದಿಂದ ಬಸ್‌ನಲ್ಲಿ ಹೊನ್ನಾಳಿಗೆ ಬಂದ ಅಭಿಷೇಕ್, ಅದೇ ದಿನ ಹೊನ್ನಾಳಿ ತಾಲ್ಲೂಕಿನ ಅರುಂಡಿ ಗ್ರಾಮದಲ್ಲಿ ದೇವರಪಲ್ಲಕ್ಕಿ ಉತ್ಸವ ನಡೆಯುತ್ತಿರುವುದನ್ನು ಗಮನಿಸಿದ್ದಾನೆ. ಉತ್ಸವದ ಸಂಭ್ರಮ, ಜನರ ಓಡಾಟ, ಗದ್ದಲದ ನಡುವೆ ಸುಲಭವಾಗಿ ಹಣ ಅಥವಾ ಚಿನ್ನ ಸಿಗಬಹುದು ಎಂಬ ಲೆಕ್ಕಾಚಾರ ಅವನ ಮನಸ್ಸಿನಲ್ಲಿ ಮೂಡಿದೆ. ಇದೇ ಸಂದರ್ಭದಲ್ಲಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ 64 ವರ್ಷದ ಕಮಲಮ್ಮ ಎಂಬ ವೃದ್ಧೆಯನ್ನು ಗಮನಿಸಿದ ಅವನು, ಆಕೆ ಧರಿಸಿದ್ದ ಬೆಲೆಬಾಳುವ ಚಿನ್ನಾಭರಣಗಳನ್ನು ನೋಡಿ ಕಳ್ಳತನ ಮಾಡುವ ಯೋಚನೆ ರೂಪಿಸಿಕೊಂಡಿದ್ದಾನೆ. ಕಮಲಮ್ಮ ಪತಿ ಮರಣಾನಂತರ ಬಹುತೇಕ ಒಂಟಿಯಾಗಿ ಅಥವಾ ಮಕ್ಕಳ ಮನೆಗಳಲ್ಲಿ ವಾಸಿಸುತ್ತಿದ್ದ ವೃದ್ಧೆಯಾಗಿದ್ದು, ಆ ದಿನ ಉತ್ಸವದ ನಿಮಿತ್ತ ಮನೆಯಲ್ಲೇ ಇದ್ದಳು.

ರಾತ್ರಿ ವೇಳೆಗೆ ಎಲ್ಲರೂ ಮಲಗಿದ ಬಳಿಕ ಅಭಿಷೇಕ್ ಕಮಲಮ್ಮನ ಮನೆಯ ಹಿಂಬಾಗಿಲಿನಿಂದ ಒಳನುಗ್ಗಿದ್ದಾನೆ. ಮನೆ ಒಳಗೆ ಯಾರೂ ಎಚ್ಚರವಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು, ನಿದ್ದೆಯಲ್ಲಿದ್ದ ವೃದ್ಧೆಯ ಬಳಿ ಹೋಗಿದ್ದಾನೆ. ಮೊದಲಿಗೆ ಕಳ್ಳತನ ಮಾತ್ರ ಮಾಡುವ ಉದ್ದೇಶದಿಂದ ಬಂದಿದ್ದ ಅವನು, ವೃದ್ಧೆ ಎಚ್ಚರಗೊಂಡರೆ ಅಪಾಯ ಎಂದು ಭಾವಿಸಿ ಆಕೆಯ ಕುತ್ತಿಗೆ ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ. ನಂತರ ಆಕೆಯ ಮೈಮೇಲಿದ್ದ ಸುಮಾರು 76 ಗ್ರಾಂ ಚಿನ್ನಾಭರಣಗಳನ್ನು ದೋಚಿಕೊಂಡು ಸ್ಥಳದಿಂದ ಪರಾರಿಯಾಗಿದ್ದಾನೆ. ಈ ಕೃತ್ಯದಿಂದಾಗಿ ಒಂದು ನಿರಪರಾಧ ಜೀವ ಬೆಟ್ಟಿಂಗ್ ಚಟಕ್ಕೆ ಬಲಿಯಾದದ್ದು ಗ್ರಾಮಸ್ಥರಲ್ಲಿ ಆಘಾತ ಉಂಟುಮಾಡಿದೆ.

ಪ್ರಾರಂಭದಲ್ಲಿ ಕಮಲಮ್ಮನ ಸಾವು ಹೃದಯಾಘಾತದಿಂದ ಸಂಭವಿಸಿರಬಹುದು ಎಂದು ಊಹಿಸಲಾಗಿತ್ತು. ಆದರೆ ಆಕೆಯ ಮೈಮೇಲಿದ್ದ ಚಿನ್ನಾಭರಣಗಳು ಕಾಣೆಯಾಗಿದ್ದರಿಂದ ಸಂಬಂಧಿಕರಿಗೆ ಅನುಮಾನ ಬಂದು, ಇದು ಸಹಜ ಸಾವು ಅಲ್ಲ, ಕೊಲೆ ಎಂದು ನಿರ್ಧರಿಸಿ ತಕ್ಷಣ ಹೊನ್ನಾಳಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನಂತರ ಶಿವಮೊಗ್ಗದಲ್ಲಿ ಮರಣೋತ್ತರ ಪರೀಕ್ಷೆ ಮಾಡಿಸಲಾಯಿತು. ಮರಣೋತ್ತರ ಪರೀಕ್ಷೆಯಲ್ಲಿ ಉಸಿರುಗಟ್ಟಿಸಿ ಕೊಲೆ ಮಾಡಿರುವುದು ದೃಢಪಟ್ಟ ನಂತರ ಪ್ರಕರಣದ ಸ್ವರೂಪ ಸಂಪೂರ್ಣವಾಗಿ ಬದಲಾಗಿದೆ. ನ್ಯಾಮತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ದಾವಣಗೆರೆ ಪೊಲೀಸರು ಎಲ್ಲಾ ಆಯಾಮಗಳಲ್ಲಿ ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ತನಿಖೆಯ ವೇಳೆ ಮೊದಲು ಆಸ್ತಿ ವಿಚಾರ, ಕುಟುಂಬದ ಒಳಜಗಳ ಅಥವಾ ಪರಿಚಿತರಿಂದ ನಡೆದ ಕೃತ್ಯ ಇರಬಹುದೆಂದು ಶಂಕಿಸಲಾಗಿತ್ತು. ಆದರೆ ತಾಂತ್ರಿಕ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ. ಸಿಸಿಟಿವಿ ಕ್ಯಾಮರಾಗಳ ಪರಿಶೀಲನೆ, ಮೊಬೈಲ್ ಚಲನವಲನ, ಹಾಗೂ ಗ್ರಾಮಕ್ಕೆ ಸಂಬಂಧವಿಲ್ಲದ ವ್ಯಕ್ತಿಯ ಓಡಾಟದ ಮಾಹಿತಿ ಪೊಲೀಸರ ಗಮನ ಸೆಳೆದಿದೆ. ಈ ತಾಂತ್ರಿಕ ಸಾಕ್ಷ್ಯಗಳ ಆಧಾರದಲ್ಲಿ ಊರಿಗೆ ಮೊದಲ ಬಾರಿ ಬಂದಿದ್ದ ಅನುಮಾನಾಸ್ಪದ ವ್ಯಕ್ತಿಯ ಹೆಜ್ಜೆಗುರುತು ಪತ್ತೆಯಾಗಿದ್ದು, ಅದು ನೇರವಾಗಿ ಅಭಿಷೇಕ್ ಕಡೆಗೆ ಕೊಂಡೊಯ್ದಿದೆ. ನಂತರ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕೊಲೆ ಮತ್ತು ಚಿನ್ನದ ದೋಚಾಟದ ಸಂಪೂರ್ಣ ಸತ್ಯವನ್ನು ಆತನೇ ಬಿಚ್ಚಿಟ್ಟಿದ್ದಾನೆ.


ಎಸ್ಪಿ ಹೆಚ್.ಟಿ. ಶೇಖರ್

ವಿಚಾರಣೆಯಲ್ಲಿ ಅಭಿಷೇಕ್, ಕದ್ದ ಚಿನ್ನವನ್ನು ಬ್ಯಾಂಕ್‌ನಲ್ಲಿ ಇಟ್ಟು, ಅದರಿಂದ ಪಡೆದ ಹಣವನ್ನು ಮತ್ತೆ ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್‌ಗೆ ಡೆಪಾಸಿಟ್ ಮಾಡಿ ಆಡಿದ್ದಾನೆ ಎಂಬ shocking ಮಾಹಿತಿ ಹೊರಬಂದಿದೆ. ಅಂದರೆ, ಕೊಲೆ ಮಾಡಿ ದೊರಕಿದ ಹಣವನ್ನೂ ಸಹ ಅವನು ತನ್ನ ಜೂಜಾಟದ ಚಟಕ್ಕೆ ಬಳಸಿದ್ದಾನೆ. ಈ ಮೂಲಕ ಆನ್‌ಲೈನ್ ಬೆಟ್ಟಿಂಗ್ ಎಷ್ಟರ ಮಟ್ಟಿಗೆ ಮಾನವನ ಮನಸ್ಸನ್ನು ಹಾಳುಮಾಡಬಹುದು ಎಂಬುದಕ್ಕೆ ಈ ಪ್ರಕರಣ ಜೀವಂತ ಉದಾಹರಣೆಯಾಗಿದೆ. ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಕದ್ದ 76 ಗ್ರಾಂ ಚಿನ್ನಾಭರಣಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಪ್ರಕರಣದ ಕುರಿತು ಮಾತನಾಡಿದ ಹೆಚ್.ಟಿ. ಶೇಖರ್, ನ್ಯಾಮತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ವೃದ್ಧೆಯ ಕೊಲೆ ಪ್ರಕರಣವನ್ನು ತಾಂತ್ರಿಕ ಹಾಗೂ ಕ್ಷೇತ್ರಮಟ್ಟದ ತನಿಖೆಯ ಮೂಲಕ ಯಶಸ್ವಿಯಾಗಿ ಬೇಧಿಸಲಾಗಿದೆ ಎಂದು ತಿಳಿಸಿದರು. ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್‌ಗೆ ಜೋತು ಬಿದ್ದಿದ್ದ ಆರೋಪಿ, ಸಾಲದ ಒತ್ತಡದಿಂದ ಈ ಅಮಾನುಷ ಕೃತ್ಯ ಎಸಗಿದ್ದಾನೆ ಎಂದು ಅವರು ಹೇಳಿದರು. ಪ್ರಕರಣವನ್ನು ಕಡಿಮೆ ಸಮಯದಲ್ಲಿ ಪತ್ತೆಹಚ್ಚಿದ ನ್ಯಾಮತಿ ಪೊಲೀಸ್ ಸಿಬ್ಬಂದಿಯ ಕಾರ್ಯಕ್ಷಮತೆಯನ್ನು ಅವರು ಮುಕ್ತಕಂಠದಿಂದ ಶ್ಲಾಘಿಸಿದರು.

ಇದಲ್ಲದೆ, ಇದೇ ಅವಧಿಯಲ್ಲಿ ದಾವಣಗೆರೆ ಜಿಲ್ಲೆಯ ನ್ಯಾಮತಿ, ಚನ್ನಗಿರಿ, ಸಂತೆಬೆನ್ನೂರು ಹಾಗೂ ಕೆಟಿಜೆ ನಗರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ದಾಖಲಾಗಿದ್ದ ಸ್ವತ್ತು ಕಳವು, ಕೊಲೆ, ಡಕಾಯಿತಿ ಸೇರಿದಂತೆ ವಿವಿಧ ಪ್ರಕರಣಗಳನ್ನು ಪೊಲೀಸರು ಯಶಸ್ವಿಯಾಗಿ ಬೇಧಿಸಿದ್ದಾರೆ. ಈ ಎಲ್ಲ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 11 ಆರೋಪಿಗಳಿಂದ 534.76 ಗ್ರಾಂ ಬಂಗಾರದ ಆಭರಣಗಳು, 639.56 ಗ್ರಾಂ ಬೆಳ್ಳಿ ಆಭರಣಗಳು, ಒಂದು ಅರ್ಮಾನಿ ಎಕ್ಸ್‌ಚೇಂಜ್ ವಾಚ್, ಒಂದು ಜಾನುವಾರು ಸೇರಿದಂತೆ ಸುಮಾರು 70.61 ಲಕ್ಷ ರೂಪಾಯಿ ಮೌಲ್ಯದ ಸ್ವತ್ತನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ವಿವರಿಸಿದ್ದಾರೆ. ಈ ಸಾಧನೆಗಳು ಜಿಲ್ಲೆಯ ಪೊಲೀಸ್ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ತೋರಿಸುವಂತಿದ್ದು, ಸಾರ್ವಜನಿಕರಲ್ಲಿ ಭದ್ರತೆಯ ಭರವಸೆ ಮೂಡಿಸಿದೆ.

ಒಟ್ಟಿನಲ್ಲಿ, ಆನ್‌ಲೈನ್ ಬೆಟ್ಟಿಂಗ್ ಮತ್ತು ಗೇಮಿಂಗ್ ಎಂಬುದು ಕೇವಲ ಮನರಂಜನೆ ಅಲ್ಲ, ಅದು ನಿಯಂತ್ರಣ ತಪ್ಪಿದಾಗ ಮಾನವ ಜೀವನವನ್ನೇ ನಾಶಮಾಡುವ ಅಪಾಯಕಾರಿ ಚಟವಾಗುತ್ತದೆ ಎಂಬುದನ್ನು ಈ ಪ್ರಕರಣ ಸ್ಪಷ್ಟವಾಗಿ ತೋರಿಸಿದೆ. ಉತ್ತಮ ಶಿಕ್ಷಣ ಪಡೆದು ಸುಂದರ ಬದುಕು ಕಟ್ಟಿಕೊಳ್ಳಬೇಕಿದ್ದ ಯುವಕನೊಬ್ಬ, ಜೂಜಾಟದ ಹುಚ್ಚಿಗೆ ಬಲಿಯಾಗಿ ಕೊನೆಗೆ ಕೊಲೆ ಆರೋಪಿಯಾಗಿ ಜೈಲು ಸೇರುವಂತಾಗಿರುವುದು ಸಮಾಜದ ಮುಂದಿರುವ ದೊಡ್ಡ ಎಚ್ಚರಿಕೆಯಾಗಿದೆ.


ವಿವಿಧ ಪ್ರಕರಣಗಳಿಂದ ಪೊಲೀಸರು ವಶಪಡಿಸಿಕೊಂಡಿರುವ ನಗದು ಮತ್ತು ಚಿನ್ನಾಭರಣ


**ಬೈಕ್ ಕಂಡರೆ ತುಂಬಾ ಇಷ್ಟ ಪಡುತ್ತಿದ್ದ ಯುವಕನೊಬ್ಬನಿಗೆ ಮನೆಯವರು ಬೈಕ್ ಕೊಡಿಸಿಲ್ಲವೆಂಬ ಕಾರಣಕ್ಕೆ ಬೇರೆಯವರ ಬೈಕ್‌ಗಳನ್ನು ಓಡಿಸಿಕೊಂಡಿದ್ದು, ಮುಂದೆ ಹಣ ಸಂಪಾದನೆ ಮಾಡಿ ಸ್ವಂತ ಬೈಕ್‌ವೊಂದನ್ನು ತೆಗೆದುಕೊಳ್ಳಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದನು. ಟೆಂಪೋ ಡ್ರೈವರ್ ಆದ ಇವನಿಗೆ ಕಂಪನಿಯೊಂದರ ಸೆಕ್ಯೂರಿಟಿ ಗಾರ್ಡ್ ಪರಿಚಯವಾಗಿ ಅವನೊಂದಿಗೆ ಸಲಿಗೆ ಬೆಳೆಸಿಕೊಂಡು ಅವನ ಬೈಕ್‌ನ್ನು ಓಡಿಸಿಕೊಂಡಿದ್ದನು. ದಿನಗಳು ಕಳೆದಂತೆ ಅವನಿಗೆ ಬೈಕ್ ಕೊಡದೆ ಇವನೇ ಯಾವಾಗಲು ಓಡಿಸಿಕೊಂಡಿದ್ದರಿಂದ ಸೆಕ್ಯೂರಿಟಿ ಗಾರ್ಡ್‌ಗೆ ಬೇಸರವಾಗಿ ಇನ್ನು ಮುಂದೆ ಬೈಕ್ ಕೊಡುವುದಿಲ್ಲವೆಂದು ಹೇಳಿದಕ್ಕೆ ಕೋಪಗೊಂಡ ಟೆಂಪೋ ಡ್ರೈವರ್ ಸೆಕ್ಯೂರಿಟಿ ಗಾರ್ಡ್‌ಗೆ ಒಂದು ಗತಿ ಕಾಣಿಸಿ ಅವನ ಬೈಕ್‌ನ್ನು ತನ್ನದಾಗಿಸಿಕೊಳ್ಳಬೇಕೆಂದು ಪ್ಲಾನ್ ಮಾಡಿ ಮದ್ಯಪಾನ ಮಾಡೋಣವೆಂದು ಹೇಳಿ ಕೆರೆಕಟ್ಟೆ ಮೇಲೆ ಕಂಠ ಪೂರ್ತಿ ಕುಡಿಸಿ ನಶೆಯಲ್ಲಿದ್ದವನ ತಲೆಗೆ ಕಲ್ಲಿನಿಂದ ಹೊಡೆದು ಸಾಯಿಸಿ ಮೃತದೇಹವನ್ನು ಕೆರೆಗೆ ತಳ್ಳಿ ಬೈಕ್‌ನೊಂದಿಗೆ ಪರಾರಿಯಾಗಿದ್ದ ಟೆಂಪೋ ಡ್ರೈವರ್‌ನನ್ನು ವೇಮಗಲ್ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**


# ಬೈಕ್ ಆಸೆಗಾಗಿ ಸೆಕ್ಯೂರಿಟಿ ಗಾರ್ಡ್ ಕೊಲೆ ಮಾಡಿದ ಟೆಂಪೋ ಡ್ರೈವರ್ ಅರೆಸ್ಟ್!

**ಕೋಲಾರ**

✍ಕೋಲಾರ ಮಂಜು


ಎಸ್ಪಿ ಕನ್ನಿಕಾ ಸುಕ್ರಿವಾಲ್



ಎಎಸ್ಪಿ ರವಿಶಂಕರ್


ಮುನಿರಾಜು ಬದುಕಿದ್ದಾಗ

ಕೋಲಾರ ತಾಲ್ಲೂಕು ನರಸಾಪುರ ಹೋಬಳಿಗೆ ಸೇರಿದ ಉದ್ದಪ್ಪನಹಳ್ಳಿ ಗ್ರಾಮದ ಮುನಿರಾಜು (40) ರವರು ಗೀತಾ ಎಂಬುವವರನ್ನು ಮದುವೆಯಾಗಿದ್ದು ಇವರಿಗೆ ಇಬ್ಬರು ಮಕ್ಕಳಿರುತ್ತಾರೆ. ಇವರಿಗೆ ಇರುವ ಸ್ವಲ್ಪ ಜಮೀನಿನಲ್ಲಿ ಒಣಬೇಸಾಯ ಮಾಡಿಕೊಂಡಿದ್ದರು. ಜೊತೆಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ನರಸಾಪುರ, ಕೈಗಾರಿಕಾ ಪ್ರದೇಶವಾದ ಮೇಲ್ಲೆ, ನೂರಾರು ಕಂಪನಿಗಳು ಪ್ರಾರಂಭವಾಗಿ ಸಾವಿರಾರು ಜನರು ಕೆಲಸ ಮಾಡುವಂತಾಯಿತು. ಕಳೆದ ಮೂರು ವರ್ಷಗಳ ಹಿಂದೆ, ಉದ್ದಪ್ಪನ ಹಳ್ಳಿ ಗೇಟ್ ಸಮೀಪ ಓಂ ಲಾಜಿಸ್ಟಿಕ್ಸ್ ಎಂಬ ಕಂಪನಿಯೊಂದು ಪ್ರಾರಂಭವಾಗಿದ್ದು ಮುನಿರಾಜು ಪರಿಚಯಸ್ಥರ ಮೂಲಕ ಕಂಪನಿಯ ಸೆಕ್ಯೂರಿಟಿ ಸಾರ್ಕ್ ಆಗಿ ಕೆಲಸಕ್ಕೆ ಸೇರಿಕೊಂಡರು. ಬೆಳಿಗ್ಗೆ 8 ಗಂಟೆಗೆ ಕೆಲಸಕ್ಕೆ ಹೋದರೆ ಮತ್ತೆ ರಾತ್ರಿ 8 ಗಂಟೆಗೆ ಮನೆಗೆ ಬರುತ್ತಿದ್ದರು. ಕೆಲವೊಂದು ಸಾರಿ ನೈಟ್ ಶಿಫ್ಟ್ ಇರುತ್ತಿದ್ದು, ರಾತ್ರಿ ಕೆಲಸಕ್ಕೆ ಹೋದರೆ ಮತ್ತೆ ಬೆಳಿಗ್ಗೆ ಮನೆಗೆ ಬರುತ್ತಿದ್ದರು. ಸೆಕ್ಯೂರಿಟಿ ಗಾರ್ಡ್‌ಗಳು ರಜಾ ಹಾಕಿದ್ದರೆ ಡೇ ಅಂಡ್ ನೈಟ್ ಶಿಫ್ಟ್ ಮಾಡಬೇಕಾಗಿತ್ತು.


ಮುನಿರಾಜುವಿನ ಮೃತದೇಹ


ಡಿಸೆಂಬರ್ 31ರಂದು ಎಂದಿನಂತೆ ಬೆಳಿಗ್ಗೆ 8 ಗಂಟೆಗೆ ಕೆಲಸಕ್ಕೆ ಹೋದವರು ಮತ್ತೆ ರಾತ್ರಿ 9 ಗಂಟೆಯಾದರೂ ವಾಪಸ್ಸು ಮನೆಗೆ ಬರಲಿಲ್ಲ. ಆಗ ಪತ್ನಿ ಗೀತಾರವರು ನಾದಿನಿ ಸುಮಾರವರ ಫೋನ್‌ನಿಂದ ಹಲವು ಸಲ ಕರೆ ಮಾಡಿದರೂ ಸಹ ಫೋನ್ ತೆಗೆದು ಮಾತನಾಡಲಿಲ್ಲ. ನಂತರ ಸ್ವಲ್ಪ ಸಮಯ ಬಿಟ್ಟು ಮತ್ತೆ ಫೋನ್ ಮಾಡಿದ್ದಾಗ ಗಂಡ ಮುನಿರಾಜುರವರ ಫೋನ್ ಸ್ವಿಚ್ ಆಫ್ ಆಗಿತ್ತು. ಡೇ ಶಿಫ್ಟ್ ಮುಗಿಸಿಕೊಂಡು ಮತ್ತೆ ನೈಟ್ ಶಿಫ್ಟ್ ಮಾಡಿಕೊಂಡು ಒಟ್ಟಿಗೆ ಬೆಳಿಗ್ಗೆ ಮನೆಗೆ ಬರಬಹುದೆಂದು ಪತ್ನಿ ಗೀತಾ ಗಂಡನಿಗಾಗಿ ಕಾಯದೆ ಮಕ್ಕಳೊಂದಿಗೆ ಊಟ ಮಾಡಿ ಮಲಗಿಕೊಂಡರು. ಮರುದಿನ ಬೆಳಿಗ್ಗೆ 8 ಗಂಟೆಯಾದರೂ ಗಂಡ ಮುನಿರಾಜುವಿನ ಸುಳಿವೇ ಇಲ್ಲ. ಗಂಡನ ಫೋನ್ ಮಾಡಿದರೆ ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆಂದು ಬರುತ್ತಿದ್ದು, ಗಂಡನನ್ನು ಹುಡುಕಿಕೊಂಡು ಕಂಪನಿ ಬಳಿಗೆ ಹೋದ ಪತ್ನಿ ಗೀತಾ ಗಂಡನ ಬಗ್ಗೆ ಕೇಳಲಾಗಿ, ಸೆಕ್ಯೂರಿಟಿ ಗಾರ್ಡ್ ಮುನಿರಾಜುರವರು ಡೇ ಶಿಫ್ಟ್ ಮುಗಿಸಿಕೊಂಡು ಹೋಗಿರುವುದಾಗಿ ಕಂಪನಿಯ ವ್ಯವಸ್ಥಾಪಕರು ತಿಳಿಸಿದರು. ಅಲ್ಲಿಂದ ಮನೆಗೆ ಬಂದು ನೋಡಲಾಗಿ ಗಂಡ ಮುನಿರಾಜು ಬಂದಿರಲಿಲ್ಲ. ಗಂಡ ಕೆಲಸ ಮುಗಿಸಿಕೊಂಡು ಬೇರೆ ಊರಿನಲ್ಲಿರುವ ಸಂಬಂಧಿಕರ ಮನೆಗೆ ಹೋಗಿರಬಹುದೆಂದು ಕೆಲವು ಸಂಬಂಧಿಕರ ಮನೆಗಳಿಗೆ ಫೋನ್ ಮಾಡಿ ವಿಚಾರಿಸಿದರೂ ಆದರೆ ಏನು ಪ್ರಯೋಜನವಾಗಲಿಲ್ಲ. ಗಂಡ ನೆನ್ನೆಯಿಂದ ಕಾಣದೆ ಇರುವುದನ್ನು ನೋಡಿದ ಗೀತಾಗೆ ಗಾಬರಿಯಾಗಿ ಜನವರಿ 2ರಂದು ವೇಮಗಲ್ ಪೊಲೀಸ್ ಠಾಣೆಗೆ ಹಾಜರಾಗಿ ಗಂಡ ಮುನಿರಾಜುರವರು ಓಂ ಲಾಜಿಸ್ಟಿಕ್ಸ್ ಕಂಪನಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದು ನೆನ್ನೆ ಬೆಳಿಗ್ಗೆ ಕೆಲಸಕ್ಕೆ ಹೋದವರು ಮತ್ತೆ ಮನೆಗೆ ವಾಪಸ್ಸು ಬರಲಿಲ್ಲ. ನಾವು ಎಲ್ಲಾ ಕಡೆಗಳಲ್ಲಿ ಹುಡುಕಾಡಿದ್ದು ಗಂಡ ನಾಪತ್ತೆಯಾಗಿರುವುದರಿಂದ ತಾವುಗಳು ಅವರನ್ನು ಹುಡುಕಿ ಕೊಡಬೇಕಾಗಿ ದೂರು ನೀಡಿದರು. ಪಿಎಸ್‌ಐ ಎಂ. ಸುನೀತಾದೇವಿಯವರು ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡರು.



ಪಿಐ ಬಿ.ಪಿ. ಮಂಜು

ನಂತರ ಜನವರಿ 3ರಂದು ಮಧ್ಯಾಹ್ನ ಗೀತಾರವರು ಮನೆಯಲ್ಲಿದ್ದಾಗ ನರಸಾಪುರ ಕೆರೆಯಲ್ಲಿ ತನ್ನ ಗಂಡ ಮುನಿರಾಜುರವರ ಮೃತದೇಹ ತೇಲುತ್ತಿದೆ ಎಂದು ಊರಿನಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಈ ವಿಚಾರವನ್ನು ತಿಳಿದುಕೊಂಡ ನಾನು ಮತ್ತು ನಮ್ಮ ಭಾವ ನಾಗರಾಜುರವರು ನರಸಾಪುರ ಕೆರೆಯ ಬಳಿಗೆ ಹೋಗಿ ನೋಡಿದಾಗ, ನನ್ನ ಗಂಡ ಮುನಿರಾಜುರವರ ಮೃತದೇಹ ಬೋರಲಾಗಿ ನೀರಿನಲ್ಲಿ ತೇಲುತ್ತಿತ್ತು. ಆನಂತರ ನಮ್ಮೂರಿನ ಮುನಿಯಪ್ಪ ಮತ್ತು ಲಕ್ಷ್ಮಿನಾರಾಯಣರವರುಗಳೂ ಸಹ ಬಂದರು. ಅಗ್ನಿಶಾಮಕ ದಳದವರನ್ನು ಸ್ಥಳಕ್ಕೆ ಕರೆಸಿ ಮೃತದೇಹವನ್ನು ಹೊರಗಡೆಗೆ ತೆಗೆಸಿದ್ದು, ಗಂಡ ಮುನಿರಾಜುರವರ ತಲೆಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಬಲಗಾಲಿಗೆ ವೈರ್ ಕಟ್ಟಿರುವುದು ಕಂಡು ಬಂದಿದ್ದು, ಸ್ಥಳದ ಮಹಜರ್ ನಡೆಸಿದ ಮೇಲೆ ಮೃತದೇಹವನ್ನು ಕೋಲಾರದ ಎಸ್‌ಎನ್‌ಆರ್ ಆಸ್ಪತ್ರೆಗೆ ಸಾಗಿಸಿ, ತನ್ನ ಗಂಡನ ಸಾವಿನ ಬಗ್ಗೆ ಅನುಮಾನ ಇರುವುದಾಗಿ ಭಾವ ನಾಗರಾಜ್‌ರವರು ದೂರು ನೀಡಿದರು. ಯುಡಿಆರ್ ಸಂಖ್ಯೆ 01/2026 ಕಲಂ 194(3)(iv) ಬಿಎನ್‌ಎಸ್ 2023ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ಹಿರಿಯ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದರು.

ಸ್ಥಳಕ್ಕೆ ಎಸ್ಪಿ ಕನ್ನಿಕಾ ಸುಕ್ರಿವಾಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಪಿಐ ಮಂಜು ಮತ್ತು ಸಿಬ್ಬಂದಿ ವರ್ಗದವರು ಹಾಜರಾಗಿ ಸ್ಥಳ ಪರಿಶೀಲಿಸಿದ ನಂತರ ಕೋಲಾರ ಜಿಲ್ಲಾ ಆಸ್ಪತ್ರೆ ಎಸ್‌ಎನ್‌ಆರ್‌ಗೆ ಹೋಗಿ ಪಂಚರು ಮತ್ತು ವಾರಸುದಾರರ ಸಮಕ್ಷಮದಲ್ಲಿ ಪಂಚನಾಮೆ ನಡೆಸಿದ ಮೇಲೆ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆ ನಡೆಸಿ ಶವವನ್ನು ವಾರಸುದಾರರಿಗೆ ನೀಡಲಾಯಿತು. ಗಂಡನ ಶವಸಂಸ್ಕಾರವನ್ನು ಗ್ರಾಮದ ಸ್ಮಶಾನದಲ್ಲಿ ಮಾಡಲಾಯಿತು. ಮರುದಿನ ಗೀತಾ ವೇಮಗಲ್ ಪೊಲೀಸ್ ಠಾಣೆಗೆ ಹಾಜರಾಗಿ ಗ್ರಾಮದ ಬೈರೇಗೌಡ ಎನ್ನುವವರು ಡಿಸೆಂಬರ್ 31ರಂದು ರಾತ್ರಿ ಸುಮಾರು 9.20 ಗಂಟೆ ಸಮಯದಲ್ಲಿ ನರಸಾಪುರದಿಂದ ಉದ್ದಪ್ಪನಹಳ್ಳಿ ಕಡೆಗೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಮೇಡಿಮಲ್ಲಸಂದ್ರ ಗ್ರಾಮದ ಗಂಗರಾಜು ಎಂಬುವವರು ಮುನಿರಾಜುನನ್ನು ಮೋಟಾರ್ ಸೈಕಲ್‌ನಲ್ಲಿ ಕೂರಿಸಿಕೊಂಡು ಬೆಳ್ಳೂರು ಬಳಿ ಹೋಗುತ್ತಿರುವುದನ್ನು ತಾನು ನೋಡಿರುವುದಾಗಿ ಹೇಳಿದರು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಗೆ ಸೇರಿದ ಮೇಡಿಮಲ್ಲಸಂದ್ರ ಗ್ರಾಮದ ಕೂಲಿ ಕೆಲಸ ಮಾಡುವ ಗೋವಿಂದಪ್ಪನ ಮಗ ಜಿ. ಗಂಗರಾಜು (20) ಟೆಂಪೋ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದು, ನಮ್ಮ ಗಂಡ ಕೆಲಸ ಮಾಡುತ್ತಿರುವ ಓಂ ಲಾಜಿಸ್ಟಿಕ್ಸ್ ಕಂಪನಿಗೆ ಸರಕು ಸಾಗಣಿಕೆ ಮಾಡಲು ಬರುತ್ತಿದ್ದಾಗ ಅವರಿಗೆ ಪರಿಚಯವಾಗಿದ್ದು, ಈ ಹಿಂದೆ ಗಂಡ ಮುನಿರಾಜುನೊಂದಿಗೆ ನಮ್ಮ ಮನೆಗೆ ಬಂದಿದ್ದನು. ಎರಡು-ಮೂರು ಬಾರಿ ನನ್ನ ಗಂಡನ ಮೋಟಾರ್ ಸೈಕಲ್ ಬೇಕೆಂದು ತೆಗೆದುಕೊಂಡು ಹೋಗಿದ್ದನು. ಗಾಡಿಯನ್ನು ಹೇಳಿದ ಸಮಯಕ್ಕೆ ತಂದು ಬಿಡದೆ ವಿಳಂಬ ಮಾಡುತ್ತಿದ್ದನು. ನೀನೇ ಗಾಡಿಯನ್ನು ಇಟ್ಟುಕೊಂಡುಬಿಟ್ಟರೆ ನನಗೆ ಬೇಡವೇ ಅದಕ್ಕೆ ಇನ್ನು ಮುಂದೆ ಗಾಡಿ ಕೊಡುವುದಿಲ್ಲವೆಂದು ಹೇಳಿದರಂತೆ. ಈ ವಿಚಾರವನ್ನು ನನ್ನ ಗಂಡ ಹೇಳಿದ್ದರು. ಯಾವುದೋ ಉದ್ದೇಶಕ್ಕೆ ನನ್ನ ಗಂಡನನ್ನು ನರಸಾಪುರ ಕೆರೆ ಕಡೆಗೆ ಕರೆದುಕೊಂಡು ಹೋಗಿ ತಲೆಗೆ ಯಾವುದೋ ಆಯುಧದಿಂದ ಹೊಡೆದು, ಕಾಲಿಗೆ ವೈರ್‌ನ್ನು ಕಟ್ಟಿ ಕೆರೆಗೆ ತಳ್ಳಿ ಕೊಲೆ ಮಾಡಿ ಆನಂತರ ನಮ್ಮ ಗಂಡನ ಮೊಬೈಲ್ ಮತ್ತು ಗಾಡಿಯನ್ನು ಎತ್ತಿಕೊಂಡು ಪರಾರಿಯಾಗಿರುತ್ತಾನೆ ಎಂದು ಅನುಮಾನ ಇದ್ದು, ಮೇಡಿ ಮಲ್ಲಸಂದ್ರ ಗ್ರಾಮದ ಗಂಗರಾಜುವಿನ ಮೇಲೆ ಕಾನೂನು ಕ್ರಮ ಜರುಗಿಸುವಂತೆ ನೀಡಿದ ಮನವಿ ಮೇರೆಗೆ ಠಾಣೆ ಪ್ರಕರಣದ ಸಂಖ್ಯೆ 05/2026 ಯು/ಎಸ್ 103(1) ಬಿಎನ್ 2023 ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡರು.


ಆರೋಪಿ ಗಂಗರಾಜು


ಶವದ ಮಹಜರ್ ನಡೆಸುತ್ತಿರುವ ಸಿಬ್ಬಂದಿ


ಕೆರೆ ಬಳಿ ಎಸ್ಪಿರವರು ಚರ್ಚಿಸುತ್ತಿರುವುದು

## ಆರೋಪಿ ಗಂಗರಾಜು ಬಂಧನ


ಮುನಿರಾಜುವನ್ನು ಕೊಲೆ ಮಾಡಿ ಪರಾರಿಯಾಗಿ ತಲೆಮರೆಸಿಕೊಂಡಿರುವ ಆರೋಪಿ ಗಂಗರಾಜುವನ್ನು ಪತ್ತೆ ಮಾಡಲು ಎಸ್ಪಿ ಕನ್ನಿಕಾ ಸುಕ್ರಿವಾಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶವರವರ ಮಾರ್ಗದರ್ಶನದಲ್ಲಿ ಪಿಐ ಬಿ.ಪಿ. ಮಂಜುರವರ ನೇತೃತ್ವದಲ್ಲಿ ಪಿಎಸ್‌ಐ ಸುನೀತಾದೇವಿ, ಎಎಸ್‌ಐ ನಾರಾಯಣಸ್ವಾಮಿ, ತನಿಖಾ ಸಹಾಯಕ ಹೆಚ್.ಎಂ. ಸುರೇಶ್, ಪಿಸಿಗಳಾದ ರಫೀಕ್ ಅಹಮದ್, ಹನುಮಂತ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಸೀತಿ ಗ್ರಾಮದ ವಿಜಯಮ್ಮನ ಮನೆಯಲ್ಲಿ ಜನವರಿ 6ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಗಂಗರಾಜುನನ್ನು ಬಂಧಿಸಿ ವೇಮಗಲ್ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಕಳೆದ ಮೂರು ತಿಂಗಳ ಹಿಂದೆ ಉದ್ದಪ್ಪನಹಳ್ಳಿ ವಾಸಿ ಮುನಿರಾಜು ನನಗೆ ಪರಿಚಯವಾಗಿದ್ದು, ಒಂದು ಬಾರಿ ಅವರ ಮನೆಗೂ ಸಹ ಹೋಗಿಬಂದಿದ್ದೆನು. ನನಗೆ ಬೈಕ್ ಎಂದರೆ ತುಂಬಾ ಇಷ್ಟ. ನನಗೆ ಗಾಡಿ ಕೊಡಿಸಿ ಎಂದು ತಂದೆ, ತಾಯಿಯನ್ನು ಕೇಳಿದಕ್ಕೆ ಕೆಲಸ ಕಾರ್ಯ ಮಾಡದ ನಿನಗೆ ಯಾಕೆ ಬೇಕು ಗಾಡಿ ಎಂದು ಹೇಳಿಬಿಟ್ಟರು. ಇದರಿಂದ ನನಗೆ ತುಂಬಾ ಬೇಸರವಾಗಿ ಗಾಡಿ ವಿಚಾರವನ್ನು ಮುನಿರಾಜುಗೆ ತಿಳಿಸಿದೆ. ಅದಕ್ಕೆ ಅವರು ನನ್ನ ಗಾಡಿ ಇದೆ, ನಿನಗೆ ಬೇಕಾದಾಗ ಓಡಿಸಿಕೊಂಡಿರು ಎಂದು ಹೇಳಿ ಗಾಡಿಯನ್ನು ಕೊಟ್ಟರು. ನನಗೆ ಗಾಡಿ ಬೇಕೆಂದಾಗ ಕಂಪನಿ ಅಥವಾ ಮನೆ ಬಳಿ ನಿಲ್ಲಿಸಿರುತ್ತಿದ್ದ ಗಾಡಿಯನ್ನು ತೆಗೆದುಕೊಂಡು ಹೋಗಿ ಓಡಿಸಿಕೊಂಡಿದ್ದೆನು. ಸ್ವಂತ ಗಾಡಿ ರೀತಿ ಓಡಿಸಿಕೊಂಡಿದ್ದ ನನಗೆ ಜೀವನದಲ್ಲಿ ಇದೇ ರೀತಿಯ ಗಾಡಿ ತೆಗೆದುಕೊಳ್ಳಬೇಕೆಂದು ಕನಸು ಕಂಡಿದ್ದೇನಲ್ಲದೆ ಇದೇ ಗಾಡಿಯನ್ನು ತನ್ನದಾಗಿಸಿಕೊಳ್ಳಬೇಕೆಂದು ಪ್ಲಾನ್ ಮಾಡಿಕೊಂಡಿದ್ದೆನು. 40ರ ಮುನಿರಾಜು 20ರ ನನ್ನ ಜೊತೆ ತುಂಬಾ ಸಲುಗೆಯಿಂದ ಇದ್ದು, ಆಗಾಗ ಇಬ್ಬರು ಸೇರಿ ಮದ್ಯಪಾನ ಮಾಡುತ್ತಿದ್ದೆವು. ಕೂಲಿ ಕೆಲಸ ಮಾಡುತ್ತಿದ್ದ ನಾನು ಕಂಪನಿಗಳಲ್ಲಿ ಡ್ರೈವರ್ ಕೆಲಸ ಖಾಲಿ ಇದ್ದರೆ ಅಥವಾ ನಿನಗೆ ಗೊತ್ತಿರುವರ ಬಳಿ ಗಾಡಿಗಳಿದ್ದರೆ ಡ್ರೈವರ್ ಕೆಲಸ ಕೊಡಿಸುವಂತೆ ಹೇಳಿದ್ದೆನು. ಅವನು ಸಹ ಅದೇ ಪ್ರಯತ್ನದಲ್ಲಿದ್ದನು. ಒಂದು ದಿನ ಉದ್ದಪ್ಪನ ಹಳ್ಳಿ ಗೇಟ್ ಬಳಿ ಸ್ನೇಹಿತ ಮುನಿರಾಜುಗಾಗಿ ಕಾದಿದ್ದಾಗ ಗ್ರಾಮದ ನವೀನ ಎನ್ನುವವರು ಯಾರು ನೀನು ಎಂದು ಹೇಳಿದರು. ಅದಕ್ಕೆ ನಾನು ಗ್ರಾಮದ ಸೆಕ್ಯೂರಿಟಿ ಗಾರ್ಡ್ ಮುನಿರಾಜು ನನಗೆ ಬೇಕಾದವರು. ಅವರಿಗೊಂದು ಕೆಲಸ ಕೊಡಿಸುವಂತೆ ಕೇಳಿದ್ದೆ. ಅವರಿಗಾಗಿ ಕಾದಿರುವುದಾಗಿ ಹೇಳಿದಕ್ಕೆ ನವೀನ ನಮ್ಮದು ಬೊಲೇರೋ ವಾಹನ ಇದೆ ಚಾಲಕನಾಗಿ ಕೆಲಸ ಮಾಡುತ್ತೀಯಾ ಎಂದು ಕೇಳಿದರು. ಅದರಂತೆ ನಾನು ಅವರ ಬಳಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆನು. ಈ ವಿಚಾರವನ್ನು ಮುನಿರಾಜುಗೆ ತಿಳಿಸಿದೆ. ಅದಕ್ಕೆ ಅವನು ಚೆನ್ನಾಗಿ ಕೆಲಸ ಮಾಡಿ ಹಣ ಕೂಡಿ ಹಾಕಿ ನಿನ್ನ ಆಸೆಯಂತೆ ಕಂತಿನಲ್ಲಿ ಗಾಡಿಯನ್ನು ತೆಗೆದುಕೊಳ್ಳುವಂತೆ ಹೇಳಿದನು. ಬಿಡುವಿನ ಸಮಯದಲ್ಲಿ ಮುನಿರಾಜುವಿನ ಗಾಡಿಯನ್ನು ನಾನು ತೆಗೆದುಕೊಂಡು ಹೋಗುತ್ತಿದ್ದರಿಂದ ಅವನಿಗೆ ಗಾಡಿ ಇಲ್ಲದೆ ಎಷ್ಟೋ ಸಾರಿ ಕಂಪನಿಯಿಂದ ಮನೆಗೆ ನಡೆದುಕೊಂಡು ಹೋಗಿದ್ದಾನೆ. ಗಾಡಿ ವಿಚಾರದಲ್ಲಿ ನಮ್ಮಿಬ್ಬರ ನಡುವೆ ಮಾತಿಗೆ ಮಾತು ಬೆಳೆದು ಜಗಳವಾಗಿ ಇನ್ನು ಮುಂದೆ ಗಾಡಿಯನ್ನು ಮುಟ್ಟಬೇಡವೆಂದು ಹೇಳಿದ್ದನು. ಆದರೂ ಅವನ ಗಾಡಿಯನ್ನು ಓಡಿಸಿಕೊಂಡಿದ್ದೆನು.


ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿರುವ ಆರೋಪಿ


## ಬೈಕ್ ಕೊಡುವುದಿಲ್ಲ ಎಂದಿದ್ದಕ್ಕೆ ಕೊಲೆ ಮಾಡಿದೆ


ಡಿಸೆಂಬರ್ 31ರಂದು ಗಾಡಿ ಮಾಲೀಕ ನವೀನ್‌ರವರು ಫೋನ್ ಮಾಡಿ ಉದ್ದಪ್ಪನಹಳ್ಳಿ ಗೇಟ್‌ನಲ್ಲಿರುವ ಓಂ ಲಾಜಿಸ್ಟಿಕ್ಸ್ ಕಂಪನಿಯಲ್ಲಿ ಸರಕು ಸಾಗಿಸಬೇಕೆಂದು ಹೇಳಿ ಕಳುಹಿಸಿದರು. ಅದರಂತೆ ಅನುಕಂಪನಿಗೆ ಹೋಗಿ ಸರಕನ್ನು ತುಂಬಿಸಿಕೊಂಡು ಅಲ್ಲಿರುವ ಗೋಡೌನ್‌ನಲ್ಲಿ ಅನ್‌ಲೋಡ್ ಮಾಡುವ ಒಳಗೆ, ರಾತ್ರಿಯಾಗಿದ್ದು ಇನ್ನು ಅರ್ಧದಷ್ಟು ಸರಕು ಇದ್ದು ನಾಳೆ ಬೆಳಿಗ್ಗೆ ಒಂದು ಸಾಗಿಸುವಂತೆ ಹೇಳಿದರು. ಅದರಂತೆ ನಾನು ಗಾಡಿಯನ್ನು ಮಾಲೀಕರ ಮನೆ ಬಳಿ ಬಿಟ್ಟು ಸ್ನೇಹಿತ ಮುನಿರಾಜುವನ್ನು ಮಾತನಾಡಿಸಿಕೊಂಡು ಹೋಗೋಣವೆಂದು ಕಂಪನಿಯ ಮೇನ್ ಗೇಟ್ ಬಳಿ ಇರುವ ಸೆಕ್ಯೂರಿಟಿ ರೂಂ ಬಳಿಗೆ ನೋಡಿದ್ದಾಗ ಮುನಿರಾಜು ಇರಲಿಲ್ಲ. ಆಗ ಅಲ್ಲಿಯೇ ಇದ್ದ ಸೆಕ್ಯೂರಿಟಿ ಮಧುಕುಮಾರ್‌ನನ್ನು ಕೇಳಲಾಗಿ ಮುನಿರಾಜು ಶಿಫ್ಟ್ ಮುಗಿಸಿಕೊಂಡು ಮನೆಗೆ ಹೋಗಿರುವುದಾಗಿ ಹೇಳಿದರು. ನಂತರ ಅವನ ಫೋನ್‌ನಿಂದ ಮುನಿರಾಜುವಿಗೆ ಕಾಲ್ ಮಾಡಿಕೊಟ್ಟಿದ್ದು ನಾನು ಮಾತನಾಡಿದಾಗ ಊರಿನ ಗೇಟ್‌ನಲ್ಲಿರುವುದಾಗಿ ಹೇಳಿದನು. ನಾನು ಕೂಡಲೇ ಗೇಟ್ ಬಳಿಗೆ ಹೋದಾಗ ಮುನಿರಾಜು ಗಾಡಿ ನಿಲ್ಲಿಸಿಕೊಂಡಿದ್ದನು. ಈ ದಿನ ಮದ್ಯಪಾನ ಮಾಡೋಣವೆಂದು ಹೇಳಿದೆ ಅದಕ್ಕೆ ಅವನು ಸರಿ ಎಂದನು. ಅದರಂತೆ ನಾವಿಬ್ಬರು ಮಾತನಾಡಿಕೊಂಡು ಲಕ್ಷ್ಮಿಸಾಗರ ಗೇಟಿನ ಬಳಿ ಇರುವ ಚಂದ್ರಮೌಳೇಶ್ವರ ಬಾರಿಗೆ ಹೋಗಿ ಮದ್ಯಪಾನ ಮಾಡಿ ಇನ್ನು ಎರಡು ಬಾಟಲ್ ಪಾರ್ಸಲ್ ತೆಗೆದುಕೊಂಡು ಅಲ್ಲಿಂದ ಮುನಿರಾಜುನನ್ನು ಹಿಂಬದಿಯಲ್ಲಿ ಕೂರಿಸಿಕೊಂಡು ಬೆಳ್ಳೂರು ಗ್ರಾಮದ ಮುಂದೆ ಇರುವ ನರಸಾಪುರ ಕೆರೆಕಟ್ಟೆಯ ಬಳಿ ಇರುವ ಪಂಪ್ ಹೌಸ್ ಹಿಂಭಾಗಕ್ಕೆ ಕರೆದುಕೊಂಡು ಹೋಗಿ ಅಲ್ಲಿಯೇ ಕುಳಿತುಕೊಂಡು ತಂದಿದ್ದ ಮದ್ಯವನ್ನು ಖಾಲಿ ಮಾಡಿ ಸ್ನಾಕ್ಸ್‌ನ್ನು ತಿನ್ನುತ್ತಾ ಮುನಿರಾಜುನನ್ನು ಕುರಿತು ನಿನ್ನ ಗಾಡಿ ನನಗೆ ಕೊಡು ಎಂದು ಕೇಳಿದಾಗ ಮುನಿರಾಜು ನನ್ನನ್ನು ''ನಿಮ್ಮಮ್ಮನ್ನಾ... ನಿನಗ್ಯಾಕೆ'' ಕೊಡಬೇಕು ಗಾಡಿ ಎಂದು ಬೈದನು. ಇವನ ಮಾತಿನಿಂತ ಕೋಪ ಬಂದು ನಮ್ಮ ತಾಯಿ ಬಗ್ಗೆ ಕೆಟ್ಟದಾಗಿ ಬೈದ ಇವನನ್ನು ಬಿಡಬಾರದೆಂದು ನಿರ್ಧರಿಸಿ ಅಲ್ಲಿಯೇ ಬಿದ್ದಿದ್ದ ಸಿಮೆಂಟ್ ಕಲ್ಲಿನಿಂದ ಮುನಿರಾಜನ ತಲೆಗೆ ಎರಡು ಏಟು ಹೊಡೆದನು. ಆಗ ಅವನು ನನ್ನನ್ನು ಬೈಯುತ್ತಾ ತಲೆ ಹಿಡಿದು ಕುಳಿತುಕೊಂಡನು. ಆತ ಅವನನ್ನು ತಳ್ಳಿ ಚಡ್ಡಿಯೊಳಕ್ಕೆ ಕೈ ಹಾಕಿ ವೃಷಣಗಳನ್ನು ಗಟ್ಟಿಯಾಗಿ ಹಿಸುಕಿದನು. ಕಾಲಿನಿಂದ ಹೊಟ್ಟೆ ಮತ್ತು ಮೂಗಿಗೆ ಒದ್ದಿದ್ದು ಅವನು ಒದ್ದಾಡುತ್ತಿದ್ದನು. ತಕ್ಷಣ ಅವನನ್ನು ಹಿಡಿದು ಎಳೆದುಕೊಂಡು ಹೋಗಿ ಕೆರೆಯ ಒಳಗಡೆ ತಳ್ಳಿದೆನು. ಆಗ ಅವನು ನೀರಿನಲ್ಲಿದ್ದ ಗಿಡಗಳ ಮಧ್ಯೆ ಬಿದ್ದು ಒದ್ದಾಡುತ್ತಿದ್ದನು. ಅಲ್ಲಿ ಬಿದ್ದಿದ್ದ ಮುನಿರಾಜುನ ಮೊಬೈಲ್ ಫೋನ್‌ನ್ನು ಎತ್ತಿಕೊಂಡು ಗಾಡಿಯನ್ನು ಸ್ಟಾರ್ಟ್ ಮಾಡಿಕೊಂಡು ಹೊರಟು ಬೆಳ್ಳೂರು ಬ್ರಿಡ್ಜ್ ಬಳಿ ಇರುವ ಪೆಟ್ರೋಲ್ ಬಂಕ್‌ಗೆ ಹೋಗಿ ತನ್ನ ಫೋನ್‌ನನ್ನು ಅಡವಿಟ್ಟು 500 ರೂ.ಗೆ ಪೆಟ್ರೋಲ್ ಹಾಕಿಸಿಕೊಂಡು ಸೀತಿ ಗ್ರಾಮಕ್ಕೆ ಹೋಗಿ ಆ ದಿನ ರಾತ್ರಿ ವಿಜಯಮ್ಮನ ಮನೆಯಲ್ಲಿ ಮಲಗಿದ್ದು, ಮಾರನೇ ದಿನ ಬೆಳಿಗ್ಗೆ ನರಸಾಪುರಕ್ಕೆ ಹೋಜಿಗಿ ಮಧ್ಯಾಹ್ನದವರೆಗೂ ಅಲ್ಲಿಯೇ ಇದ್ದೆನು. ನಂತರ ಮುನಿರಾಜುನ ಸಾವಿನ ಬಗ್ಗೆ ಯಾವುದೇ ವಿಷಯ ತಿಳಿಯಲಿಲ್ಲ. ಅಲ್ಲಿಂದ ನಮ್ಮೂರಿಗೆ ಹೋಗಿ ಅಡಗಿಕೊಂಡು ನಾಲ್ಕು ದಿನ ಇದ್ದೆ. ಅಲ್ಲಿಯೂ ಇರಲಾಗದೆ ಭಯದಿಂದ ಊರು ಬಿಟ್ಟು ಜನವರಿ 5ರಂದು ನರಸಾಪುರಕ್ಕೆ ಹೋಗಿ ಪರಿಸ್ಥಿತಿ ಬಗ್ಗೆ ತಿಳಿದುಕೊಂಡು ತಮಿಳುನಾಡಿನ ಕಡೆ ಹೋಗೋಣವೆಂದು ಸರ್ಜಾಪುರದ ಬಳಿ ಹೋಗುತ್ತಿರುವಾಗ ಪೆಟ್ರೋಲ್ ಖಾಲಿಯಾಗಿದ್ದು, ನನ್ನ ಬಳಿ ಹಣವಿಲ್ಲದೆ ಇದ್ದುದರಿಂದ ಮುನಿರಾಜುನ ಫೋನ್‌ನನ್ನು ಅಡವಿಟ್ಟುಕೊಂಡು ಬಂಕ್‌ನಲ್ಲಿ 900 ರೂಪಾಯಿಗೆ ಪೆಟ್ರೋಲ್ ಹಾಕಿಸಿಕೊಂಡು ಅತ್ತಿಬೆಲೆಯುವರೆಗೂ ಹೋಗಿ ಅಲ್ಲಿ ಸಂಜೆವರೆಗೂ ಸುತ್ತಾಡಿಕೊಂಡು ಮತ್ತೆ ರಾತ್ರಿ ಯಾರಿಗೂ ಕಾಣದಂತೆ ಸೀತಿ ಗ್ರಾಮಕ್ಕೆಬಂದು ವಿಜಯಮ್ಮನ ಮನೆಯಲ್ಲಿ ಇದ್ದೆನು. ಜನವರಿ 6ರಂದು ರಾತ್ರಿ 8.30ರಲ್ಲಿ ಪೊಲೀಸರು ಬಂದು ನನ್ನನ್ನು ವಶಕ್ಕೆ ಪಡೆದರೆಂದು ಹೇಳಿದನು.




ಪಿಐ ಮಂಜುರವರಿಗೆ ಆರೋಪಿ ಕೃತ್ಯದ ಬಗ್ಗೆ ವಿವರಣೆ ನೀಡುತ್ತಿರುವುದು


ಪೊಲೀಸ್ ಕಸ್ಟಡಿಯಲ್ಲಿ ಆರೋಪಿ ಗಂಗರಾಜು


ಎಎಸ್‌ಐ ನಾರಾಯಣಸ್ವಾಮಿ


ತನಿಖಾ ಸಹಾಯಕ ಹೆಚ್.ಎಂ. ಸುರೇಶ್

ಆರೋಪಿ ಗಂಗರಾಜು ಬಳಿ ಹೇಳಿಕೆ ಪಡೆದ ನಂತರ ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳವನ್ನು ಪರಿಶೀಲಿಸಿದ ನಂತರ ಆರೋಪಿ ಗಂಗರಾಜು ಸೀತಿ ಗ್ರಾಮದ ವಿಜಯಮ್ಮನ ಮನೆಯಲ್ಲಿ ಮೃತ ಮುನಿರಾಜುನ ಗಾಡಿ, ಸರ್ಜಾಪುರದ ಪೆಟ್ರೋಲ್ ಬಂಕ್‌ನಲ್ಲಿ ಅಡವಿಟ್ಟಿದ್ದ ಮುನಿರಾಜುನ ಮೊಬೈಲ್ ಮತ್ತು ಬೆಳ್ಳೂರು ಪೆಟ್ರೋಲ್ ಬಂಕ್‌ನಲ್ಲಿ ಅಡವಿಟ್ಟಿದ್ದ ಗಂಗರಾಜುನ ಮೊಬೈಲ್‌ನ್ನು ತೆಗೆದುಕೊಟ್ಟಿದ್ದು ಪಂಚರ ಸಮಕ್ಷಮದಲ್ಲಿ ವಶಕ್ಕೆ ಪಡೆದ ಪೊಲೀಸರು ಆರೋಪಿ ಗಂಗರಾಜುನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. 20 ವರ್ಷದ ಯುವಕನೊಂದಿಗಿನ ಅತಿಯಾದ ಸಲಿಗೆಯೇ ಮುನಿರಾಜುನ ಸಾವಿಗೆ ಕಾರಣವಾಗಿ ಮಸಣ ಸೇರಿದರೆ, ಬೈಕ್ ಮೇಲಿನ ಹುಚ್ಚು ಆಸೆಗಾಗಿ ತನ್ನೆಲ್ಲ ಬಯಕೆಗಳನ್ನು ತೀರಿಸುತ್ತಿದ್ದ ಗೆಳೆಯನನ್ನು ಕೊಂದ ಗಂಗರಾಜುನು ಜೈಲಿನಲ್ಲಿ ಕುಳಿತು ಮುದ್ದೆ ಮುರಿಯುವಂತಾಯಿತು.

# ಮಹಿಳೆ-ಮಕ್ಕಳ ರಕ್ಷಣೆಗೆ 'ಅಕ್ಕ ಪಡೆ' ಸನ್ನದ್ಧ!

**ಮಹಿಳೆ ಪುರುಷರಿಗೆ ಕಡಿಮೆ ಇಲ್ಲದಂತೆ ಎಲ್ಲ ಕ್ಷೇತ್ರಗಳಿಗೆ ಕಾಲಿಟ್ಟು ಯಶಸ್ವಿಯಾಗಿದ್ದರೂ ಆಕೆಯ ಮೇಲೆ ನಡೆಯುತ್ತಿರುವ ದೌರ್ಜನ್ಯ, ಲೈಂಗಿಕ ಕಿರುಕುಳ, ಮಾರಾಟ ಮೊದಲಾದವುಗಳಿಂದ ಆಕೆ ಬಿಡುಗಡೆ ಆದಂತೆ ಕಾಣುತ್ತಿಲ್ಲ. ಅಲ್ಲಲ್ಲಿ ಆಕೆಯ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ದೌರ್ಜನ್ಯ ನಡೆಯುತ್ತಲೇ ಇದೆ.. ಇದು ಕೇವಲ ಮಹಿಳೆ ಮಾತ್ರವಲ್ಲ ಮಕ್ಕಳ ವಿಚಾರದಲ್ಲಿಯೂ ನಡೆಯುತ್ತಿದೆ. ಪುಂಡ, ಪೋಕರಿಯ ಹಾವಳಿಯೂ ಇಲ್ಲದಿಲ್ಲ ಇಂತಹ ಕೃತ್ಯಕ್ಕೆ ಕಡಿವಾಣ ಹಾಕಲೆಂದೇ ಸರ್ಕಾರ ರಾಜ್ಯದಲ್ಲಿ ಅಕ್ಕಪಡೆಯನ್ನು ಹುಟ್ಟುಹಾಕಿದೆ ಈ ಅಕ್ಕಪಡೆಗೆ ಈಗಾಗಲೇ ರಾಜ್ಯದಾದ್ಯಂತ ಚಾಲನೆ ದೊರೆತಿದ್ದು, ಇದು ಯಶಸ್ವಿಯಾದರೆ ಈ ರಾಜ್ಯಕ್ಕೆ ಸಮಾಜಕ್ಕೆ ದೊಡ್ಡ ಕೊಡುಗೆಯಾಗಲಿದೆ.**

✎ಬಿ.ಎಂ. ಲವಕುಮಾರ್

ಅಕ್ಕಪಡೆ ಮಹಿಳಾ ಮತ್ತು ಮಕ್ಕಳ ಸ್ನೇಹಿಯಾಗಿ ಕಾರ್ಯನಿರ್ವಹಿಸಿದ್ದೇ ಆದರೆ ಮಕ್ಕಳು ಮತ್ತು ಮಹಿಳೆಯರಿಗೆ ವರದಾನವಾಗಲಿದ್ದು, ಬಹುತೇಕ ಕೃತ್ಯಗಳಿಗೆ ಕಡಿವಾಣ ಹಾಕಲು ಸಾಧ್ಯವಾಗಲಿದೆ. ಕಳೆದ ನವೆಂಬರ್ ತಿಂಗಳಲ್ಲಿ (28-11-2025) ಕರ್ನಾಟಕ ರಾಜ್ಯ ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ



ಮತ್ತು ಗೃಹ ಇಲಾಖೆಯ ಸಹಯೋಗದೊಂದಿಗೆ ಅಕ್ಕ ಪಡೆ ಎಂಬ ನೂತನ ಯೋಜನೆಯನ್ನು ಜಾರಿ ಮಾಡಿದ್ದು, ಮಹಿಳೆಯರು ಮತ್ತು ಮಕ್ಕಳಲ್ಲಿ ಕಾನೂನು ಅರಿವು, ಜಾಗೃತಿ ಶಿಕ್ಷಣ ನೀಡುವುದರ ಜೊತೆಗೆ ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ, ನೆರವು ನೀಡುವುದು ಅಕ್ಕಪಡೆಯ ಉದ್ದೇಶವಾಗಿದೆ.

ಆಧುನಿಕ ಮತ್ತು ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಮಹಿಳೆಯರು ಮತ್ತು ಮಕ್ಕಳ ವಿರುದ್ಧ ನಡೆಯುವ ದೌರ್ಜನ್ಯ (ಅತ್ಯಾಚಾರ, ಲೈಂಗಿಕ ಕಿರುಕುಳ, ಮಾನವ ಕಳ್ಳ ಸಾಗಣೆ, ವರದಕ್ಷಿಣೆ ಕಿರುಕುಳ, ಬಾಲ್ಯ ವಿವಾಹ ಮತ್ತು ಪೋಕ್ಸ್) ಅಂತಹ ಪ್ರಕರಣಗಳಿಂದ ಮಹಿಳೆಯರು ಮತ್ತು ಮಕ್ಕಳ ಮೇಲೆ ಮಾನಸಿಕ, ದೈಹಿಕವಾಗಿ ಮತ್ತು ಸಾಮಾಜಿಕವಾಗಿ ಹಿಂಸೆ ತಡೆಯಲು ಅಕ್ಕಪಡೆ ಸಹಕಾರಿಯಾಗಲಿದೆ. ಇದರ ಜತೆಗೆ ಮಹಿಳೆಯರು ಮತ್ತು ಮಕ್ಕಳ ವಿರುದ್ಧ ಪ್ರಖರವಾಗಿ ನಡೆಯುವ ಅಪರಾಧಗಳ ಬಗ್ಗೆ ಕಾನೂನು ಅರಿವು ಜಾಗೃತಿ ಮೂಡಿಸಲು ಶಿಕ್ಷಣ ನೀಡುವುದು, ಜೊತೆಗೆ ಸಂಕಷ್ಟದಲ್ಲಿ ಇರುವ ಮಹಿಳಾ ಮತ್ತು ಮಕ್ಕಳಿಗೆ ತಕ್ಷಣ ರಕ್ಷಣೆ, ನೆರವು ನೀಡಲಿದ್ದು ಸದ್ಯ 'ಅಕ್ಕ ಪಡೆ' ರಾಜ್ಯದ 31 ಜಿಲ್ಲೆ ಮತ್ತು 5 ಪೊಲೀಸ್ ಕಮೀಷನರೇಟ್‌ಗಳಲ್ಲಿ ಸನ್ನದ್ಧವಾಗುತ್ತಿದೆ.

ಇಷ್ಟಕ್ಕೂ ಅಕ್ಕಪಡೆ ಎಂದರೇನು? ಇದರ ಕಾರ್ಯ ಮತ್ತು ಕಾರ್ಯವ್ಯಾಪ್ತಿ ಹೇಗಿರುತ್ತದೆ? ಇದರಲ್ಲಿ ಯಾರೆಲ್ಲ ಇರುತ್ತಾರೆ ಎಂಬಿತ್ಯಾದಿಗಳನ್ನು ನೋಡಿದ್ದೇ ಆದರೆ ಅಕ್ಕ ಪಡೆಯ ತಂಡಕ್ಕೆ ಪ್ರತಿ ಜಿಲ್ಲೆ, ಕಮೀಷನರೇಟ್‌ಗಳಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಪೊಲೀಸ್ ಆಯುಕ್ತರು ಸದೃಢ ದೇಹದಾರ್ಢ್ಯತೆ ಮತ್ತು ಆರೋಗ್ಯ ಹೊಂದಿರುವ 35 ವರ್ಷದೊಳಗಿನ ನಾಲ್ಕು ಮಂದಿ ಮಹಿಳಾ ಹೋಂಗಾರ್ಡ್ (ಗೃಹ ರಕ್ಷಕದಳ)ಗಳನ್ನು ನೇಮಕ ಮಾಡುತ್ತಾರೆ.

ಹೀಗೆ ಆಯ್ಕೆಯಾದ ಮಹಿಳಾ ಹೋಂಗಾರ್ಡ್‌ಗಳಿಗೆ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳ ಕುರಿತು ಸಂಪೂರ್ಣ ತರಬೇತಿಯನ್ನು ನೀಡಿ ಅವರಿಗೆ ಈ ಬಗ್ಗೆ ಕೈಪಿಡಿಯನ್ನು ನೀಡಿ ಕರ್ತವ್ಯವನ್ನು ನಿರ್ವಹಿಸಲು ತಿಳಿಸಲಾಗುತ್ತಿದೆ. ಒಂದು ವಾರದ ತರಬೇತಿಯನ್ನು ನೀಡಲಾಗುತ್ತದೆ.

ತರಬೇತಿ ಪಡೆದು ಅಕ್ಕ ಪಡೆ ತಂಡದಲ್ಲಿ ಕರ್ತವ್ಯ ನಿರ್ವಹಿಸುವ ಮಹಿಳಾ ಹೋಂ ಗಾರ್ಡ್‌ಗಳಿಗೆ ಸರ್ಕಾರವು ನಿಗಧಿಪಡಿಸಿದ ವೇತನದ ವೆಚ್ಚವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ವಿತರಿಸಲಾಗುತ್ತದೆ. ಅಲ್ಲದೇ ಅಕ್ಕ ಪಡೆ ತಂಡಗಳು ಜಿಲ್ಲಾ ಹಾಗೂ ಕಮೀಷನರೇಟ್ ವ್ಯಾಪ್ತಿಯಲ್ಲಿ ಗಸ್ತು ಸಂಚರಿಸಲು ಅಗತ್ಯವಾದ ವಾಹನಗಳನ್ನು (ಮಹೇಂದ್ರ ಬೊಲೆರೊ) ಮಹಿಳಾ ಮತ್ತು ಮಕ್ಕಳ ಘಟಕಗಳಿಗೆ ಅಭಿವೃದ್ಧಿ ಇಲಾಖೆಯಿಂದ ನೀಡಲಾಗುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹಂಚಿಕೆ ಮಾಡಲಾದ ವಾಹನಗಳ ಚಾಲನೆ, ನಿರ್ವಹಣೆ ಮತ್ತು ಇಂಧನದ ವೆಚ್ಚವನ್ನು ಆಯಾ ಪೊಲೀಸ್ ಇಲಾಖೆಯ ಘಟಕಾಧಿಕಾರಿಗಳು ಸಾರಿಗೆ ವೆಚ್ಚದಡಿ ಭರಿಸಬೇಕಾಗುತ್ತದೆ. ಮಹಿಳಾ ಮತ್ತು




ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹಂಚಿಕೆ ಮಾಡಲಾಗಿರುವ ವಾಹನವನ್ನು ಅಕ್ಕ ಪಡೆಯ ಕರ್ತವ್ಯಕ್ಕೆ ಮಾತ್ರ ಉಪಯೋಗಿಸ ಬೇಕಾಗುತ್ತದೆ.

ಇನ್ನು ಅಕ್ಕ ಪಡೆಯಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಹೋಂ ಗಾರ್ಡ್‌ಗಳಿಗೆ ಕಮಾಂಡೋ (camouflage) ಸಮವಸ್ತ್ರವನ್ನು ಆಯಾ ಜಿಲ್ಲಾ ಪೊಲೀಸ್ ಮತ್ತು ಕಮೀಷನರೇಟ್ ಕಛೇರಿಯಿಂದ ಒದಗಿಸಲಾಗುತ್ತದೆ. ಅಲ್ಲದೆ ಅಕ್ಕ ಪಡೆಯ ಕಾರ್ಯನಿರ್ವಹಣೆಯನ್ನು ಜಿಲ್ಲಾ ಮತ್ತು ಕಮೀಷನರೇಟ್ ಮಟ್ಟದಲ್ಲಿ ಪರಿಶೀಲಿಸಲು ಹಾಗೂ ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲು ಕೆಲವು ಸಮಿತಿಯನ್ನು ರಚಿಸಲಾಗುತ್ತದೆ.




ಹೀಗೆ ರಚಿಸಲಾದ ಅಕ್ಕ ಪಡೆಯ ಕಾರ್ಯ



ನಿರ್ವಹಣೆಯ ಜಿಲ್ಲಾ ಮತ್ತು ಕಮೀಷನರೇಟ್ ಮಟ್ಟದ ಸಮಿತಿಯಲ್ಲಿ ಅಧ್ಯಕ್ಷರಾಗಿ ಜಿಲ್ಲಾ ಪೊಲೀಸ್ ಅಕ್ಷಕರು, ಪೊಲೀಸ್ ಕಮೀಷನರ್, ಉಪಾಧ್ಯಕ್ಷರಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು ಇರಲಿದ್ದಾರೆ. ಸದಸ್ಯರಾಗಿ ಜಿಲ್ಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು, ಪೊಲೀಸ್ ಇಲಾಖೆಯ ಉಪಾಕ್ಷಕರು (ಮಹಿಳೆ) ಇರಲಿದ್ದಾರೆ.

ಅಕ್ಕ ಪಡೆಯ ಕಾರ್ಯ ಮತ್ತು ಜವಾಬ್ದಾರಿಗಳು ಹೆಚ್ಚಾಗಿದ್ದು,. ಅಕ್ಕ ಪಡೆಯ ತಂಡವು ಶಾಲಾ, ಕಾಲೇಜು ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಸತಿ ನಿಲಯಗಳಿಗೆ ಪ್ರತಿ ವಾರ ಕಡ್ಡಾಯವಾಗಿ ಭೇಟಿ ನೀಡುವುದಲ್ಲದೆ ಸಾರ್ವಜನಿಕ ಜನ ಸಂದಣಿ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧ ಲೈಂಗಿಕ ಕಿರುಕುಳ ಕುರಿತು ಮುಂಜಾಗ್ರತಾ ಕ್ರಮಗಳ ಬಗ್ಗೆ ಅರಿವು ಮೂಡಿಸಬೇಕಾಗುತ್ತದೆ.

ಪ್ರತಿದಿನವೂ ಜಿಲ್ಲಾ, ಕಮೀಷನರೇಟ್‌ನ ವ್ಯಾಪ್ತಿಯಲ್ಲಿ ಬರುವ ಶಾಲಾ ಮತ್ತು ಕಾಲೇಜುಗಳಿಗೆ ತೆರಳಿ ಮಕ್ಕಳಲ್ಲಿ ಪೋಕ್ಸ್ ಮತ್ತು ಸೈಬರ್ ಅಪರಾಧ ಹಾಗೂ ಮಾದಕ ವಸ್ತು ಸೇವನೆ ದುಷ್ಪರಿಣಾಮದ ಬಗ್ಗೆ ಜಾಗೃತಿಯ ಕುರಿತು ಅರಿವು ಮೂಡಿಸಬೇಕಾಗುತ್ತದೆ. ವಾರದಲ್ಲಿ ಒಂದು ದಿನ ಜಿಲ್ಲೆಯ ಇತರೇ ತಾಲ್ಲೂಕುಗಳಲ್ಲಿ ಮತ್ತು ಪ್ರಮುಖ ಪಟ್ಟಣಗಳ ಶಾಲೆ ಹಾಗೂ ಕಾಲೇಜುಗಳು ಹಾಗೂ ರೈಲ್ವೇ ನಿಲ್ದಾಣ, ಬಸ್ ನಿಲ್ದಾಣ, ಜನನಿಬಿಡ ಪದೇಶಗಳಲ್ಲಿ ಗಸ್ತು (Patroling) ಮೂಲಕ ಮಹಿಳೆ

☞14

## ಹೇಗಿರಲಿದೆ ಅಕ್ಕ ಪಡೆಯ ಕಾರ್ಯನಿರ್ವಹಣೆ?

ಅಕ್ಕ ಪಡೆ ತಂಡದಲ್ಲಿ ನೇಮಕಗೊಂಡ ತಲಾ ಇಬ್ಬರು ಹೋಂಗಾರ್ಡ್‌ಗಳು ಪ್ರತಿದಿನ ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2ಗಂಟೆಯ ವರೆಗೆ ಮೊದಲನೆ ಪಾಳಿಯಲ್ಲಿ ಎರಡನೇ ಪಾಳಿಯಲ್ಲಿ 2ರಿಂದ ರಾತ್ರಿ 10 ಗಂಟೆ ವರೆಗೆ ಗಸ್ತು ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಇವರೊಂದಿಗೆ ಮಹಿಳಾ ಠಾಣೆಯ ಇಬ್ಬರು ಮಹಿಳಾ ಪೊಲೀಸ್ ಸಿಬ್ಬಂದಿ ಇರಲಿದ್ದಾರೆ. ಮಹಿಳಾ ಠಾಣೆಯ ಪಿಐ ಇದರ ಉಸ್ತುವಾರಿ ವಹಿಸಲಿದ್ದಾರೆ. ಅಲ್ಲದೆ ಈ ಪಡೆಯ ತಂಡವು ಪ್ರತಿ ಜಿಲ್ಲೆ ಮತ್ತು ಕಮೀಷನರೇಟ್ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಲಿದೆ.

ಇನ್ನು ಪ್ರತಿ ದಿನ ಕರ್ತವ್ಯ ನಿರ್ವಹಿಸಿದ ಬಗ್ಗೆ, ಕರ್ತವ್ಯಯಾದಿ (Duty Dairy) ನಿರ್ವಹಿಸಬೇಕಾಗುತ್ತದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಅಕ್ಕ ಪಡೆ ತಂಡವು ಸ್ಥಳೀಯ ಪೊಲೀಸರ ನಿಕಟ ಸಹಯೋಗದೊಂದಿಗೆ ಶಾಲೆ, ಕಾಲೇಜು, ಬಾಲಕಿಯರ, ಮಹಿಳಾ ಹಾಸ್ಟೆಲ್, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು, ಸ್ಥಳೀಯ ಮಾರುಕಟ್ಟೆ ಪ್ರೇಕ್ಷಣೀಯ ಸ್ಥಳಗಳು. ಪವಿತ್ರ ಸ್ಥಳಗಳು ಮತ್ತು ಇತರ ಸೂಕ್ಷ್ಮ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿ ಆಗುವ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವುದಲ್ಲದೆ ಮಹಿಳೆಯರ ಮತ್ತು ಮಕ್ಕಳ ವಿರುದ್ಧ ಅಹಿತಕರ ಘಟನೆ ಸಂಭವಿಸಿದಲ್ಲಿ ಕೂಡಲೇ ಜಿಲ್ಲಾ ಕಮಿಷನರೇಟ್ ವ್ಯಾಪ್ತಿಯ ನಿಯಂತ್ರಣ ಕೊಠಡಿಗೆ ಶೀಘ್ರವಾಗಿ ಮಾಹಿತಿ ನೀಡಲಿದೆ.







# ಮಂಡ್ಯದಲ್ಲಿ ನಡೆದ ಭೀಕರ ಕ್ರೌರ್ಯ ಘಟನೆ
# ಲವರ್ಸ್‌ಗೆ ಸಹಾಯ ಮಾಡಿದ್ದಕ್ಕೆ ಸೈಜ್ ಗಲ್ಲಿನಿಂದ ಜಜ್ಜಿದರು!



ಬಂಧಿತ ಆರೋಪಿಗಳು

**ಸಕ್ಕರೆ ನಾಡು ಎಂದು ಹೆಮ್ಮೆಪಡುವ ಮಂಡ್ಯ ಜಿಲ್ಲೆಯಲ್ಲಿ ನಡೆದ ಈ ಒಂದು ಘಟನೆ ಇಡೀ ನಾಗರಿಕ ಸಮಾಜವನ್ನೇ ತಲೆತಗ್ಗಿಸುವಂತೆ ಮಾಡಿದೆ. ಮನುಷ್ಯನ ಬದುಕಿಗೆ ಬೆನ್ನೆಲುಬಾಗಬೇಕಾದ ಮಾನವೀಯ ಮೌಲ್ಯಗಳು ದಿನದಿಂದ ದಿನಕ್ಕೆ ಮಗ್ಗುಚ್ಚುತ್ತಿರುವ ಈ ಕಾಲಘಟ್ಟದಲ್ಲಿ, ದ್ವೇಷದ ಅಮಲು ಮನುಷ್ಯನನ್ನು ಎಷ್ಟು ಕೆಳಮಟ್ಟಕ್ಕೆ ಇಳಿಸಬಹುದು ಎಂಬುದಕ್ಕೆ ಈ ಘಟನೆ ಭೀಕರ ಉದಾಹರಣೆಯಾಗಿದೆ. ಕ್ಷುಲ್ಲಕ ಕಾರಣಕ್ಕಾಗಿ ನಡೆದ ಈ ಹಲ್ಲೆ ಕೇವಲ ಇಬ್ಬರು ಅಥವಾ ಒಂದೆರಡು ಕುಟುಂಬಗಳ ನಡುವಿನ ವೈಯಕ್ತಿಕ ದ್ವೇಷದ ಕಥೆಯಲ್ಲ; ಇದು ನಮ್ಮ ಸಮಾಜ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದನ್ನು ಪ್ರಶ್ನಿಸುವ ಕಟು ವಾಸ್ತವ. ಸಹಾನುಭೂತಿ, ಸಹಾಯ, ಬೆಂಬಲ ಎಂಬ ಪದಗಳಿಗೆ ಇಲ್ಲಿ ಯಾವುದೇ ಮೌಲ್ಯ ಉಳಿದಿಲ್ಲವೇ ಎಂಬ ಪ್ರಶ್ನೆಯನ್ನು ಈ ಘಟನೆ ನಮ್ಮ ಮುಂದಿಟ್ಟು ಹೋಗಿದೆ.**

**ಪಾಂ**ಡವಪುರ ತಾಲ್ಲೂಕಿನಲ್ಲಿ ನಡೆದ ಈ ಪಾಶವಿ ಕೃತ್ಯ, ಪ್ರೀತಿ ಮತ್ತು ಮದುವೆಯಂತಹ ವೈಯಕ್ತಿಕ ನಿರ್ಧಾರಗಳಿಗೆ ನೆರವಾಗುವುದೇ ಈ ಕಾಲಘಟ್ಟದಲ್ಲಿ ಅಪರಾಧವಾಗಿಬಿಟ್ಟಿದೆಯೇ ಎಂಬ ಗಂಭೀರ ಪ್ರಶ್ನೆಯನ್ನು ಎತ್ತಿದೆ. ಪ್ರಕಾಶ್ ಎಂಬ ಯುವಕ, ಯುವತಿಯೊಬ್ಬಳಿಗೆ ಪ್ರೀತಿಸಿ ಮದುವೆಯಾಗಲು ಸಹಾಯ ಮಾಡಿದ್ದೇ ಈ ಹಿಂಸಾಚಾರಕ್ಕೆ ಮೂಲ ಕಾರಣವಾಗಿದೆ ಎಂಬುದು ತಿಳಿದಾಗ, ಯಾವುದೇ ಸಂವೇದನಾಶೀಲ ಮನಸ್ಸು ಮರುಗದೇ ಇರಲಾರದು. ಸಮಾಜದಲ್ಲಿ ಒಬ್ಬರಿಗೆ ಸಹಾಯ ಮಾಡುವುದು ಮಾನವೀಯತೆಯ



ಪ್ರಕಾಶನಿಗೆ ಸೈಜುಗಲ್ಲಿನಿಂದ ಹೊಡೆಯುತ್ತಿರುವುದು

ಸಂಕೇತವಾಗಬೇಕು. ಆದರೆ ಇಲ್ಲಿ ಸಹಾಯವೇ ಅಪರಾಧವಾಗಿ ಪರಿಗಣಿಸಲ್ಪಟ್ಟಿದೆ. ಪ್ರೀತಿ ಎಂಬ ಭಾವನೆಗೆ ಬೆಂಬಲ ನೀಡಿದ ತಪ್ಪಿಗೆ, ಕ್ರೌರ್ಯವೇ ಉತ್ತರವಾಗಿ ಬಂದಿರುವುದು ನಮ್ಮ ಸಾಮಾಜಿಕ ಮನಸ್ಥಿತಿಯ ಭಯಾನಕ ಅಧಃಪತನವನ್ನು ಸೂಚಿಸುತ್ತದೆ.

ಯಾರೋ ಇಬ್ಬರ ಪ್ರೇಮ ವಿವಾಹಕ್ಕೆ ಸಾಕ್ಷಿಯಾದುದನ್ನು ಸಹಿಸಲಾರದೆ, ಗಿರೀಶ್ ಮತ್ತು ಆತನ ತಂಡದೊಳಗಿನ ದ್ವೇಷ ನಿಧಾನವಾಗಿ ಕುದಿಯುತ್ತಿತ್ತು. ಆ ದ್ವೇಷವು ಕೊನೆಗೆ ಸೇಡಿನ ರೂಪ ತಾಳಿತು. ಪ್ರಕಾಶ್ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದಲೇ ಅವರು ಹೊಂಚು ಹಾಕಿದ್ದು, ಈ ದ್ವೇಷದ ಬೆಂಕಿಗೆ ಬಲಿಯಾದವರು ಪ್ರಕಾಶ್ ಮಾತ್ರವಲ್ಲದೆ, ಅವರ ಬಾವ್ಮೈದ ಬೊಮ್ಮಲಾಪುರ ನವೀನ್ ಕೂಡ ಆಗಿದ್ದಾರೆ. ಒಬ್ಬರಿಗೆ ಸಹಾಯ ಮಾಡಿದ ತಪ್ಪಿಗೆ, ಮತ್ತೊಬ್ಬರಿಗೆ ರಕ್ತಸಿಕ್ತ ಹಲ್ಲೆಯ ಶಿಕ್ಷೆ ನೀಡಲಾಗಿದೆ ಎಂಬುದು ಮನುಷ್ಯತ್ವದ ವಿರುದ್ಧದ ವಿಕೃತ ಮನಸ್ಥಿತಿಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇದು ಕೇವಲ ದೈಹಿಕ ಹಲ್ಲೆಯಲ್ಲ; ಮಾನವೀಯ ಮೌಲ್ಯಗಳ ಮೇಲಿನ ನೇರ ದಾಳಿಯಾಗಿದೆ.





ಆಸ್ಪತ್ರೆಯಲ್ಲಿ ಬಿದ್ದಿರುವ ಪ್ರಕಾಶ

ಫೆಬ್ರವರಿ 22ರಂದು ಪಾಂಡವಪುರ ತಾಲ್ಲೂಕಿನ ಕನಗನಹಳ್ಳಿಯಲ್ಲಿ ನಡೆದ ಈ ದಾಳಿ ಕ್ರೌರ್ಯದ ಎಲ್ಲ ಮಿತಿಗಳನ್ನು ಮೀರಿದೆ. ಗುಂಪಾಗಿ ದಾಳಿ ನಡೆಸಿದ ಆರೋಪಿಗಳು, ಕೇವಲ ಕೈಕಾಲುಗಳಿಂದ ಹೊಡೆದು ನಿಲ್ಲದೆ, ಕಲ್ಲು ಚಪ್ಪಡಿ ಮತ್ತು ಸೈಜ್‌ಗಲ್ಲುಗಳನ್ನು ಬಳಸಿಕೊಂಡು ನವೀನ್ ಅವರ ಕಾಲನ್ನು ಜಜ್ಜಿ ಹಾಕಿದ್ದಾರೆ. ಈ ಹಲ್ಲೆಯ ಉದ್ದೇಶ ಕ್ಷಣಿಕವಾಗಿ ನೋವು ನೀಡುವುದಲ್ಲ; ಎದುರಾಳಿಯನ್ನು ಶಾಶ್ವತವಾಗಿ ಅಂಗವೈಕಲ್ಯಕ್ಕೆ ತಳ್ಳುವ, ಜೀವನಪೂರ್ತಿ ಹಿಂಸೆಯ ಗುರುತು ಉಳಿಸುವ ಕ್ರೂರ ಮನೋಭಾವ ಇದರಲ್ಲಿ ಅಡಗಿದೆ. ಮನುಷ್ಯನೊಬ್ಬ ಮತ್ತೊಬ್ಬ ಮನುಷ್ಯನ ಮೇಲೆ ಇಷ್ಟೊಂದು ಅಮಾನುಷವಾಗಿ ವರ್ತಿಸಬಲ್ಲನೆ ಎಂಬುದೇ ಇಲ್ಲಿ ದೊಡ್ಡ ಪ್ರಶ್ನೆಯಾಗಿದೆ.


ಇಷ್ಟಕ್ಕೂ ನಿಲ್ಲದ ಈ ಕಿಡಿಗೇಡಿಗಳು, ತಮ್ಮ ವಿಕೃತಿಯನ್ನು ಮತ್ತೊಂದು ಹಂತಕ್ಕೆ ಕರೆದೊಯ್ದಿದ್ದಾರೆ. ಈ ಭೀಕರ ಹಲ್ಲೆಯ ದೃಶ್ಯಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದು, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ ಎಂಬುದು ಅತ್ಯಂತ ಆತಂಕಕಾರಿ ವಿಷಯ. ಕಾಲು ಮುರಿಯುವ ಭೀಕರ ದೃಶ್ಯಗಳನ್ನು ವಿಡಿಯೋ ಮಾಡಿ ಹಂಚಿಕೊಳ್ಳುವುದು ಕೇವಲ ವಿಕೃತ ಮನರಂಜನೆಯಲ್ಲ; ಅದು ಸಮಾಜದಲ್ಲಿ ಭಯ ಹುಟ್ಟಿಸುವ, ತಮ್ಮ ಶಕ್ತಿಯನ್ನು ಪ್ರದರ್ಶಿಸುವ ಹೊಸ ರೀತಿಯ ಅಪರಾಧ ತಂತ್ರವಾಗಿದೆ. ಕಾನೂನಿನ ಬಗ್ಗೆ ಯಾವುದೇ ಭಯವಿಲ್ಲದೆ, ಸಾರ್ವಜನಿಕವಾಗಿ ಇಂತಹ ಕೃತ್ಯಗಳನ್ನು ಎಸಗಿ, ಅದನ್ನು ಜಾಲತಾಣಗಳಲ್ಲಿ ಪ್ರದರ್ಶಿಸುವುದು ಅಪರಾಧದ ಉನ್ಮಾದ ಎಷ್ಟರ ಮಟ್ಟಿಗೆ ಹೋಗಿದೆ ಎಂಬುದನ್ನು ತೋರಿಸುತ್ತದೆ.

ಡಿಜಿಟಲ್ ತಂತ್ರಜ್ಞಾನ ಮಾನವ ಜೀವನವನ್ನು ಸುಲಭಗೊಳಿಸಬೇಕಾದ ಸಾಧನವಾಗಬೇಕಿತ್ತು. ಆದರೆ ಇಲ್ಲಿ ಅದು ಕ್ರೌರ್ಯವನ್ನು ಪ್ರದರ್ಶಿಸುವ ವೇದಿಕೆಯಾಗಿರುವುದು ನಾಗರಿಕ ಸಮಾಜಕ್ಕೆ ದೊಡ್ಡ ಎಚ್ಚರಿಕೆಯಾಗಿದೆ. ಹಿಂಸೆಯನ್ನು ಸೆರೆಹಿಡಿದು ವೈರಲ್ ಮಾಡುವ ಈ ಮನಸ್ಥಿತಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಅಪಾಯಕಾರಿ ಪರಿಣಾಮಗಳಿಗೆ ಕಾರಣವಾಗುವ ಸಾಧ್ಯತೆಯನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಇಂದು ವಿಡಿಯೋ, ನಾಳೆ ಅದನ್ನು ಅನುಕರಿಸುವ ಇನ್ನೊಂದು ಗುಂಪು ಈ ಸರಪಳಿ ಸಮಾಜವನ್ನು ಯಾವ ಮಟ್ಟಕ್ಕೆ ಕೊಂಡೊಯ್ಯಬಹುದು ಎಂಬುದನ್ನು ಗಂಭೀರವಾಗಿ ಚಿಂತಿಸಬೇಕಾದ ಕಾಲ ಇದು.

ಘಟನೆ ನಡೆದ ಬಳಿಕ ಆರೋಪಿಗಳು ಕಾನೂನಿನಿಂದ ತಪ್ಪಿಸಿಕೊಳ್ಳಲು ತಲೆಮರೆಸಿಕೊಂಡರು. ಆದರೆ ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ಪಾಂಡವಪುರ ಠಾಣೆಯ ಇನ್ಸ್‌ಪೆಕ್ಟರ್ ಶರತ್ ಕುಮಾರ್ ಅವರ ನೇತೃತ್ವದ ವಿಶೇಷ ಪೊಲೀಸ್ ತಂಡ ಕ್ಷಿಪ್ರ ಕಾರ್ಯಾಚರಣೆ ಆರಂಭಿಸಿತು. ಆರೋಪಿಗಳು ಸಂಬಂಧಿಕರ ಮನೆಗಳಲ್ಲಿ, ಬೇರೆ ಬೇರೆ ಸ್ಥಳಗಳಲ್ಲಿ ಅಡಗಿಕೊಂಡಿದ್ದರೂ, ಪೊಲೀಸರ ಇಂಟೆಲಿಜೆನ್ಸ್ ಮತ್ತು ಚಾಣಾಕ್ಷತನದ ಮುಂದೆ ಅವರ ಯಾವ ತಂತ್ರವೂ ಕೆಲಸ ಮಾಡಲಿಲ್ಲ. ಹಂತ ಹಂತವಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಒಟ್ಟು 14 ಆರೋಪಿಗಳ ಪೈಕಿ 11 ಮಂದಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.



ಜಿಲ್ಲಾ ಎಸ್ಪಿ ಕೆ. ಶೋಭಾರಾಣಿ



ಸಿಪಿಐ ಹೆಚ್.ಡಿ. ಶರತ್‌ಕುಮಾರ್

ಬಂಧಿತ ಆರೋಪಿಗಳಲ್ಲಿ ಗಿರೀಶ್, ಮದ್ದಪ್ಪ, ಪ್ಲಗ್ ಮಂಜ, ಗಣೇಶ, ಶಿವಣ್ಣ, ನಿಂಗಣ್ಣ ಸೇರಿದಂತೆ ಇತರ ಐವರು ಸೇರಿದ್ದಾರೆ. ಕಾನೂನಿನ ಭಯವಿಲ್ಲದೆ ಸಾರ್ವಜನಿಕವಾಗಿ ಇಂತಹ ಭೀಕರ ಕೃತ್ಯಗಳನ್ನು ಎಸಗುವವರಿಗೆ ಈ ಬಂಧನ ಒಂದು ಎಚ್ಚರಿಕೆ ಆಗಬೇಕು. ಆದರೆ ಬಂಧನವೇ ಸಾಕೆ? ಎಂಬ ಪ್ರಶ್ನೆಯೂ ಇಲ್ಲಿ ಸಹಜವಾಗಿ ಉದ್ಭವಿಸುತ್ತದೆ. ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಕಠಿಣ ಕಾನೂನು ಕ್ರಮಗಳ ಜೊತೆಗೆ ಸಾಮಾಜಿಕ ಜಾಗೃತಿ ಅತ್ಯಗತ್ಯವಾಗಿದೆ.



ಒಬ್ಬ ವ್ಯಕ್ತಿಯ ಪ್ರೀತಿ ಅಥವಾ ಸಹಾಯಕ್ಕಾಗಿ ಇಂತಹ ಹಿಂಸಾತ್ಮಕ ಶಿಕ್ಷೆ ನೀಡುವ ಸಮಾಜ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದು ನಮ್ಮ ಮುಂದಿರುವ ಗಂಭೀರ ಪ್ರಶ್ನೆ. ಸಹಾಯ ಮಾಡುವವರೇ ಭಯಪಡುವಂತಹ ವಾತಾವರಣ ನಿರ್ಮಾಣವಾದರೆ, ಮಾನವೀಯತೆ ಎಂಬ ಪದಕ್ಕೆ ಅರ್ಥವೇ ಉಳಿಯುತ್ತದೆಯೇ? ಕ್ರೌರ್ಯವನ್ನು ಸಂಭ್ರಮಿಸುವ, ಅದನ್ನು ವಿಡಿಯೋ ಮಾಡಿ ಹಂಚಿಕೊಳ್ಳುವ ಈ ವಿಕೃತ ಮನಸ್ಥಿತಿ ಕ್ಯಾನ್ಸರ್‌ನಂತೆ ಸಮಾಜದಲ್ಲಿ ಹರಡುತ್ತಿದೆ. ಇದನ್ನು ಈಗಲೇ ತಡೆಯದಿದ್ದರೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಭೀಕರ ರೂಪ ಪಡೆಯುವ ಅಪಾಯವಿದೆ.

ಇಂದು ನಾವು ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ನಿಂತಿದ್ದೇವೆ. ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮಾನವೀಯ ಮೌಲ್ಯಗಳಿಗಿಂತ, ಹಿಂಸೆಯನ್ನು ಸೆರೆಹಿಡಿಯುವ ಮೊಬೈಲ್ ಕ್ಯಾಮೆರಾವೇ ದೊಡ್ಡದಾಯಿತೇ? ನಮ್ಮ ಮನಸಾಕ್ಷಿ ಸತ್ತು ಹೋಗಿದೆಯೇ? ಅಥವಾ ನಾವು ನೋಡುತ್ತಾ ಮೌನವಾಗಿರುವ ಮೂಲಕ ಈ ವಿಕೃತಿಗೆ ಸಹಕಾರ ನೀಡುತ್ತಿದ್ದೇವೆಯೇ? ಈ ಪ್ರಶ್ನೆಗಳಿಗೆ ಉತ್ತರ ಹುಡುಕದಿದ್ದರೆ, ಪಾಂಡವಪುರದಂತಹ ಘಟನೆಗಳು ನಾಳೆ ಇನ್ನೊಂದು ಊರಲ್ಲಿ, ಇನ್ನೊಂದು ಹೆಸರಿನಲ್ಲಿ ಮರುಕಳಿಸುವುದು ಖಚಿತ. ಛೇ... ಎಂಥ ಕಾಲಘಟ್ಟದಲ್ಲಿ ಬದುಕುತ್ತಿದ್ದೇವಪ್ಪ ನಾವು!!!

# ಸೌಜನ್ಯ ಫೈಲ್ಸ್



21

ನಿರೂಪಣೆ :

**ಮೋಹನ್ ಬೋಳಂಗಡಿ**

# ಸಹಪಾಠಿ ಜೊತೆಯಲ್ಲಿ ಪ್ರಯಾಣಿಸಿದ್ದ ಸೌಜನ್ಯ!!

ಸೌಜನ್ಯ ಪ್ರಕರಣದ ವಿಚಾರಣೆ ಬೆಂಗಳೂರಿನ 50ನೇ ಹೆಚ್ಚುವರಿ ನಗರ ಮತ್ತು ಸಿವಿಲ್ ನ್ಯಾಯಾಲಯದಲ್ಲಿ ನ್ಯಾಯಾಧೀಶೆ ರೇಖಾ ಬಿ.ಎಸ್. ಅವರ ಸಮ್ಮುಖದಲ್ಲಿ ನಡೆದಿತ್ತು. ಹೈಕೋರ್ಟ್ ಸೂಚನೆಯಂತೆ ಆ ಪ್ರಕರಣದ ಪ್ರಮುಖ ಸಾಕ್ಷಿದಾರರ ವಿಚಾರಣೆ ನಡೆಯುತ್ತಿತ್ತು. ಈ ಪ್ರಕರಣದ 8ನೇ ಸಾಕ್ಷಿ 20ರ ಹರೆಯದ ಜಾಹ್ನವಿ. ಧರ್ಮಸ್ಥಳದ ಪುದುವೆಟ್ಟು ಗ್ರಾಮದ ಜಾಹ್ನವಿ ಚೆನ್ನಯ್ಯ ಗೌಡ ಅವರ ಮಗಳು. ಎಸ್‌ಡಿ.ಎಂ. ಕಾಲೇಜು ಉಜಿರೆ ಇಲ್ಲಿನ ವಿದ್ಯಾರ್ಥಿನಿ. ಈಕೆ ಕೃತ್ಯ ನಡೆದ ದಿನದಂದು ಸೌಜನ್ಯಳೊಂದಿಗೆ ಬಸ್ಸಿನಲ್ಲಿ ಪ್ರಯಾಣಿಸಿದವಳು. ಸೌಜನ್ಯಳೊಂದಿಗೆ ಆತ್ಮೀಯತೆಯಿಂದ ಇದ್ದವಳು. ಆ ಕಾರಣದಿಂದಾಗಿ ಆಕೆಯನ್ನು ಸ್ಥಳೀಯ ಪೊಲೀಸರು, ಸಿಓಡಿ ಮತ್ತು ಸಿಬಿಐ ಅಧಿಕಾರಿಗಳು ಸಾಕ್ಷಿಯನ್ನಾಗಿ ಪರಿಗಣಿಸಿದ್ದರು. ಆಕೆ ನ್ಯಾಯಾಲಯದಲ್ಲಿ ಸಿಬಿಐ ಪರ ವಕೀಲ ಶಿವಾನಂದ ಪೆರ್ಲ ಅವರ ಮುಖ್ಯ ವಿಚಾರಣೆಗೆ ಗುರಿಯಾಗಿದ್ದರು. ಆ ವಿಚಾರಣೆಯಲ್ಲಿ ಆಕೆ ನ್ಯಾಯಾಲಯದ ಮುಂದೆ ಹೇಳಿಕೊಂಡದ್ದು ಇಷ್ಟು.

2012ರಲ್ಲಿ ಎಸ್‌ಡಿಎಂ ಕಾಲೇಜು ಉಜಿರೆಯಲ್ಲಿ ಕಲಾವಿಭಾಗದಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದೆ. ಸೌಜನ್ಯ ನನ್ನ ಗೆಳತಿ ಹಾಗೂ ಸಹಪಾಠಿ. ಸೌಜನ್ಯ ಒಳ್ಳೆಯ ಹುಡುಗಿಯಾಗಿದ್ದು, ಯಾವುದೇ ರೀತಿಯ ಕೆಟ್ಟ ಮಾತುಗಳನ್ನು ಆಡುತ್ತಿರಲಿಲ್ಲ. ದಿನಾಂಕ 9.10.2012ರಂದು ಸಂಜೆ 6.00 ಗಂಟೆಯ ವೇಳೆಗೆ ಸೌಜನ್ಯ ಕಾಣೆಯಾಗಿದ್ದಾಳೆ ಎಂದು ಗೊತ್ತಾಯಿತು. ಆ ದಿನ ಆಕೆ ಕಾಲೇಜಿಗೆ ಬಂದಿದ್ದಳು. ನಾವು ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಉಜಿರೆಯಿಂದ ಒಟ್ಟಿಗೆ ಧರ್ಮಸ್ಥಳಕ್ಕೆ ಬಂದೆವು. ಸಂಜೆ 3.30ರಿಂದ 3.45 ಗಂಟೆಗೆ ಉಜಿರೆ ಬಿಟ್ಟೆವು. 4.00 ಗಂಟೆಗೆ ಸೌಜನ್ಯ ನೇತ್ರಾವತಿ ಸ್ನಾನಘಟ್ಟದ ಬಳಿ ಇಳಿದುಕೊಂಡು ಅವರ ಮನೆ ಕಡೆ ಹೋದಳು. ನಾನು ಅದೇ ಬಸ್ಸಿನಲ್ಲಿ ಮುಂದೆ ಹೋಗಿ ಧರ್ಮಸ್ಥಳದಲ್ಲಿ ಇಳಿದುಕೊಂಡೆನು. ಆದಿನ ಮಧ್ಯಾಹ್ನ 12.00 ಗಂಟೆಯವರೆಗೆ ಪರೀಕ್ಷೆ ಇತ್ತು. ನಂತರ 3.15ರ ತನಕ ಸ್ಪೆಷಲ್ ಕ್ಲಾಸ್ ಇತ್ತು. ನಾನು ಆ ದಿನ ಸೌಜನ್ಯಳಿಗೆ ತಿಂಡಿ ಕೊಡಲು ಹೋದಾಗ ಆಕೆ ತೆಗೆದುಕೊಳ್ಳಲಿಲ್ಲ. ನಾನು ಹೊಸ ಅಕ್ಕಿ ಊಟ ಸಮಾರಂಭಕ್ಕೆ ಹೋಗಬೇಕಿದ್ದು, ಮನೆಗೆ ಹೋಗಿ ಊಟ ಮಾಡುತ್ತೇನೆ ಎಂದು ಹೇಳಿದಳು. ಆ ಕಾರಣ ಆಕೆ ಏನೂ ತಿಂದಿರಲಿಲ್ಲ. ಮಾರನೇ ದಿನ ಸೌಜನ್ಯಳ ಮನೆಯವರು ಫೋನ್ ಮಾಡಿ ಸೌಜನ್ಯ ತೀರಿಕೊಂಡಿದ್ದಾಳೆ ಸ್ನಾನಘಟ್ಟದ ಬಳಿ ಶವ ಸಿಕ್ಕಿದೆ ಎಂದು ಹೇಳಿದರು. ಸಿಬಿಐನವರು ಬಂದು ನನ್ನ ಹೇಳಿಕೆ ಮಾಡಿಕೊಂಡರು ಎಂದು ಜಾಹ್ನವಿ ಮುಖ್ಯ ವಿಚಾರಣೆಯಲ್ಲಿ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದರು.



ಮೋಹಿತ್ ಕುಮಾರ್

ಆರೋಪಿ ಪರ ವಕೀಲ ಮೋಹಿತ್ ಕುಮಾರ್‌ರವರ ಪಾಟೀ ಸವಾಲಿಗೆ ಉತ್ತರಿಸಿದ ಜಾಹ್ನವಿ ನಾವಿಬ್ಬರು ಒಂದೇ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದೆವು. ಆ ಸಮಯದಲ್ಲಿ ನಮ್ಮ ಬಳಿ ಮೊಬೈಲ್ ಫೋನ್ ಇರಲಿಲ್ಲ. ಆ ದಿನ ಬಸ್ಸಿನಲ್ಲಿ ಹೆಚ್ಚಿನ ಪ್ರಯಾಣಿಕರು ಇರಲಿಲ್ಲ. ನಾನು, ಸೌಜನ್ಯ ಮತ್ತು ಅಶ್ರತ್ ಖಾಲಿದ್ ಆ ಬಸ್ಸಿನಲ್ಲಿದ್ದೆವು. ನಾವು ಬೇರೆ ಬೇರೆ ಕಡೆ ಸೀಟಿನಲ್ಲಿ ಕುಳಿತಿದ್ದೆವು. ನಾನು ಚಾಲಕನ ಕಡೆ ಕುಳಿತಿದ್ದೆನೋ ಇಲ್ಲವೋ ನೆನಪಿಲ್ಲ. ಮಣ್ಣ ಸಂಕದ ಬಳಿ ಸೌಜನ್ಯ ಮತ್ತು ಅಶ್ರತ್ ಖಾಲಿದ್ ಇಳಿಯಬೇಕಾಗಿದ್ದ ಬಸ್ ಸ್ಟಾಪ್ ಅಂದರೆ ಸರಿ ಅದು ರಸ್ತೆಯ ಬಲಭಾಗಕ್ಕೆ ಇದೆ. ಬಸ್‌ಸ್ಟಾಪ್‌ನಲ್ಲಿ ಬಸ್ ನಿಂತಿದ್ದಾಗ ಮಳೆ ಬರುತ್ತಿತ್ತು. ಸೌಜನ್ಯ ಕೊಡೆ ಹಿಡಿದುಕೊಂಡಿದ್ದಳು ಎಂಬ ಬಗ್ಗೆ ನೆನಪಿಲ್ಲ. ಆ ಬಸ್‌ಸ್ಟಾಪಿನಲ್ಲಿ ಅಶ್ರತ್ ಮತ್ತು ಸೌಜನ್ಯ ಒಟ್ಟಿಗೆ ಇಳಿದರು. ನಾನು ಬಸ್ಸಿನಲ್ಲಿ ಕುಳಿತಿದ್ದಾಗ ಎಡಬದಿಯಲ್ಲಿದ್ದ ಬಸ್‌ಸ್ಟಾಪ್‌ಕಡೆ ನೋಡಲಿಲ್ಲ. ಸೌಜನ್ಯಳ ಮನೆಗೆ ಹೋಗುವ ದಾರಿ ಬಸ್‌ಸ್ಟಾಪ್‌ನಿಂದ 10 ಅಡಿ ದೂರ ಇದೆ. ಅಶ್ರತ್ ಯಾವ ಕಡೆಯಿಂದ ಬರುತ್ತಿದ್ದಳು ಎಂದು ಗೊತ್ತಿಲ್ಲ. ಸೌಜನ್ಯಳ ಮನೆಯವರು ಅಂದು ಸಂಜೆ 6.00 ಗಂಟೆಗೆ ಫೋನ್ ಮಾಡಿ ಸೌಜನ್ಯ ನಿಮ್ಮೊಟ್ಟಿಗೆ ಬಂದಿದ್ದಾಳ ಎಂದು ಕೇಳಿದ್ದರು. ಆ ದಿನದಿಂದ ಎರಡು ವಾರಗಳ ಕಾಲ ಕಾಲೇಜಿಗೆ ರಜೆ ಇತ್ತು. ನಾನು ಅಶ್ರತ್‌ಳನ್ನು ಸಂಪರ್ಕಿಸಲು ಅವಳ ಫೋನ್ ನಂ. ನನ್ನಬಳಿ ಇರಲಿಲ್ಲ. ಆಕೆ ನಮ್ಮ ಜೊತೆ ನಮ್ಮ ತರಗತಿಯಲ್ಲಿಯೇ ಓದುತ್ತಿದ್ದಳು. ಕಾಲೇಜು ಮತ್ತೆ ಶುರುವಾದಾಗ ಅಶ್ರತ್ ಕಾಲೇಜಿಗೆ ಬಂದಿದ್ದಳು. ನಾನು ಅಶ್ರತ್‌ಳನ್ನು ಆ ದಿನ ಅಂದರೆ 9.10.2012ರಂದು ಸೌಜನ್ಯ ಎಲ್ಲಿ ಹೋಗಿದ್ದಳು ಎಂದು ವಿಚಾರ ಮಾಡಲಿಲ್ಲ. ಅದೇ ರೀತಿ ಅಶ್ರತ್‌ಳನ್ನು ಆ ದಿನ ಬಸ್‌ಸ್ಟಾಪಿನಲ್ಲಿ ಅನುಮಾನಾಸ್ಪದ ವ್ಯಕ್ತಿಗಳು ಇದ್ದರಾ ಎಂದು ವಿಚಾರ ಮಾಡಲಿಲ್ಲ ಎಂದು ಅಡ್ಡ ಪ್ರಶ್ನೆಗಳಿಗೆ ಉತ್ತರಿಸಿದಳು.



ಸಂತೋಷ್ ರಾವ್

ಹನ್ನೊಂದನೇ ತಾರೀಕಿನಂದು ಪತ್ರಿಕೆಯಲ್ಲಿ ಸೌಜನ್ಯಳ ಕೊಲೆಯಾಗಿದೆ ಮತ್ತು ಕೆಲವು ಜನರ ಮೇಲೆ ಅನುಮಾನ ಇದೆ ಎಂದು ವರದಿಯಾಗಿತ್ತು. ಉದಯ್ ಜೈನ್, ಧೀರಜ್ ಜೈನ್ ಮತ್ತು ಮಲ್ಲಿಕ್ ಜೈನ್ ಅವರ ಮೇಲೆ ಅನುಮಾನ ಇದೆ ಎಂದು ದಿನಪತ್ರಿಕೆಯಲ್ಲಿ ವರದಿ ಪ್ರಕಟವಾದ ಬಗ್ಗೆ ನೆನಪಿಲ್ಲ ಎಂದು ಆರೋಪಿ ಪರ ವಕೀಲರ ಪ್ರಶ್ನೆಗೆ ಉತ್ತರಿಸಿದ ಜಾಹ್ನವಿ ಸೌಜನ್ಯಳ ಕೊಲೆಯ ಬಗ್ಗೆ ನಮ್ಮ ಕಾಲೇಜಿನ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ಮಾಡಿದ್ದವು ಎಂದು ಒಪ್ಪಿಕೊಂಡರು. ಆರೋಪಿಯ ಬಂಧನ ಆದ ನಂತರವೂ ಸಹ ಒಬ್ಬ ವ್ಯಕ್ತಿಯಿಂದ ಈ ಕೃತ್ಯ ಮಾಡಲು ಸಾಧ್ಯವಿಲ್ಲ ಇನ್ನೂ 3-4 ಜನರು ಸೇರಿ ಮಾಡಿರಬಹುದು ಎಂದು ಸಾರ್ವಜನಿಕರು ಮಾತನಾಡುತ್ತಿದ್ದರು. ಸೌಜನ್ಯಳ ನ್ಯಾಯಕ್ಕಾಗಿ ನಡೆದಂತಹ ಪ್ರತಿಭಟನೆಯಲ್ಲಿ ಸಾರ್ವಜನಿಕರೊಂದಿಗೆ ತಾನು ಕೂಡಾ ಸೇರಿಕೊಂಡಿದ್ದೆ ಎಂದು ಅವರು ನ್ಯಾಯಾಲಯಕ್ಕೆ ವಿವರಿಸಿದರು. ಈ ರೀತಿಯ ಪ್ರತಿಭಟನೆಗಳು ಕೃತ್ಯ ನಡೆದ ಒಂದು ವರ್ಷಗಳ ಕಾಲ ನಡೆದಿತ್ತು ಆ ಪ್ರತಿಭಟನೆಯ ಮೂಲ ಉದ್ದೇಶ ನಿಜವಾದ ಆರೋಪಿಗಳನ್ನು ಬಂಧಿಸಬೇಕು ಎಂದಿತ್ತು ಎಂದ ಜಾಹ್ನವಿ ಈಗಲೂ ಸಹ ಅಂದರೆ ಕೃತ್ಯ ನಡೆದು ನಾಲ್ಕು ವರ್ಷಗಳು ಕಳೆದರೂ ಸಾರ್ವಜನಿಕರು ಧೀರಜ್ ಜೈನ್, ಮಲ್ಲಿಕ್ ಜೈನ್ ಮತ್ತು ಉದಯ್ ಜೈನ್ ಅವರು ಈ ಕೃತ್ಯ ಎಸಗಿದ್ದಾರೆ ಎಂದು ಮಾತನಾಡಿಕೊಳ್ಳುತ್ತಿದ್ದಾರೆ ಎಂದು ನ್ಯಾಯಾಲಯಕ್ಕೆ ವಿವರಿಸಿದರು. ನ್ಯಾಯಾಲಯವು ಜಾಹ್ನವಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿತ್ತು.

ಜಾಹ್ನವಿಯವರ ವಿಚಾರಣೆಯಲ್ಲಿ ಕಂಡು ಬರುವ ಮುಖ್ಯ ಅಂಶ ಎಂದರೆ ಆರೋಪಿ ಪರ ವಕೀಲ ಮೋಹಿತ್ ಕುಮಾರ್ ಅವರು ಆರೋಪಿ ಸಂತೋಷ್‌ರಾವ್‌ನನ್ನು ಹೊರತುಪಡಿಸಿ ಇನ್ನೂ ಮೂವರನ್ನು ಆರೋಪಿಗಳೆಂದು ನ್ಯಾಯಾಲಯದ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಿದ್ದರು. ಪರಿಣಾಮವಾಗಿ ಸಂತೋಷ್‌ರಾವ್ ಮೇಲೆ ಇರುವ ಆರೋಪವು ಇತರ ಮೂವರ ಸೇರ್ಪಡೆಯಿಂದ ನ್ಯಾಯಾಲಯವು ಗೊಂದಲಕ್ಕೆ ಈಡಾಗಿ ಸಂಶಯದ ಸೃಷ್ಟಿ ಮಾಡುವ ಪ್ರಯತ್ನವಾಗಿತ್ತು ಎಂಬುದು ಸ್ಪಷ್ಟವಾಗುತ್ತಿದೆ.



ಧೀರಜ್ ಜೈನ್



ಉದಯ್ ಜೈನ್



ಮಲ್ಲಿಕ್ ಜೈನ್

ಮೂರು ತನಿಖಾ ಸಂಸ್ಥೆಗಳು ಸೇರಿ ಸಲ್ಲಿಸಿದ್ದಂತಹ ಆರೋಪ ಪಟ್ಟಿಯಲ್ಲಿ ಸಂತೋಷ್‌ರಾವ್‌ನನ್ನು ಹೊರತುಪಡಿಸಿ ಇತರ ಆರೋಪಿಗಳ ಹೆಸರು ಇಲ್ಲ, ಅವರನ್ನು ಪೊಲೀಸರು, ಸಿಓಡಿ ಮತ್ತು ಸಿಬಿಐ ಅಧಿಕಾರಿಗಳು ಅಧಿಕೃತವಾಗಿ ವಿಚಾರಣೆಯನ್ನು ನಡೆಸಿರಲೂ ಇಲ್ಲ. ಕೇವಲ ಅವರ ಹೆಸರನ್ನು ನ್ಯಾಯಾಲಯದಲ್ಲಿ ವಿಚಾರಣೆಯ ಸಂದರ್ಭದಲ್ಲಿ ಸಾಕ್ಷಿಗಳ ಬಾಯಿಯಿಂದ ಹೇಳಿಸುವ ಪ್ರಯತ್ನವನ್ನು ಆರೋಪಿ ಪರ ವಕೀಲರು ಮಾಡಿ ಪ್ರಕರಣದ ವಿಚಾರಣೆಯ ದಿಕ್ಕು ತಪ್ಪಿಸಿದರು ಎಂಬ ಅಂಶ ಸ್ಪಷ್ಟವಾಗುತ್ತಿದೆ. ಆರೋಪಿ ಪರ ವಕೀಲರಿಗೆ ಪ್ರಕರಣದಲ್ಲಿ ಸಂಶಯದ ಲಾಭವನ್ನು ಸೃಷ್ಟಿಸಿ ಆರೋಪಿಗೆ ಜಾಮೀನು ಕೊಡಿಸುವ ಇರಾದೆ ಇದ್ದುದರಿಂದ ವಿಚಾರಣೆಯ ಹಂತದಲ್ಲಿ ಪ್ರಕರಣಕ್ಕೆ ಸಂಬಂಧಪಡದ ವ್ಯಕ್ತಿಗಳ ಹೆಸರುಗಳನ್ನು ಉಲ್ಲೇಖಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತಿದೆ.

ಮುಂದುವರಿಯುವುದು.....

---

4 ☞ ಈ ಕಾರ್ಯಗಳು ಸಾಂಪ್ರದಾಯಿಕ ರಾಜಕೀಯ ರಚನೆಗಳನ್ನು ಮೀರಿ ವಿಶ್ವಾಸವನ್ನು ಬೆಳೆಸುವ ಮತ್ತು ಸಾಮಾಜಿಕ ಬೆಂಬಲವನ್ನು ಕ್ರೋಢೀಕರಿಸುವ ಪ್ರಯತ್ನವೆಂದು ನೋಡಲಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ಪಟ್ಟಣದಲ್ಲಿ, ಅವರು ಇತ್ತೀಚೆಗೆ ಸಮುದಾಯ ಪ್ರತಿನಿಧಿ ಗಳೊಂದಿಗೆ ಜಿಲ್ಲಾ ಮಟ್ಟದ ಸಭೆ ನಡೆಸಿದರು, ಅಹಿಂದ ರಾಜಕೀಯದ ಪ್ರಮುಖ ಆಧಾರಸ್ತಂಭಗಳಾದ ಸಾಮಾಜಿಕ ನ್ಯಾಯ, ಶೈಕ್ಷಣಿಕ ಪ್ರಗತಿ ಮತ್ತು ಉದ್ಯೋಗಾವಕಾಶಗಳ ಕುರಿತು ಚರ್ಚೆಗಳನ್ನು ಕೇಂದ್ರೀಕರಿಸಿದರು.




ಸಿದ್ದರಾಮಯ್ಯ ಅವರ ನಂತರ ಅಹಿಂದ ನಾಯಕತ್ವದಲ್ಲಿ ಸ್ಪಷ್ಟ ಉತ್ತರಾಧಿಕಾರಿಯ ಅನುಪಸ್ಥಿತಿಯು ಒಂದು ನಿರ್ವಾತವನ್ನು ಸೃಷ್ಟಿಸಿದೆ ಎಂದು ರಾಜಕೀಯ ವೀಕ್ಷಕರುಅಭಿಪ್ರಾಯ ಪಟ್ಟಿದ್ದಾರೆ, ಇದನ್ನು ಜಾರಕಿಹೊಳಿ ತುಂಬಲು ಉತ್ಸುಕರಾಗಿದ್ದಾರೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರನ್ನಾಗಿ ಅವರನ್ನು ನೇಮಿಸುವುದರಿಂದ ಪಕ್ಷದೊಳಗೆ ಅಹಿಂದ ಬಲವರ್ಧನೆ ಮತ್ತಷ್ಟು ಬಲಗೊಳ್ಳುತ್ತದೆ ಎಂದು ಅವರ ಬೆಂಬಲಿಗರು ವಾದಿಸುತ್ತಾರೆ. ಜಾರಕಿಹೊಳಿ ಕಾಂಗ್ರೆಸ್ ರಚನೆಯೊಳಗೆ ಬಲವಾದ ಸಾಂಸ್ಥಿಕ ಪ್ರಭಾವವನ್ನು ಹೊಂದಿದ್ದಾರೆಂದು ನಂಬಲಾಗಿದೆ, ಇದು ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ದಲಿತ ಸಮುದಾಯಗಳನ್ನು ಸಜ್ಜುಗೊಳಿಸುವಲ್ಲಿ ಪ್ರಯೋಜನವಾಗುತ್ತದೆ ಎಂದು ಹೇಳಲಾಗುತ್ತಿದೆ.

ಮುಖ್ಯವಾಗಿ, ಸಿದ್ದರಾಮಯ್ಯ ಅವರ ಆಂತರಿಕ ವಲಯದೊಂದಿಗೆ ಹೊಂದಿಕೊಂಡ ವರ್ಗಗಳಿಂದ ಸತೀಶ್‌ಗೆ ಬೆಂಬಲವಿದೆ. ಭವಿಷ್ಯದಲ್ಲಿ ದಲಿತ ಮುಖ್ಯಮಂತ್ರಿಯಾಗುವ ಸಾಧ್ಯತೆಯ ಸುತ್ತ ಹೊಸ ಚರ್ಚೆಗಳು ಹೊರಹೊಮ್ಮುತ್ತಿರುವುದರಿಂದ, ಬದಲಾಗುತ್ತಿರುವ ರಾಜಕೀಯ ವಾತಾವರಣವು ಜಾರಕಿಹೊಳಿ ಪರವಾಗಿ ಕೆಲಸ ಮಾಡಬಹುದು.

**2028ರಲ್ಲಿ ಮುಖ್ಯಮಂತ್ರಿ ಹುದ್ದೆಗೆ ಜಾರಕಿಹೊಳಿ?!**

ಜಾರಕಿಹೊಳಿ ಈಗಾಗಲೇ ಸಾರ್ವಜನಿಕವಾಗಿ ತಮ್ಮನ್ನು ತಾವು ಮುಖ್ಯಮಂತ್ರಿ ಕುರ್ಚಿ ಆಕಾಂಕ್ಷಿ ಎಂದು ಘೋಷಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ, ಭವಿಷ್ಯದ ಯಾವುದೇ ನಾಯಕತ್ವದ ಪ್ರಯತ್ನಕ್ಕೆ 'ಅಹಿಂದ' ಏಕತೆಯನ್ನು ಬಲಪಡಿಸುವುದು ನಿರ್ಣಾಯಕವಾಗಿರುತ್ತದೆ ಎಂದು ರಾಜಕೀಯ ವಿಶ್ಲೇಷಕರು ನಂಬಿದ್ದಾರೆ.


ಸುಂದರ ಪರಿಸರದ ವಾತಾವರಣ


ದೇವಾಲಯದ ಹೆಬ್ಬಾಗಿಲು


ಬೆಟ್ಟದ ಮೇಲಿರುವ ದೇವಾಲಯ

# ಕನಕಪುರದ ಉದಾರಹಳ್ಳಿ ಶ್ರೀ ಸಿದ್ದೇಶ್ವರ ಸಿದ್ದಪ್ಪಾಜಿ ಬೆಟ್ಟ ಪ್ರವಾಸಿಗರ ತಾಣವಾದ ಪವಾಡ ಪುರುಷರ ದೇವಸ್ಥಾನ

**ಸುತ್ತಮುತ್ತಲಿನ ಬೆಟ್ಟಗುಡ್ಡಗಳ ನಡುವೆ ಸ್ವಚ್ಛಂದ ಪರಿಸರದ ಸೊಬಗಿನಲ್ಲಿ ಕಣ್ಮನ ಸೆಳೆಯುವ ಪ್ರಕೃತಿಯ ಸೌಂದರ್ಯದ ಬೆಟ್ಟದಲ್ಲಿ ನೆಲೆಸಿರುವ ಶ್ರೀ ಸಿದ್ದೇಶ್ವರ ಸಿದ್ದಪ್ಪಾಜಿ ಸ್ವಾಮಿಯು ಭಕ್ತರು ಮತ್ತು ಪ್ರವಾಸಿಗರನ್ನು ಕೈಬೀಸಿ ಕರೆದು, ಬರುವ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸಿ, ಪ್ರವಾಸಿಗರಿಗೆ ಪ್ರಕೃತಿಯ ಸೊಬಗನ್ನು ಕಣ್ತುಂಬಿಸಿ ಅವರ ಮನಸ್ಸು ಸಂತಸಗೊಳಿಸಿ ದಿನೇ ದಿನೇ ಪ್ರವಾಸಿಗರನ್ನು ಹೆಚ್ಚು ಆಕರ್ಷಿಸಿ ಸುಂದರ ಪ್ರವಾಸಿಗರ ತಾಣವಾಗುತ್ತಿರುವ ಶ್ರೀ ಕ್ಷೇತ್ರ ಉದಾರಹಳ್ಳಿಯ ಶ್ರೀ ಸಿದ್ದೇಶ್ವರ ಸಿದ್ದಪ್ಪಾಜಿ ದೇವಸ್ಥಾನ.**


**ಬೆಂ. ದಕ್ಷಿಣ**

✍ ಶಾಂತರಾಜು ಜಿ. ಕಲ್ಲಹಳ್ಳಿ


ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲ್ಲೂಕಿನ ಸೋಮೇದ್ಯಾಪನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉದಾಹರಹಳ್ಳಿ ಗ್ರಾಮದ ಬೆಟ್ಟದ ಮೇಲೆ ನೆಲೆಸಿರುವ ಶ್ರೀ ಸಿದ್ದೇಶ್ವರ ಸಿದ್ದಪ್ಪಾಜಿ ಸ್ವಾಮಿಗೆ ಸುಮಾರು 1200 ವರ್ಷಗಳ ಇತಿಹಾಸವಿದೆ ಎಂದು ಇಲ್ಲಿನ ಪೂರ್ವಿಕರು ಹೇಳುತ್ತಾರೆ. ಮೊದಲು ಈ ಬೆಟ್ಟದಲ್ಲಿ ಶ್ರೀ ಸಿದ್ದೇಶ್ವರ ಸ್ವಾಮಿಯು ನೆಲೆಗೊಂಡ ನಂತರ ಇಲ್ಲಿ ಸಿದ್ದಪ್ಪಾಜಿಯವರು ತಪಸ್ಸು ಮಾಡುವ ಸಂದರ್ಭದಲ್ಲಿ ಸಿದ್ದೇಶ್ವರ ಸ್ವಾಮಿ ಪ್ರತ್ಯಕ್ಷವಾಗಿ ಸಿದ್ದಪ್ಪಾಜಿ ಸ್ವಾಮಿಯವರಿಗೆ ಅನುಗ್ರಹ ನೀಡುತ್ತಿದ್ದರಂತೆ ಎಂಬ ವಿಚಾರ ಪುರಾಣಗಳು ಹೇಳುತ್ತಿವೆ. ಈ ಸ್ವಾಮಿ ನೆಲೆಸಿರುವ ಬೆಟ್ಟದ ಸುತ್ತಮುತ್ತಲಿನ 250 ಎಕರೆ ಪ್ರದೇಶ ಹೊಂದಿದ್ದು, ಸಿದ್ದೇಶ್ವರ ಸ್ವಾಮಿಯ ಮೂಲ ವಿಗ್ರಹ ಮೂರ್ತಿಯು ದಕ್ಷಿಣಾಭಿಮುಖವಾಗಿ ಇರುವುದರಿಂದ ಎಷ್ಟೋ ಕಷ್ಟಗಳು, ಇಷ್ಟಾರ್ಥಗಳು ನೆರವೇರುತ್ತವೆ ಎಂಬುದು ನಂಬಿಕೆ. ಇಲ್ಲಿ ಯಾವುದೇ ಕಾರಣಕ್ಕೂ ಮಾಂಸಾಹಾರ ಮತ್ತು ಮದ್ಯಪಾನ ಸೇವನೆಯಿಲ್ಲ.

ಈ ಹಿಂದೆ ಋಷಿಮುನಿಗಳಾದ ಸಿದ್ದೇಶ್ವರಸ್ವಾಮಿಯು ಇಲ್ಲಿ ತಪಸ್ಸು ಮಾಡಿದ ಈ ಸ್ಥಳದಲ್ಲಿ ಉದಾರಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರುಗಳು ಸುಮಾರು 50 ವರ್ಷದಿಂದ ಶಿವರಾತ್ರಿಯ ದಿನದಂದು ಶ್ರೀ ಸ್ವಾಮಿಯ ಸೇವೆಯನ್ನು ನೆರವೇರಿಸುತ್ತಾ ಬಂದಿದ್ದು, ಬೆಟ್ಟದ ಮೇಲೆ ತಪಸ್ಸು ಮಾಡಿದ್ದ ಹಳೆಯ ದೇಗುಲ ಮತ್ತು ಹಳೆಯ ಕಲ್ಯಾಣಿಯೂ ಸಹ ಇತ್ತು. ಇಲ್ಲಿನ ದೇವಾಲಯದ (ಕೊಣ) ಕಲ್ಯಾಣಿಯಲ್ಲಿ ಆಗಿನಿಂದಲೂ ಬರುತ್ತಿದ್ದ, ಅಂದರೆ ವರ್ಷಕ್ಕೊಮ್ಮೆ ಗ್ರಾಮದವರೆಲ್ಲ ಒಟ್ಟಾಗಿ ಬಂದು ಸ್ನಾನ ಮಾಡಿ ಪೂಜೆ ಸೇವಾಕಾರ್ಯಗಳನ್ನು ನೆರವೇರಿಸುತ್ತಿದ್ದು, ಶ್ರೀ ಸಿದ್ದೇಶ್ವರ ಸ್ವಾಮಿಯು ಲೋಕ ಕಲ್ಯಾಣಕ್ಕಾಗಿ ಸಂಚರಣೆ ಮಾಡುವ ಸಂದರ್ಭದಲ್ಲಿ ಸ್ಥಳೀಯ ಬಾಣಂತ ಮಾರಿಯಮ್ಮ ಬೆಟ್ಟದ ಕಾಡಿನಲ್ಲಿ ಅದೇ ಮಾರ್ಗವಾಗಿ ಸಂಚರಿಸುತ್ತಿದ್ದಾಗ ಅಲ್ಲಲ್ಲಿ ತಪಸ್ಸು ಮಾಡಲಾಗಿ ಮತ್ತೊಮಂದು ಮುರಕಣಿ ಗ್ರಾಮದ ವೀರ ಭದ್ರಸ್ವಾಮಿ ದೇವಾಲಯಕ್ಕೂ ಸಿದ್ದೇಶ್ವರ ಸ್ವಾಮಿಯವರು ಸಂಚರಣೆ ಮಾಡುತ್ತಿದ್ದರಂತೆ. ಈಗಲೂ ಸಹ ಸಿದ್ದೇಶ್ವರ ಸ್ವಾಮಿ ಬೆಟ್ಟದಿಂದ ಮುರಕಣಿ ವೀರಭದ್ರಸ್ವಾಮಿಯ ದೇವಾಲಯಕ್ಕೆ ಸುರಂಗ ಮಾರ್ಗವಿದೆಯಂತೆ. ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿನದಂದು ಶ್ರೀ ಸಿದ್ದೇಶ್ವರ ಸಿದ್ದಪ್ಪಾಜಿ ಬೆಟ್ಟದಿಂದ ವೀರಭದ್ರ ಸ್ವಾಮಿಯ ದೇವಾಲಯದ ನಡುವೆಯಿರುವ ಸುರಂಗ ಮಾರ್ಗ ಆದು ಹೋಗುವ ಬೆಟ್ಟಗುಡ್ಡಗಳ ನಡುವೆ ರಾತ್ರಿ ಸಮಯದಲ್ಲಿ ಬೆಳಕು ಜ್ಯೋತಿಯ ರೂಪದಲ್ಲಿ ಆಗಿನಿಂದಲೂ ಕಾಣಿಸುತ್ತಾ ಬಂದಿದ್ದು, ಈಗಲೂ ಸಹ ಪ್ರತಿ ಅಮಾವಾಸ್ಯೆ, ಹುಣ್ಣಿಮೆಯ ರಾತ್ರಿ ಕಾಣುತ್ತಿದೆ ಎಂದು ಪ್ರತ್ಯಕ್ಷ ದರ್ಶಿಗಳು ಹೇಳುತ್ತಾರೆ.


ಶ್ರೀ ಸಿದ್ದೇಶ್ವರ ಸ್ವಾಮಿ


ಬೆಟ್ಟದ ಮೇಲಿನ ವಿಹಂಗಮ ನೋಟ

ಈ ರೀತಿಯಾದ ಪವಾಡಗಳು ನಡೆದುಕೊಂಡು ಬರುತ್ತಿದ್ದಂತೆ, ಇತ್ತೀಚಿನ ದಿನಗಳಲ್ಲಿ ಗಾಣಾಳು ವೀರ ಭದ್ರಸ್ವಾಮಿ ಅರ್ಚಕರಾದ ಜಿ.ಸಿ. ವಿನಯ್‌ಕುಮಾರ್‌ರವರ ಮೇಲೆ ಶ್ರೀ ಸ್ವಾಮಿಯು ಬಂದು ದಕ್ಷಿಣಾಭಿಮುಖವಾಗಿ ನೆಲೆಸಿರುವ ಶ್ರೀ ಸಿದ್ದೇಶ್ವರ ಸ್ವಾಮಿಯು ಹೊಸ ದೇವಾಲಯದ ರೂಪ ಪಡೆದು ಜೀರ್ಣೋದ್ಧಾರವಾಗಿ ಅಪಾರ ಭಕ್ತಾದಿಗಳನ್ನು ಕರೆಸುಕೊಳ್ಳುವ ದಿನಗಳು ಬಂದಿದೆ ಎಂದು ತಿಳಿಸಿ ಕೊಡಲಾಗಿ, ಉದಾರಹಳ್ಳಿಯ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರುಗಳು ಸೇರಿ ಶ್ರೀ ಸಿದ್ದೇಶ್ವರ ಸಿದ್ದಪ್ಪಾಜಿಯ ದೇವಾಲಯವನ್ನು ಬೆಟ್ಟದ ಮೇಲೆ ನೂತನವಾಗಿ ನಿರ್ಮಿಸಲು ಮುಂದಾಗಿ ಒಂದು ಟ್ರಸ್ಟ್ ಸ್ಥಾಪಿಸಿ, ಅದರಿಂದ ಸಜುಮಾರು ಎರಡು ಕೋಟಿಗೂ ಹೆಚ್ಚು ಹಣ ಸಂಗ್ರಹ ಮಾಡಿ ನೂತನ ದೇವಾಲಯ ನಿರ್ಮಾಣ ಮಾಡಿದ್ದಾರೆ. ದೇವಾಲಯದ ಗೋಪುರವನ್ನು ಉದಾರಹಳ್ಳಿ ಗ್ರಾಮದ ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾದ ರಾಜಶೇಖರ್ ಮತ್ತು ಕುಟುಂಬದವರು ನಿರ್ಮಿಸಿದ್ದಾರೆ. ಮತ್ತು ಇಲ್ಲಿನ ಹಳೆಯ ಕಲ್ಯಾಣಿಯನ್ನು ಹೊಸ ರೂಪಕ್ಕೆ ತರುವ ಪ್ರಯತ್ನವನ್ನು ಜೊತೆಗೆ 108 ಶಿವಲಿಂಗಗಳನ್ನು ನಿರ್ಮಿಸಲು ಉದ?ಗಳಾದ ಕೆ.ಪಿ. ನಾಗೇಶ್‌ರವರು ನೆರವಾಗಿದ್ದಾರೆ. ಶ್ರೀಮತಿ ಜಯಶೀಲ ನಾಗೇಶ್‌ರವರು ದೇವಾಲಯದ ಗರುಡಗಂಬವನ್ನು ನಿರ್ಮಿಸಿದ್ದಾರೆ.


ಬೆಟ್ಟದ ಮೇಲಿರುವ ದೇವಾಲಯ

ಬೆಟ್ಟದ ಮೇಲಿರುವ ದೇವಾಲಯಕ್ಕೆ ಸುಗಮ ರಸ್ತೆಯನ್ನು ರಾಜಶೇಖರ್‌ರವರು ಮೊದಲು ಪ್ರಾರಂಭಿಸಿದ್ದರು. ನಂತರ ಎಂಎಲ್‌ಸಿ ಎಸ್. ರವಿರವರ ಅನುಧಾನದಲ್ಲಿ ಸುಮಾರು 50 ಲಕ್ಷ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್‌ರವರ ಅನುಧಾನದಲ್ಲಿ ಒಂದು ಕೋಟಿಗೂ ಹೆಚ್ಚು ವೆಚ್ಚದಲ್ಲಿ ರಸ್ತೆ ಸಂಪೂರ್ಣವಾಗಿ ನಿರ್ಮಾಣವಾಗಿದೆ. ಜೊತೆಗೆ ಮಾಜಿ ಎಂಪಿ ಡಿ.ಕೆ. ಸುರೇಶ್‌ರವರೂ ಸಹ ಸಹಕಾರ ನೀಡಿದ್ದರ ಫಲವಾಗಿ ಜನವರಿ 22, 2025ರಂದು ನೂತನ ದೇವಾಲಯ ಜೀರ್ಣೋದ್ಧಾರವಾಗಿ ಭಕ್ತರು, ಪ್ರವಾಸಿಗರು ಸುಗಮವಾಗಿ ಹೋಗಿ ಬರಲು ಅನುಕೂಲವಾಗಿದೆ. ಇಲ್ಲನ ಆಡಳಿತ ಮಂಡಳಿಯು ಕಾರ್ ಮತ್ತು ಇತರೆ ವಾಹನಗಳ ನಿಲುಗಡೆ, ಶೌಚಾಲಯ ಹಾಗೂ ದಾಸೋಹ ಕಟ್ಟಡ ನಿರ್ಮಾಣ ಮಾಡಲು ದೀಪಾಳಿಯಲ್ಲಿ ಗುದ್ದಲಿ ಪೂಜೆ ನೆರವೇರಿಸಿದ್ದಾರೆ.


ಶ್ರೀ ಸಿದ್ದೇಶ್ವರ ಸ್ವಾಮಿಯ ಬಸವ

ಶ್ರೀ ಸಿದ್ದೇಶ್ವರ ಸಿದ್ದಪ್ಪಾಜಿ ದೇವಾಲಯಕ್ಕೆ ಗಾಣಾಳು ಜಿ.ಸಿ. ವಿನಯ್‌ಕುಮಾರ್ ಕುಟುಂಬದಿಂದ ಬಸವನನ್ನು ದೇಗುಲ ಮಠದ ಶ್ರೀಗಳ ಮೂಲಕ ಕೊಟ್ಟಿದ್ದಾರೆ. ಸದ್ಯಕ್ಕೆ ಈ ದೇವಾಲಯ ಪ್ರೇಕ್ಷಣೀಯ ತಾಣವಾಗಿ, ಜೊತೆಗೆ ಸುತ್ತಮುತ್ತಲಿನ ಭಕ್ತರಿಗೆ ಇಷ್ಟಾರ್ಥ ದೇವರಾಗಿ, ಸಂತಾನಭಾಗ್ಯಯಿಲ್ಲದವರು ಈ ಕಲ್ಯಾಣಿಯ ನೀರಿನಲ್ಲಿ ಸ್ನಾನ ಮಾಡಿ ದೇವರಿಗೆ ಪೂಜೆ ಸಲ್ಲಿಸಿದರೆ ಸಂತಾನ ಪ್ರಾಪ್ತಿ. ಹಾಗೆಯೇ ಬೇರೆ ಯಾವುದೇ ಸಮಸ್ಯೆಯಿದ್ದರೂ ಶ್ರೀ ಸ್ವಾಮಿಗೆ ಮೊರೆ ಹೋಗಿ ಅಲ್ಲಿನ ತಳಿಗೆ ಪ್ರಸಾದ ಸವಿದರೆ ಎಲ್ಲವೂ ಪರಿಹಾರದ ಜೊತೆಗೆ ಸಕಲ ದೋಷಗಳು ನಿವಾರಣೆ ಆಗುತ್ತವೆ ಎನ್ನುತ್ತಾರೆ ಭಕ್ತಾದಿಗಳು. ಈ ಕ್ಷೇತ್ರದಲ್ಲಿ ಪ್ರತಿನಿತ್ಯ ಪೂಜಾ ಕಾರ್ಯಗಳು, ಅಮಾವಾಸ್ಯೆ, ಹುಣ್ಣಿಮೆಯಂದು ವಿಶೇಷ ಪೂಜಾ ಕಾರ್ಯಗಳು ನೆರವೇರುತ್ತವೆ. ಇಲ್ಲಿಗೆ ರಜಾದಿನಗಳಲ್ಲಿ ಪ್ರವಾಸಿಗರು ಹೆಚ್ಚು ಬರುತ್ತಿದ್ದು, ಪ್ರತಿಯೊಬ್ಬರಿಗೂ ಅನುಕೂಲವಾಗುವಂತೆ ಎಲ್ಲಾ ರೀತಿಯ ಸೌಕರ್ಯಗಳನ್ನು ದೇವಾಲಯದ ಆಡಳಿತ ಮಂಡಳಿಯ ಟ್ರಸ್ಟಿಗಳು ಹಾಗೂ ಸ್ಥಳೀಯ ಸೋಮೇದ್ಯಾಪನಹಳ್ಳಿ ಗ್ರಾಮ ಪಂಚಾಯಿತಿ ಕುಡಿಯುವ ನೀರು ಹಾಗೂ ಕೆಲವು ಮೂಲಭೂತ ಸೌಕರ್ಯಗಳನ್ನು ನಿಭಾಯಿಸುತ್ತಿದೆ. ಮುಂದಿನ ದಿನಗಳಲ್ಲಿ ಅತೀ ದೊಡ್ಡ ಪ್ರವಾಸಿಗರ ತಾಣವಾಗಿದೆ ಶ್ರೀ ಸಿದ್ದೇಶ್ವರ ಸಿದ್ದಪ್ಪಾಜಿ ದೇವಾಲಯ.

# 'ಅಕ್ಕ ಪಡೆ' ಸನ್ನದ್ಧ!



10 ☞

ಮತ್ತು ಮಕ್ಕಳ ಸುರಕ್ಷತೆ ಬಗ್ಗೆ ಅರಿವು ಮೂಡಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಜಿಲ್ಲೆಯಲ್ಲಿ/ಕಮೀಷನರೇಟ್ ವ್ಯಾಪ್ತಿಯಲ್ಲಿ ಬರುವ ಶಾಲಾ ಕಾಲೇಜುಗಳಲ್ಲಿನ ಹೆಣ್ಣು ಮಕ್ಕಳ ವಸತಿ ನಿಲಯಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಅಲ್ಲಿಯ ಹೆಣ್ಣು, ಮಕ್ಕಳೊಂದಿಗೆ ಸಂವಾದ ನಡೆಸಿ ಕುಂದು ಕೊರತೆ



ಮತ್ತು ಸುರಕ್ಷತೆ ಕುರಿತಂತೆ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರ ಗಮನಕ್ಕೆ ತರಬೇಕಾಗುತ್ತದೆ. ಗಸ್ತು ಸಂದರ್ಭದಲ್ಲಿ ಅಹಿತಕರ ಘಟನೆ ಸಂಭವಿಸಿದ್ದಲ್ಲಿ ತುರ್ತಾಗಿ ಉಕ್ಖಖ-122 ಜೊತೆ ಸಂವಹನೆ ಮಾಡಿ ಸೂಕ್ತ ರಕ್ಷಣೆಯನ್ನು ಒದಗಿಸಬೇಕಾಗುತ್ತದೆ. ಮಹಿಳೆ ಮತ್ತು ಮಕ್ಕಳ ವಿರುದ್ಧ ಸಂಭವಿಸುವ ಪ್ರಮುಖ ಪ್ರಕರಣಗಳ ಬಗ್ಗೆ ಜಿಲ್ಲಾ, ಕಮೀಷನರ್ ಪೊಲೀಸ್ ಕಛೇರಿಯ ನಿಯಂತ್ರಣ ಕೊಠಡಿಗೆ (Control Room) ಮಾಹಿತಿಯನ್ನು ಶೀಘ್ರವಾಗಿ ರವಾನಿಸಬೇಕಾಗುತ್ತದೆ.

ಮಹಿಳಾ ಕಿರುಕುಳ ಪ್ರಕರಣಗಳ ಬಗೆ, ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಗೆ ವರದಿ ಮಾಡುವುದು, ಮಹಿಳೆ ಮತ್ತು ಮಕ್ಕಳಿಗೆ ಸ್ವಯಂ ರಕ್ಷಣೆ ಕಾರ್ಯ ವಿಧಾನದ ತರಬೇತಿ ನೀಡುವುದು, ಮಹಿಳೆಯರ ಕಿರುಕುಳ ಮತ್ತು ಈವ್ ಟೀಸಿಂಗ್ ತಡೆಗಟ್ಟಲು ಶಾಲೆ ಕಾಲೇಜು, ಉದ್ಯಾನವನ, ಸಿನಿಮಾ ಮಂದಿರ, ಮಾಲ್‌ಗಳು, ಸ್ಥಳೀಯ ಮಾರುಕಟ್ಟೆಗಳಿಗೆ, ಧಾರ್ಮಿಕ ಸ್ಥಳಗಳಲ್ಲಿ ಬಸ್, ರೈಲ್ವೆ, ಮೇಟ್ರೋ ನಿಲ್ದಾಣಗಳು ಹಾಗೂ ಬಸ್‌ಗಳಲ್ಲಿ ಪ್ರಯಾಣಿಸುವಾಗ ನಿಯಮಿತವಾಗಿ ಭೇಟಿ ನೀಡಿ ಮುಂಜಾಗೃತ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಲ್ಲಿ ಗುಡ್ ಟಚ್ ಮತ್ತು ಬ್ಯಾಡ್ ಟಚ್ ಹಾಗೂ ಅಪರಿಚಿತರ ಬಗ್ಗೆ ಎಚ್ಚರದಿಂದಿರುವುದರ ಬಗ್ಗೆ, ಜಾಗೃತಿ ಮೂಡಿಸುವುದು, ಫೋಸ್ಕೋ (POCSO), ಬಾಲ್ಯವಿವಾಹ. ಬಾಲ ಕಾರ್ಮಿಕ ಪದ್ಧತಿ, ಮಕ್ಕಳ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಮಹಿಳೆಯರು ಮತ್ತು ಮಕ್ಕಳ ಕಳ್ಳಸಾಗಣೆ ಮಾದಕ ವಸ್ತುಗಳ ದುರುಪಯೋಗದ ಬಗ್ಗೆ ಜಾಗೃತಿ ಮೂಡಿಸುವುದು, ಮಾದಕ ದ್ರವ್ಯಗಳು ಮತ್ತು ಮಾದಕ ದ್ರವ್ಯಗಳ ದುರುಪಯೋಗ ಮತ್ತು ಆರೋಗ್ಯದ ಮೇಲೆ ಅದರ ಪರಿಣಾಮದ ಬಗ್ಗೆ. ಜಾಗೃತಿ ಮೂಡಿಸುವುದು.



ಸಂಚಾರ ನಿಯಮಗಳು ಮತ್ತು ನಿಯಮಗಳ ಬಗ್ಗೆ ಜಾಗೃತಿ ಮೂಡಿಸುವುದು, ಸಹಾಯವಾಣಿ 1098 181, 112, ಇತ್ಯಾದಿಗಳ ಬಗ್ಗೆ, ಜಾಗೃತಿ ಮೂಡಿಸುವುದು, ಸಾಮಾಜಿಕ ಜಾಲತಾಣಗಳಿಂದ ಮಹಿಳೆ ಮತ್ತು ಮಕ್ಕಳ ವಿರುದ್ಧ ಸಂಭವಿಸುವ ಸೈಬರ್ ಅಪರಾಧಗಳ ದುಷ್ಪರಿಣಾಮಗಳು ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಅರಿವು, ಜಾಗೃತಿ ಮೂಡಿಸುವುದು. ಶಾಲೆ, ಕಾಲೇಜು, ಹುಡುಗಿಯರು ಮತ್ತು ಉದ್ಯೋಗಸ್ತ ಮಹಿಳೆಯರ ವಸತಿ ನಿಲಯಗಳ ಆವರಣದಲ್ಲಿ ದುಷ್ಕರ್ಮಿಗಳ ಮೇಲೆ ನಿಗಾ ಇರಿಸಬೇಕಾಗುತ್ತದೆ.

ಸಿಗ್ನಲ್ ಬಳಿ ಮಹಿಳೆ ಮತ್ತು ಮಕ್ಕಳ ಭಿಕ್ಷಾಟನೆಯನ್ನು ತಡೆಗಟ್ಟುವ ಜೊತೆಗೆ ವಿಶೇಷವಾಗಿ ನಿಗಾವಹಿಸುವುದು, ಕಳ್ಳಸಾಗಣೆಯಿಂದ ರಕ್ಷಿಸಲ್ಪಟ್ಟ ಮಹಿಳೆಯರು ಮತ್ತು ಮಕ್ಕಳಿಗೆ ಪುನರ್ವಸತಿ ಕಲ್ಪಿಸುವುದು, ಸಹಾಯವಾಣಿಗಳಿಂದ ಬರುವ ಎಲ್ಲಾ ತುರ್ತು ಕರೆಗಳಿಗೆ ಸ್ಪಂದಿಸುವುದು ಮತ್ತು ಸೂಕ್ತ ಶಿಷ್ಟಾಚಾರದೊಂದಿಗೆ ಸಂತ್ರಸ್ತೆಯರನ್ನು ರಕ್ಷಿಸುವುದು, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ವರದಕ್ಷಿಣೆ ನಿಷೇಧ ಕಾಯ್ದೆ ಬಗ್ಗೆ ಅರಿವು ಮೂಡಿಸುವುದು.

ಅಕ್ಕ ಪಡೆ ಕಾರ್ಯನಿರ್ವಹಣೆ ಕುರಿತಂತೆ ಪ್ರತಿ ತಿಂಗಳ ಅಂತ್ಯದಲ್ಲಿ ಜಿಲ್ಲಾ ಪೊಲೀಸ್ ಅಕ್ಷಕರು ಮತ್ತು ಪೊಲೀಸ್ ಆಯುಕ್ತರು ರವರುಗಳ ನೇತೃತ್ವದಲ್ಲಿ ರಚಿಸಲಾದ ಸಮಿತಿ ಸಭೆ ನಡೆಸಿ ಅಕ್ಕ ಪಡೆಯ ಸಾಧಕ ಮತ್ತು ಭಾದಕಗಳ ಬಗ್ಗೆ, ಇತರೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳ ಕುರಿತು ಸಭಾ ನಡವಳಿಯನ್ನು ಪ್ರತಿ ತಿಂಗಳ 05 ತಾರೀಕಿನೊಳಗೆ ಮಾಹಿತಿಯನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಅಪರಾಧ ಮತ್ತು ತಾಂತ್ರಿಕ ಸೇವೆಗಳು ಬೆಂಗಳೂರು ರವರಿಗೆ ಸಲ್ಲಿಸಬೇಕಾಗುತ್ತದೆ.

ಇದೆಲ್ಲವನ್ನು ಗಮನಿಸಿದ ಬಳಿಕ ಅಕ್ಕಪಡೆಯ ರಚನೆ ಮತ್ತು ಉದ್ದೇಶಗಳು ಎಲ್ಲವೂ ಅತ್ಯುತ್ತಮವೇ ಆಗಿದೆ. ಆದರೆ ಸೀಮಿತ ಸಿಬ್ಬಂದಿಗಳಿಂದ ಅಷ್ಟೊಂದು ಜವಬ್ದಾರಿಗಳನ್ನು ನಿರ್ವಹಣೆ ಮಾಡಲು ಸಾಧ್ಯನಾ? ಎಂಬ ಪ್ರಶ್ನೆಗಳು ಮೂಡುವುದು ಸಹಜವೇ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಸೌಲಭ್ಯ ಮತ್ತು ಅನುದಾನಗಳನ್ನು ಕಲ್ಪಿಸಬೇಕಾಗುತ್ತದೆ. ಇಲ್ಲದೆ ಹೋದರೆ ಸರ್ಕಾರದ ಇತರೆ ಯೋಜನೆಗಳಂತೆ ಇದು ಹಳ್ಳಹಿಡಿದರೂ ಅಚ್ಚರಿಯಿಲ್ಲ. ಈಗಾಗಲೇ ರಾಜ್ಯದಲ್ಲಿ ಪೊಲೀಸ್ ಇಲಾಖೆ ಸಿಬ್ಬಂದಿ ಕೊರತೆಯನ್ನು ಎದುರಿಸುತ್ತಿದೆ. ಇದರ ಜತೆಗೆ ಅಕ್ಕಪಡೆಯ ನಿರ್ವಹಣೆ ಮಾಡುವುದೆಂದರೆ ಸುಲಭದ ಮಾತಲ್ಲ

ಒಟ್ಟಾರೆ ಸರ್ಕಾರ ಜಾರಿಗೆ ತಂದಿರುವ ಅಕ್ಕಪಡೆ ಯೋಜನೆ ಉತ್ತಮ ಯೋಜನೆ ಆಗಿರುವುದರಲ್ಲಿ ಎರಡು ಮಾತಿಲ್ಲ. ಆದರೆ ಅದು ಎಷ್ಟರ ಮಟ್ಟಿಗೆ ಅನುಷ್ಠಾನಗೊಂಡು ಜನಸ್ನೇಹಿ ಆಗುತ್ತದೆ ಎಂಬುವುದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ. ☯

# ರೌಡಿಗೆ ಸಹಕರಿಸಿ ಸಸ್ಪೆಂಡ್ ಆದ ಭ್ರಷ್ಟ ಪೊಲೀಸ್ ಇನ್ಸ್‌ಪೆಕ್ಟರ್ ಯೋಗಾನಂದ!

5 ☞

ಅಟ್ಟಿದ್ದು, ಆತ ಮಾನವ ಹಕ್ಕುಗಳ ಆಯೋಗ, ಎಸ್ಸಿ ಎಸ್ಟಿ ಸೆಲ್, ಡಿಜಿಪಿ ಐಜಿಪಿ.... ಮುಂತಾದವರಿಗೆಲ್ಲ ಅರ್ಜಿ ಬರೆದು ಹೊಸೂರು ನ್ಯಾಯಾಲಯದಲ್ಲಿ ಈ ಬಗ್ಗೆ ವಿಚಾರಣೆ ನಡೆದು ಇದೀಗ ಬೇಲ್ ಮೇಲೆ ಹೊರಗಡೆ ಬಂದು ಹೊರಬಂದು ಟಿವಿ ಚಾನಲ್‌ಗಳ ಮುಂದೆ ಈ ಕೊಲೆಯ ಅಸಲಿ ಸತ್ಯವನ್ನು ಬಿಚ್ಚಿಟ್ಟಿದ್ದಾರೆ!



ರೇವಂತ್ ಮರ್ಡರ್ ಕೇಸ್ ಈಗ ತಮಿಳುನಾಡಿನಿಂದ ಬೆಂಗಳೂರು ಸಿಟಿ ವರ್ತೂರ್ ಪೊಲೀಸ್ ಠಾಣೆಗೆ ವರ್ಗಾವಣೆ ಆಗಿದೆ! ಇಲ್ಲಿನ ಭ್ರಷ್ಟ ಪೊಲೀಸ್ ಇನ್ಸ್‌ಪೆಕ್ಟರ್ ಯೋಗಾನಂದ ಸೋನಾರ್ ಸಸ್ಪೆಂಡ್ ಆಗಿದ್ದು, ದಕ್ಷ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಈ ಕೊಲೆ ಪ್ರಕರಣದ ತನಿಖೆಯನ್ನು ಸಿಸಿಬಿ ಗೆ ವಹಿಸಿದ್ದಾರೆ.

**ರಿಯಲ್ ಎಸ್ಟೇಟ್ ದಂಧೆಯೇ ಕೊಲೆಗೆ ಮೂಲ...**

ಆನೇಕಲ್ ತಾಲೂಕಿನಲ್ಲಿ ರಿಯಲ್ ಎಸ್ಟೇಟ್ ದಂಧೆ ಭರ್ಜರಿಯಾಗಿ ನಡೆದಿದೆ. ರೌಡಿ ರೇವಾ ಬೆನ್ನಿಗೆ ಆನೇಕಲ್ ತಾಲೂಕಿನ ಹಲವಾರು ಕಾಂಗ್ರೆಸ್ ಲೀಡರ್‌ಗಳು ನಿಂತಿದ್ದಾರೆ! ನ್ಯಾಯವಾದ ತನಿಖೆ ಆದರೆ ಅವರೆಲ್ಲ ಕಾನೂನಿನ ಮುಂದೆ ಬೆತ್ತಲಾಗುತ್ತಾರೆ! ದಕ್ಷ ಹಾಗೂ ಹೃದಯವಂತರು ಎಂಬ ಕೀರ್ತಿಗೆ ಬಾಜನರಾಗಿರೋ ಡಿಜಿಪಿ ಸಲೀಮ್ ಸಾಹೇಬ್ರು ಈ ಹಿನ್ನಲೆಯಲ್ಲಿ ಬೆಂಗಳೂರು ಗ್ರಾಮಾಂತರ ಎಸ್ಪಿ ಮೂಲಕ ಖಡಕ್ ತನಿಖೆ ನಡೆಸಲು ಆದೇಶ ನೀಡಬೇಕಿದೆ.....

ರೇವಂತ್ ಕೊಲೆಯ ಪ್ರತ್ಯಕ್ಷ ಸಾಕ್ಷಿ ಶ್ರೀನಿವಾಸ್ ಸುವರ್ಣ ವಾಹಿನಿ, ಗ್ಯಾರೆಂಟಿ ನ್ಯೂಸ್ ಸೇರಿದಂತೆ ಹಲವಾರು ಮಾಧ್ಯಮಗಳಿಗೆ ನೀಡಿರುವ ಹೇಳಿಕೆಯನ್ನು ಗಮನಿಸಿದರೆ, ಆ ಭಾಗದ ರಿಯಲ್ ಎಸ್ಟೇಟ್ ಕರಾಳ ಸತ್ಯ ದರ್ಶನವಾಗುತ್ತದೆ! ಸರ್ಜಾಪುರದ ಸರ್ವೆ ನಂ. 189ಕ್ಕೆ ಸಂಬಂಧಿಸಿದಂತೆ, ನಟೋರಿಯಸ್ ರೌಡಿ ರೇವಾ ಮತ್ತು ರೈತರ ನಡುವೆ ಮನಸ್ತಾಪ ಶುರುವಾಗುತ್ತೆ. ಈ ಹಿಂದೆ ಗೆಳೆಯ ಸ್ಟಾಲಿನ್ ಪರ ನಿಂತಂತೆ, ಈಗ ಭೂಮಿ ಕಳೆದುಕೊಂಡ ರೈತರ ಪರ ನಿಲ್ಲುತ್ತಾನೆ, ಬಾವಿ ಲಾಯರ್ ರೇವಂತ್! ಇದೇ ಇವನ ಭೀಕರ ಕೊಲೆಗೆ ಕಾರಣವಾಗುತ್ತೆ!!

ಅಂಕಲ್ ಶ್ರೀನಿವಾಸ್ ತಮ್ಮ ಕಣ್ಣೆದುರೇ ನಡೆದ ಈ ಕೊಲೆಯ ಬಗ್ಗೆ.... ಅದಕ್ಕೂ ಮುಂಚಿನ ಬ್ಲ್ಯಾಕ್‌ಮೇಲ್, ಕಿಡ್ನಾಪ್, ಪೊಲೀಸ್ ಫಿಕ್ಸಿಂಗ್ ಬಗ್ಗೆ ಸರಿ ಸುಮಾರು ಎರಡು ಗಂಟೆಗಳ ಕಾಲ ಹೊಸೂರು ಕೋರ್ಟ್ ನಲ್ಲಿ ಹಾಗೂ ವರ್ತೂರು ಎಸಿಪಿ ಕಚೇರಿಯಲ್ಲಿ ಸೆಕ್ಷನ್ 164 ಪ್ರಕಾರ ಹೇಳಿಕೆ ದಾಖಲಿಸಿದ್ದಾರೆ. ಅದೇ ರೀತಿ ಮಾಧ್ಯಮಗಳ ಮುಂದೆ ಕೂಡ ಹೇಳಿಕೆ ನೀಡಿದ್ದಾರೆ. ಅದನ್ನು ಕೇಳಿಸಿಕೊಳ್ತಾ ಇದ್ರೆ ಇಲ್ಲಿನ ವ್ಯವಸ್ಥೆಯ ಕರಾಳ ದರ್ಶನವಾಗುತ್ತದೆ! ವರ್ತೂರು ಮತ್ತು ತಮಿಳುನಾಡಿನ ಬಾಗಲೂರು ಪೊಲೀಸರ ಹೇಸಿಗೆ ಪ್ರವೃತ್ತಿ ಅಸಹ್ಯ ಹುಟ್ಟಿಸುತ್ತದೆ!!



ಸಸ್ಪೆಂಡ್ ಆದ್ರೆ ಸಾಲದು, ಶಿಕ್ಷೆ ಆಗಬೇಕು...

ರೇವಂತ್ ಕೊಲೆಯ ಪ್ರತ್ಯಕ್ಷ ಸಾಕ್ಷಿ ಶ್ರೀನಿವಾಸ್, ಕೋರ್ಟ್ ಬಳಿ ಹೋದಾಗ ಅವರನ್ನು ಕೊಲ್ಲಲು ಸ್ಕೆಚ್ ಹಾಕಿದ್ದ ರೇವಂತ್ ನ ಹಂತಕರನ್ನು ಅಲ್ಲೇ ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಲಾಗಿದೆಯಂತೆ. ಸದ್ಯ, ಧಕ್ಷ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ವರ್ತೂರ್ ಪಿಐ ಯೋಗಾನಂದ ಸೋನಾರ್ ನನ್ನು ಸಸ್ಪೆಂಡ್ ಮಾಡಿ ಶ್ರೀನಿವಾಸ್‌ಗೆ ಪೊಲೀಸ್ ರಕ್ಷಣೆ ಕೊಡಿಸಿದ್ದಾರೆ.

ರೇವಂತ್ ಕೊಲೆಯ ತನಿಖಾ ಜವಾಬ್ದಾರಿಯನ್ನು ಸಿಸಿಬಿಗೆ ವಹಿಸಿದ್ದು,ಜಾಯಿಂಟ್ ಕಮಿಷನರ್ ಅಜಯ್ ಹಿಲೋರಿ, ಡಿಸಿಪಿಗಳಾದ ಶ್ರೀಹರಿಬಾಬು ಹಾಗೂ ರಾಜಾ ಇಮಾಮ್ ಖಾಸಿಂ ತನಿಖೆ ಆರಂಭಿಸಿದ್ದಾರೆ. 60 ದಿನಗಳಲ್ಲಿ ತನಿಖೆ ಪೂರ್ಣಗೊಳಿಸಿ ವರದಿ ನೀಡಬೇಕಾದ ಗುರುತರ ಜವಾಬ್ದಾರಿ ಸಿಸಿಬಿ ಸೂಪರ್ ಕಾಪ್‌ಗಳ ಮೇಲಿದೆ.... ☯

# ದಳಪತಿ ವಿಜಯ ದಾಂಪತ್ಯದಲ್ಲಿ ಬಿರುಕು! ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ ಪತ್ನಿ ಸಂಗೀತಾ!!

ತಮಿಳು ಚಿತ್ರರಂಗದ ಖ್ಯಾತ ನಟ ದಳಪತಿ ವಿಜಯ್ ದಾಂಪತ್ಯದಲ್ಲಿ ಬಿರುಕು ಮೂಡಿದೆ. ಅವರ ಪತ್ನಿ ಸಂಗೀತಾ ವಿವಾಹ ವಿಚ್ಛೇದನ ಕೋರಿ ತಮಿಳುನಾಡಿನ ಚಂಗಲಪೇಟ್ ಕೌಟುಂಬಿಕನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ನಟ ವಿಜಯ್‌ಗೆ ಪ್ರಖ್ಯಾತ ನಟಿಯೊಬ್ಬಳೊಂದಿಗೆ ವಿವಾಹೇತರ ಸಂಬಂಧವಿದೆ ಎಂಬ ಕಾರಣ ನೀಡಿ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಲಾಗಿದೆ!

ವಿಜಯ್ ತಮಿಳು ಚಿತ್ರರಂಗದ ಒಬ್ಬ ಸೂಪರ್ ಸ್ಟಾರ್. ಬಲ್ಲ ಮೂಲಗಳ ಪ್ರಕಾರ, ಒಂದು ಸಿನಿಮಾಗೆ 250 ಕೋಟಿ ಸಂಭಾವನೆ ಪಡೆಯುವ ವಿಜಯ್, ನಟನೆಗೆ ವಿದಾಯ ಹೇಳಿ ರಾಜಕೀಯ ರಂಗಕ್ಕೆ ಧುಮುಕಿದ್ದಾರೆ. ತಮಿಳು ನಾಡಿನ ಸಿಎಂ ಆಗುವ ಹೆಬ್ಬಯಕೆಯಿಂದ ಟಿವಿಕೆ ಪಕ್ಷ ಸ್ಥಾಪಿಸಿ ರಾಜ್ಯದಾದ್ಯಂತ ಸಂಚರಿಸಿ ಆಡಳಿತ ಪಕ್ಷದ



ವಿರುದ್ಧ ಹರಿ ಹಾಯುತ್ತಿದ್ದಾರೆ. ವಿಧಿ ವೈಫರೀತ್ಯ ಹೇಗಿದೆ ಎಂದರೆ, ಇಂಥ ಸಮಯದಲ್ಲೇ ವಿಜಯ್ ಅವರ ವೈಯಕ್ತಿಕ ಜೀವನದಲ್ಲಿ ಬಿರುಗಾಳಿ ಎದ್ದುಬಿಟ್ಟಿದೆ. ಅವರ ಪತ್ನಿ ಸಂಗೀತಾ ಡೈವೋರ್ಸ್ ಕೋರಿ ಕೋರ್ಟ್ ಮೊರೆ ಹೋಗಿದ್ದಾರೆ.

ಇದು ಅವರ 27 ವರ್ಷಗಳ ಸುದೀರ್ಘ ವೈವಾಹಿಕ ಪ್ರಯಾಣದ ಅಂತ್ಯವನ್ನು ಸೂಚಿಸುತ್ತದೆ. ನಟ ವಿಜಯ್‌ಗೆ ವಿವಾಹೇತರ ಸಂಬಂಧ ಇದೆ. ಈ ಕಾರಣಕ್ಕಾಗಿ ವಿಚ್ಛೇದನ ನೀಡಬೇಕೆಂದು ಕೋರಿ ಪತ್ನಿ ಸಂಗೀತಾ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. 2021ರ ಏಪ್ರಿಲ್ ನಲ್ಲಿ ತಮಗೆ ನಟ ವಿಜಯ ಹಾಗೂ ಓರ್ವ ನಟಿಗೂ ವಿವಾಹೇತರ ಸಂಬಂಧವಿದೆ ಎಂಬುದು ಗೊತ್ತಾಯಿತು. ಇದರಿಂದ ಭಾರಿ ನೋವಾಗಿದೆ. ಇದು ಭಾವನಾತ್ಮಕ ನೋವು, ಮಾನಸಿಕ ಹಿಂಸೆಗೆ ಕಾರಣವಾಗಿದೆ. ಇದು ದ್ರೋಹ ಮತ್ತು ವಿವಾಹದ ನಂಬಿಕೆಯನ್ನು ಉಲಂಘಿಸಿದೆ ಎಂದು ಸಂಗೀತಾ ಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ಹೇಳಿಕೊಂಡಿದ್ದಾರೆ.



48 ವರ್ಷದ ಸಂಗೀತಾ ತಮ್ಮ ಅರ್ಜಿಯಲ್ಲಿ, ತಮ್ಮ ವಿವಾಹವನ್ನು ಮೊದಲು ಜುಲೈ 10, 1998 ರಂದು UK (ಯುನೈಟೆಡ್ ಕಿಂಗ್‌ಡಮ್) ನಲ್ಲಿ ನೋಂದಾಯಿಸಲಾಗಿತ್ತು. ನಂತರ ಆಗಸ್ಟ್ 25, 1999 ರಂದು ಚೆನ್ನೈನ ಎಗ್ಮೋರ್‌ನ ರಾಜಾ ಮುತ್ತಯ್ಯ ಮಂದ್ರಂನಲ್ಲಿ ಹಿಂದೂ ಪದ್ಧತಿಗಳು ಮತ್ತು ವಿಧಿವಿಧಾನಗಳ ಪ್ರಕಾರ ವಿಧ್ಯುಕ್ತ ವಿವಾಹವನ್ನು ನೆರವೇರಿಸಲಾಯಿತು.

ವಿವಾಹದ ಆರಂಭಿಕ ವರ್ಷಗಳು 'ಸೌಹಾರ್ದಯುತ ಮತ್ತು ಸಾಮರಸ್ಯದಿಂದ ಕೂಡಿದ್ದವು' ಎಂದು ವಿವರಿಸಿದ್ದಾರೆ. ಆದಾಗ್ಯೂ, ಏಪ್ರಿಲ್ 2021 ರಲ್ಲಿ, ವಿಜಯ್ ಒಬ್ಬ ನಟಿಯೊಂದಿಗೆ ವಿವಾಹೇತರ ಸಂಬಂಧ ಹೊಂದಿದ್ದಾರೆ ಎಂದು ಗೊತ್ತಾಯಿತು. ಬೇಡ ಬಿಟ್ಟುಬಿಡಿ ಎಂದರೂ ಒಕೆ ಎಂದು ಹೇಳಿ ನಂತರವೂ ಆ ಕೆಲಸವನ್ನು ಮುಂದುವರೆಸಿದ್ದರು. ಇದು ನನಗೆ ಆಳವಾದ ಭಾವನಾತ್ಮಕ ನೋವು ಮತ್ತು ಮಾನಸಿಕ ಆಘಾತವನ್ನು ಉಂಟು ಮಾಡಿತು. ಇದು ದ್ರೋಹ ಮತ್ತು ವೈವಾಹಿಕ ನಂಬಿಕೆಯ ಉಲ್ಲಂಘನೆಗೆ ಸಮಾನವಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಇದು 'ಮಾನಸಿಕ ಕ್ರೌರ್ಯ', ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳಿಂದ ಉಂಟಾಗುವ ಸಾರ್ವಜನಿಕ ಅವಮಾನ, ಭಾವನಾತ್ಮಕ ನಿರ್ಲಕ್ಷ್ಯ ಮತ್ತು ರಚನಾತ್ಮಕ ತೊರೆದುಹೋಗುವಿಕೆಗೆ ಕಾರಣವಾಯಿತು ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ. ಸೆಪ್ಟೆಂಬರ್ 2021 ಮತ್ತು ಫೆಬ್ರವರಿ 2022 ರ ನಡುವೆ ಮತ್ತು ಮತ್ತೆ ಆಗಸ್ಟ್ 2024 ಮತ್ತು ಫೆಬ್ರವರಿ 2025 ರ ನಡುವೆ, ಸಲಹೆಗಾರರು ಮತ್ತು ವೈಯಕ್ತಿಕ ಚರ್ಚೆಗಳ ಮೂಲಕ ಮಾಡಿದ ಪ್ರಯತ್ನಗಳು ಸೌಹಾರ್ದಯುತ ಇತ್ಯರ್ಥಕ್ಕೆ ಕಾರಣವಾಗಲಿಲ್ಲ ಎಂದು ಅರ್ಜಿಯಲ್ಲಿ ಹೇಳಿದ್ದಾರೆ.

ಮೂಲಗಳ ಪ್ರಕಾರ, ಸಂಗೀತಾ ಚೆಂಗಲ್ಪಟ್ಟು ನಲ್ಲಿರುವ ಕುಟುಂಬ ನ್ಯಾಯಾಲಯದಲ್ಲಿ ಔಪಚಾರಿಕವಾಗಿ ವಿಚ್ಛೇದನ ಅರ್ಜಿಯನ್ನು ಸಲ್ಲಿಸಿದ್ದಾರೆ. ಇದು ದಂಪತಿಗಳ ನಡುವಿನ ಕಾನೂನುಬದ್ಧ ಬೇರ್ಪಡಿಕೆಯನ್ನು ದೃಢಪಡಿಸುತ್ತದೆ. ಈ ಕ್ರಮವು 1999ರಲ್ಲಿ ವಿಜಯ್ ಮತ್ತು ಸಂಗೀತಾ ವಿವಾಹವಾದಾಗ ಪ್ರಾರಂಭವಾದ ಸಂಬಂಧವನ್ನು ಅಧಿಕೃತವಾಗಿ ಮುಕ್ತಾಯಗೊಳಿಸುತ್ತದೆ. ವರ್ಷಗಳಲ್ಲಿ, ಅವರ ಮದುವೆಯನ್ನು ತಮಿಳು ಚಲನಚಿತ್ರೋದ್ಯಮದ ಅತ್ಯಂತ ಸ್ಥಿರವಾದ ಸಂಬಂಧಗಳಲ್ಲಿ ಒಂದೆಂದು ಪರಿಗಣಿಸಲಾಗಿತ್ತು.

ವಿಜಯ್ ಅವರ ವೈಯಕ್ತಿಕ ಮತ್ತು ವೃತ್ತಿಪರ ಜೀವನವನ್ನು ನಿಕಟವಾಗಿ ಗಮನಿಸುತ್ತಿರುವ ಅಭಿಮಾನಿಗಳಿಗೆ ಈ ಸುದ್ದಿ ಅಚ್ಚರಿ ಮೂಡಿಸಿದೆ. ದಂಪತಿಗಳು ಹೆಚ್ಚಾಗಿ ಗೌಪ್ಯತೆಯನ್ನು ಕಾಯ್ದುಕೊಂಡಿದ್ದರೂ, ಅವರ ಸಂಬಂಧದಲ್ಲಿನ ಒತ್ತಡದ ಬಗ್ಗೆ ಮೊದಲೇ ಊಹಾಪೋಹಗಳು ಹರಡಿದ್ದವು. 2021 ರಲ್ಲಿ, ವಿಜಯ್ ಅವರು ಸಹ ನಟಿಯೊಂದಿಗೆ ಸಂಬಂಧ ಹೊಂದಿದ್ದಾರೆ ಎಂದು ವರದಿಯಾಗಿದೆ, ಇದು ವಿವಾಹೇತರ ಸಂಬಂಧದ ಆರೋಪದ ವ್ಯಾಪಕ ವದಂತಿಗಳಿಗೆ ಕಾರಣವಾಯಿತು. ಆ ಸಮಯದಲ್ಲಿ ಯಾವುದೇ ಅಧಿಕೃತ ದೃಢೀಕರಣವನ್ನು ಮಾಡದಿದ್ದರೂ, ವರದಿಗಳು ಸಾಮಾಜಿಕ ಮಾಧ್ಯಮ ಮತ್ತು ಮನರಂಜನಾ ವಲಯಗಳಲ್ಲಿ ತೀವ್ರ ಚರ್ಚೆಗೆ ನಾಂದಿ ಹಾಡಿದ್ದವು.

ಈಗ, ವಿಚ್ಛೇದನ ಅರ್ಜಿಯನ್ನು ಅಧಿಕೃತವಾಗಿ ಸಲ್ಲಿಸುವುದರೊಂದಿಗೆ, ದೀರ್ಘಕಾಲದ ವದಂತಿಗಳು ನಿಜವಾಗಿವೆ. ಅಂದಹಾಗೆ, ದಳಪತಿ ವಿಜಯ್ ಸಂಗೀತಾ ದಂಪತಿ ವಿವಾಹ ವಿಚ್ಛೇದನಕ್ಕೆ ಹಾಟ್ ಬ್ಯೂಟಿ ತ್ರಿಶಾ ಕಾರಣವೇ?! ವಿಜಯ್‌ಗೆ ನಟಿಯೊಬ್ಬರೊಂದಿಗೆ ವಿವಾಹೇತರ ಸಂಬಂಧವಿದೆ ಎಂದು ಅರ್ಜಿಯಲ್ಲಿ ನೇರವಾಗಿ ಹೇಳಿರುವುದರಿಂದ ಆ ನಟಿ ತ್ರಿಶಾ ಇರಬಹುದೆಂಬ ಚರ್ಚೆ ನಡೆಯುತ್ತಿದೆ.

ದಳಪತಿ ವಿಜಯ್ ಅವರ ಪತ್ನಿ ಸಂಗೀತಾ ವಿಚ್ಛೇದನ ಅರ್ಜಿಯಲ್ಲಿ ಆ ನಟಿ ಯಾರೆಂದು ನೇರವಾಗಿ ಉಲ್ಲೇಖಿಸದಿದ್ದರೂ, ನೆಟ್ಟಿಗರು ಈಗ ವಿಜಯ್ ಮತ್ತು ತ್ರಿಶಾ ಕೃಷ್ಣನ್ ಅವರ ನಡುವಿನ ಸಂಬಂಧದ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚಿಸುತ್ತಿದ್ದಾರೆ!



ವಿಜಯ್ ಅವ'ರ' ತ್ರಿಶಾ ಅವರೊಂದಿಗಿನ ಸಂಬಂಧವೇ ಅವರ ವಿಚ್ಛೇದನಕ್ಕೆ ಕಾರಣ ಎಂದು ಊಹಿಸುವ ಟ್ವೀಟ್, ಪೋಸ್ಟ್‌ಗಳಿಂದ ತುಂಬಿಹೋಗಿವೆ. ಕೆಲವರು ದಳಪತಿ ವಿಜಯ್ ಅವರನ್ನು ವಿಶ್ವಾಸದ್ರೋಹಿ ಎಂದು ಟೀಕಿಸಿದ್ದಾರೆ. ವಿಜಯ್ ಸಂಗೀತಾ ದಂಪತಿ ಬೇರ್ಪಡುವಿಕೆಗೆ ತ್ರಿಶಾಳೇ ಕಾರಣ ಎಂದು ಅವರನ್ನು ನೇರವಾಗಿ ದೂಷಿಸಿದ್ದಾರೆ. ಈ ಹಿಂದೆ ಕೆಲ ಭಾರಿ ನಟ ದಳಪತಿ ವಿಜಯ್ ಹಾಗೂ ತ್ರಿಶಾ ಜೊತೆ ಜೊತೆಯಾಗಿ ವಿದೇಶ ಪ್ರವಾಸ ಮಾಡಿದ್ದಾರೆ. ಆ ಫೋಟೋಗಳನ್ನು ಈಗ ಜನರು ಸೋಷಿಯಲ್ ಮೀಡಿಯಾಗಳಲ್ಲಿ ಪೋಸ್ಟ್ ಮಾಡುತ್ತಿದ್ದಾರೆ.

ಕಳೆದ ಕೆಲ ವರ್ಷಗಳಿಂದ ವಿಜಯ್ ಮತ್ತು ತ್ರಿಶಾ ತಮಿಳು ಚಿತ್ರರಂಗದ ಅತ್ಯಂತ ಪ್ರೀತಿಯ ಆನ್‌ಸ್ಕ್ರೀನ್ ಜೋಡಿಗಳಲ್ಲಿ ಒಂದಾಗಿ ಉಳಿದಿದ್ದಾರೆ. ಗಿಲ್ಲಿ (2004), ತಿರುಪ್ಪಾಚಿ (2005), ಆದಿ (2006), ಮತ್ತು ಕುರುವಿ (2008) ನಂತಹ ಸೂಪರ್ ಹಿಟ್‌ಗಳಲ್ಲಿ ಅವರ ಕ್ರೇಜಿ ಕೆಮಿಸ್ಟ್ರಿ ಅಭಿಮಾನಿಗಳನ್ನು ಆಕರ್ಷಿಸಿತು. ಆದರೆ 'ಕುರುವಿ' ಚಿತ್ರದ ನಂತರ, ಇಬ್ಬರೂ ಇದ್ದಕ್ಕಿದ್ದಂತೆ ಒಟ್ಟಿಗೆ ಕೆಲಸ ಮಾಡುವುದನ್ನು ನಿಲ್ಲಿಸಿದ್ದರು.ಬಹಳ ವರ್ಷದ ಬಳಿಕ ನಿರ್ದೇಶಕ ಲೋಕೇಶ್ ಕನಗರಾಜ್ 'ಲಿಯೋ' ಚಿತ್ರದಲ್ಲಿ ಈ ಜೋಡಿಯನ್ನು ಮತ್ತೆ ಅದ್ದೂರಿಯಾಗಿ ತೆರೆಯ ಮೇಲೆ ತಂದರು.ಇದು ಇಬ್ಬರ ಅಭಿಮಾನಿಗಳಿಗೆ ಪೊಂಗಲ್ ಹಬ್ಬದಂತೆ ಕಂಡಿತ್ತು.

ಅಂದಹಾಗೆ, ವಿಜಯ್ ದಂಪತಿಗೆ ಜೇಸನ್ ಸಂಜಯ್ ಮತ್ತು ದಿವ್ಯಾ ಸಾಶಾ ಎಂಬ ಇಬ್ಬರು ಮಕ್ಕಳಿದ್ದಾರೆ. ಜೇಶನ್ ಸಿನಿಮಾ ನಿರ್ದೇಶಕನಾಗುವ ಸಿದ್ಧತೆ ನಡೆಸಿದ್ದಾನೆ. ಮಗಳು ಇಂಜಿನಿಯರಿಂಗ್ ವ್ಯಾಸಂಗ ಮುಗಿಸಿದ್ದಾಳೆ. ಇಂಥ ವಯಸ್ಕ ಮಕ್ಕಳನ್ನು ಹೊಂದಿರುವ ವಿಜಯ್‌ಗೆ, ಸಿಎಂ ಆಗಿ ತಮಿಳುನಾಡನ್ನು ಉದ್ಧಾರ ಮಾಡಲು ನಿಂತಿರುವ ದಳಪತಿಗೆ ಈ ಘಟನೆ ಕಪ್ಪು ಚುಕ್ಕೆಯಾಗಿ ಪರಿಣಮಿಸಿದೆ. ಇದು ಅಲ್ಲಿನ ಜನ ಮೊದಲೇ ಭಾವನಾತ್ಮಕ ಜೀವಿಗಳು. ಇದು ಅವರ ಮನಸ್ಸಿನ ಮೇಲೆ ಪರಿಣಾಮ ಬೀರಿದರೆ ವಿಜಯ್ ರಾಜಕೀಯ ಕನಸು ಪ್ರಥಮ ಚುಂಬನಂ ದಂತ ಭಗ್ನಂ.... ಗ್ಯಾರಂಟಿಯೇ!!




ಈ ಸತ್ಯ ದಳಪತಿ ವಿಜಯ್ಗೂ ಚನ್ನಾಗಿ ಗೊತ್ತು. ಅಸೆಂಬ್ಲಿ ಎಲೆಕ್ಷನ್ ಬೇರೆ ಹತ್ತಿರದಲ್ಲಿದೆ. ಹೀಗಾಗಿ ಅವರಿಗೆ ಹೊಸ ಟೆನ್ಷನ್ ಶುರುವಾಗಿದೆ. ಹಾಗೆ ನೋಡಿದ್ರೆ ಕಳೆದ ವರ್ಷವೇಪತಿ ಪತ್ನಿ ವಿಚ್ಚೇದನ ಸುದ್ದಿ ಹರಡಿತ್ತು. ಈಗ ಖಚಿತವಾಗಿದೆ, ಅಷ್ಟೇ. ವಿಜಯ್ ತ್ರಿಷಾ ಜೊತೆ ಮಾತನಾಡಿ ಸಂಧಾನದ ಮೂಲಕ ಸಂಬಂಧ ಕಡಿದುಕೊಳ್ಳುವ ಬಗ್ಗೆ ಪತ್ನಿ ಸಂಗೀತಾಗೆ ಭರವಸೆ ನೀಡಿದ್ದರೂ, ಮುಂದೆ ನುಡಿದಂತೆ ನಡೆದುಕೊಳ್ಳಲಿಲ್ಲ. ತಮ್ಮ ದಾಂಪತ್ಯ ಹಳಿಗೆ ಮರಳಿಲ್ಲ ಅಂತ ನೇರವಾಗಿ ಆರೋಪಿಸಿರೋ ಸಂಗೀತಾ, 26 ವರ್ಷಗಳ ತಮ್ಮ ದಾಂಪತ್ಯ ಮುರಿದುಕೊಳ್ಳಲು ಮುಂದಾಗಿದ್ದಾರೆ. ಇದು ಬರೀ ಕೌಟುಂಬಿಕ ವಿಚಾರ ಅಷ್ಟೇ ಅಲ್ಲ. ತಮಿಳುನಾಡು ರಾಜಕೀಯ ಚರಿತ್ರೆ ಗೊತ್ತಿದ್ದವರಿಗೆ, ದಳಪತಿ ವಿಜಯ್ ಗೆ ಇದೆಂಥಾ ದೊಡ್ಡ ಹೊಡೆತ ಎಂಬುದು ಅರ್ಥವಾಗಿಯೇ ಇರುತ್ತೆ.

ಕ್ಲೀನ್ ಇಮೇಜ್ ಕಾಪಾಡಿಕೊಂಡಿದ್ದ ಜೋಸೆಫ್ ವಿಜಯ್, ಇಂದಿಗೂ ಟಾಲಿವುಡ್ ಸೂಪರ್‌ಸ್ಟಾರ್. ಆತನ ಅಭಿಮಾನಿ ಬಳಗ ದೊಡ್ಡದು. ಬೆನ್ನಿಗೆ ಜಾತಿಯೂ ಇದೆ. ಇದೆಲ್ಲ ಲೆಕ್ಕಾಚಾರದೊಂದಿಗೆ ರಾಜಕೀಯಕ್ಕೆ ಧುಮುಕಿದ ವಿಜಯ್ ಗೆ ಅಸಲಿ ಆಟ ಶುರುವಾಗಿದ್ದು ಗೊತ್ತೇ ಆಗಲಿಲ್ಲ. ವಿಜಯ್ ರ್ಯಾಲಿಗಳಿಗೆ ಜನ ಸಾಗರವೇ ಹರಿದು ಬರುತ್ತಿರುವುದನ್ನು ಕಂಡು ಕ್ಷಣ ವಿಚಲಿತವಾದ ಡಿಎಂಕೆ, ತನ್ನ ಚಾಣಾಕ್ಷ ರಾಜಕೀಯ ತಂತ್ರಗಾರಿಕೆಯಿಂದ ವಿಜಯ್ ಗೆ ಹೊಡೆತ ಕೊಡುತ್ತಲೇ ಬಂದಿದೆ. ಕರೂರು ಕಾಲ್ತುಳಿತ ಘಟನೆ ಬಳಸಿಕೊಂಡು ವಿಜಯ್ ನನ್ನು ಕಾನೂನು ಬಲೆಯಲ್ಲಿ ಸಿಲುಕಿಸಿತು. ಅತ್ತ ಆತನ ಕೊನೆಯ ಸಿನಿಮಾ ಜನನಾಯಗನ್ ಬಿಡುಗಡೆಯೇ ಆಗದಂತೆ ಸೆನ್ಸಾರ್ ಸಮಸ್ಯೆ ಬಿಗಡಾಯಿಸಿತು.


ಡಿಎಂಕೆಯಲ್ಲಿ ಸ್ಟಾಲಿನ್, ಮಗ ಉದಯನಿಧಿ, ಅಗ್ರೆಸಿವ್ ಆಗಿ ಪ್ರಚಾರಕ್ಕಿಳಿದುಬಿಟ್ಟರು. ಮಹಿಳೆಯರ ಅಕೌಂಟ್‌ಗೆ ಐದು ಸಾವಿರ ರೂ. ಹಾಕಿ, ಹಲವು ಭರವಸೆ ನೀಡಿ ಬಿಟ್ಟಿತು. ಪಾಪ.. ವಿಜಯ್, ಬರೀ ರ್ಯಾಲಿಯಲ್ಲಿ ಭಾಷಣವನ್ನೇ ಜೀವಾಳ ಮಾಡಿಕೊಂಡಿದ್ದು ಬಿಟ್ಟರೆ, ಪ್ರತಿತಂತ್ರಗಾರಿಕೆ ರೂಪಿಸುವಲ್ಲಿ ವಿಫಲರಾಗಿಬಿಟ್ಟರು ಅಂತಿದ್ದಾರೆ ತಮಿಳು ನಾಡು ರಾಜಕೀಯ ವಿಶ್ಲೇಷಕರು. ಇದರ ಮಧ್ಯೆ, ಜಯಲಲಿತಾರ ಎಐಎಡಿಎಂಕೆ ಪಕ್ಷ ಒಡೆದು ಹೋಳಾಗಿದೆ. ನಿನ್ನೆಯಷ್ಟೇ ಮಾಜಿ ಸಿಎಂ ಪನ್ನೀರ್ ಸೆಲ್ವಂ, ಎಐಎಡಿಎಂಕೆ ತೊರೆದು ಸ್ಟಾಲಿನ್ ಜತೆ ಕೈ ಜೋಡಿಸಿದ್ದಾರೆ. ಅತ್ತ ನಟ ಕಮಲ್ ಹಾಸನ್ ಸಹ ಬುದ್ಧಿವಂತಿಕೆಯಿಂದ ಡಿಎಂಕೆ ಸೇರಿ ರಾಜ್ಯಸಭೆ ಸದಸ್ಯರಾಗಿ ಬಿಟ್ರು. ಬಿಜೆಪಿ ಅಣ್ಣಾಮಲೈ

☞ 14

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 1.3.2026

# 'ಸಂಪತ್ತಿಗೆ ಸವಾಲ್' ಮರು ಬಿಡುಗಡೆ ಆಗಿರುವ ಈ ಸಂದರ್ಭದಲ್ಲಿ ಒಂದು ವಿಚಾರ ವಿನಿಮಯ...

1974ರಲ್ಲಿ ನಾನು ಹುಟ್ಟಿದ್ದೆ ಆಗಿನ್ನೂ ಚಿಕ್ಕ ಹುಡುಗ. ಮೂರು ವರ್ಷದ ಕೂಸು. ಎ ಸೆಂಟರ್ ನಲ್ಲಿ ಬಿಡುಗಡೆಯಾದ ಅಣ್ಣಾವ್ರ ಸಿನಿಮಾಗಳು ಬಿ ಮತ್ತು ಸಿ ಸೆಂಟರ್‌ಗಳಲ್ಲಿ ವರ್ಷಕ್ಕೆ ಐದಾರು ಸಲ ಮರು ಬಿಡುಗಡೆ ಆಗುತ್ತಿದ್ದವು. ಈ ಟೆಂಟ್ ಬಿಟ್ರೆ ಆ ಟೆಂಟು, ಆ ಟೆಂಟ್ ಬಿಟ್ರೆ ಈ ಟೆಂಟು... ಹೀಗೇ ರೀರಿಲೀಸ್‌ನಲ್ಲಿ ಸಂಪತ್ತಿಗೆ ಸವಾಲ್ ಚಿತ್ರವನ್ನ ನಮ್ಮ ಮಳವಳ್ಳಿ ತಾಲೂಕಿನ ಬೆಳಕವಾಡಿಯ ಬೀರೇಶ್ವರ ಚಿತ್ರಮಂದಿರದಲ್ಲಿ ನೋಡಿದ್ದೆ. ಆಗಿನ ಕಾಲದಲ್ಲಿ ರಾಜಕುಮಾರ್ ಸಿನಿಮಾ ನೋಡುವುದೆ ಒಂದು ಸಂಭ್ರಮ. ಹಬ್ಬದ ವಾತಾವರಣ. ಹಳ್ಳಿ ಜನ ಎತ್ತಿನಗಾಡಿಯಲ್ಲಿ ಕುಟುಂಬ ಸಮೇತ ಸಿನಿಮಾ ನೋಡಲು ಹೋಗುತ್ತಿದ್ದರು. ಅವಾಗ ಮಾರ್ನಿಂಗ್ ಶೋ, ಮ್ಯಾಟ್ನೀ ಶೋ ಇರಲೇ ಇಲ್ಲ.



ಕೃಷಿ ಕೆಲಸ ನಿಂತು ಹೋದಾವು ಅನ್ನೋ ಭಯದಲ್ಲಿ ಅವೆಲ್ಲ ಪ್ರದರ್ಶನ ಮಾಡಲು ಅವಕಾಶ ಕೊಡ್ತಾ ಇರಲಿಲ್ಲ. ರಾತ್ರಿ 6 ಗಂಟೆಗೆ ಫಸ್ಟ್ ಶೋ, 10 ಗಂಟೆಗೆ ಸೆಕೆಂಡ್ ಶೋ. ಆದರೆ ಅಣ್ಣಾವ್ರ ಸಿನಿಮಾ,ಬೇರೆ ಭಕ್ತಿ ಪ್ರಧಾನಸಿನಿಮಾ ಬಂದಾಗ ಮಾತ್ರ ಮ್ಯಾಟ್ನೀ ಶೋ ಹಾಕಲು ಚಿತ್ರಮಂದಿರದವರಿಗೆ ಅವಕಾಶ ಕಲ್ಪಿಸುತ್ತಿದ್ದರು.

ಅಣ್ಣಾವ್ರ ಸಿನಿಮಾ ಹಾಕಿದಾಗ ಇಡೀ ಚಿತ್ರಮಂದಿರ ಶೋಭನಕ್ಕೆ ಸಿದ್ದವಾದ ವಧುವಿನಂತೆ ಕಂಗೊಳಿಸುತ್ತಿತ್ತು. ಚಿತ್ರಮಂದಿರದ ಮುಂದೆ ದಾರಿಯುದ್ಧಕ್ಕೂ ಕಂಬ ನೆಟ್ಟು ಪುಟ್ ಲೈಟ್ ಸರ ಹಾಕಿರೋರು.... ಆ ನೂಕು ನುಗ್ಗಲಿನಲ್ಲಿ ನುಗ್ಗಿ ಕಿಂಡಿಯಲ್ಲಿ ಕೈ ತುರುಕಿ ಟಿಕೆಟ್ ತೆಗೆದುಕೊಳ್ಳುವಷ್ಟರಲ್ಲಿ ಇದ್ದಬದ್ದ ಬೆವರೆಲ್ಲ ಕಿತ್ತು ಚಡ್ಡಿ ಬನಿಯನ್ನು ತೆವಗೊಂಡು, ಅಯ್ಯೋ.ಯಾಕೇಳ್ತೀರಿ ಆ ಫಜೀತಿಯನ್ನ. ಆದರೆ ಚಿತ್ರಮಂದಿರ ಹೊಕ್ಕಿ ಸಿನಿಮಾ ಶುರುವಾದಾಗ... ಅದೇನು ಸಂಭ್ರಮ, ಅದೆಂಥ ಸಂತೋಷ. ಶಿಳ್ಳೆ ಹೊಡೆದುಕೊಂಡು ಡಾಕ್ಟರ್ ರಾಜ್‌ಕುಮಾರ್‌ಗೆ ಜೈ... ಅಂತ ಕಿರುಚಿಕೊಂಡು ಸಂಭ್ರಮಿಸುತ್ತಿದ್ದೆವು. ಮುಂದಗಡೆ ನೆಲದಲ್ಲಿ ಕುಳಿತ ಪ್ರೇಕ್ಷಕರಿಗೆ ಬೆಂಚ್ ಕಡೆಯಿಂದ ಎಸೆಯೋ ಚಿಲ್ಲರೆ ಗೆಬರಿಕೊಳ್ಳುವ ಅದ್ಭುತ ಅವಕಾಶ...


ಈಗಿನ ಸೌಂಡ್ ಎಫೆಕ್ಟ್ ಅಗೆಲ್ಲಿತ್ತು? ಟಾಕೀಸ್ ಒಳಗೆ ಎಡ ಬಲ ನೆಲದ ಮೇಲೆ ದೊಡ್ಡ ದೊಡ್ಡ ಸೌಂಡ್ ಬಾಕ್ಸ್ ಮಾಡಗಿರೋರು. ಸಾಂಗ್ಸ್ ಬಂದಾಗ, ಒಳ್ಳೊಳ್ಳೆ ಡೈಲಾಗ್ಸ್ ಬಂದಾಗ ದಿಢೀರ್ ಅಂತ ಕನೆಕ್ಟ್ ಮಾಡಿಬಿಡೋರು. ನಾವು ಬೆಚ್ಚಿ ಬೆರಗಾಗಿ ಸಂಭ್ರಮಿಸುತ್ತಿದ್ದೆವು. ಆ ಖುಷಿ ಈಗ ಯಾವ ಪಿವಿಆರ್‌ನಲ್ಲಿಯೂ ಸಿಗಲ್ಲ ಬಿಡ್ರಿ...

ಕಳೆದ ತಿಂಗಳು ಅಂತರರಾಷ್ಟ್ರೀಯ ಬೆಂಗಳೂರು ಚಲನಚಿತ್ರೋತ್ಸವದಲ್ಲಿ 'ಶಂಕರ್ ಗುರು' ಸಿನಿಮಾ ವನ್ನು ತುಂಬಿದ ಗೃಹದಲ್ಲಿ ಅಭಿಮಾನಿಗಳ ಸಿಳ್ಳೆಚಪ್ಪಾಳೆಗಳ ನಡುವೆ ನೋಡಿದ ನೆನಪು ಮಾಸುವ ಮುನ್ನವೆ ಇಂದು ಪ್ರಸನ್ನ ಚಿತ್ರಮಂದಿರದಲ್ಲಿ 'ಸಂಪತ್ತಿಗೆ ಸವಾಲ್' ನೋಡುವ ಅವಕಾಶ. ಪ್ರಸನ್ನ ಚಿತ್ರಮಂದಿರದಲ್ಲಿ 7080ರ ದಶಕ ಮರು ಸೃಷ್ಟಿಯಾದಂತಿತ್ತು.

ತಮ್ಮ ಬಾಲ್ಯದ,ಯೌವನದ ದಿನಗಳಲ್ಲಿ ಸಿನಿಮಾ ನೋಡಿ, ಸಂಭ್ರಮಿಸಿದ್ದವರೇ ಹೆಚ್ಚಾಗಿ ಬಂದಿದ್ದರು, ಕೆಲವರು ತಮ್ಮ ಮಕ್ಕಳಿಗೆ,ಮೊಮ್ಮಕ್ಕಳಿಗೆ ತಮ್ಮ ಕಾಲದ ವೈಭವ ಹೇಗಿತ್ತು ಅನ್ನುವುದನ್ನು ತೋರಿಸಲೆಂದು ಕರೆ ತಂದಂತಿತ್ತು. ಈಗಿನ ಜನರೇಷನ್ನಿನ ಮಕ್ಕಳಿಗೆ ರಾಜಕುಮಾರ್ ಅಂದರೆ ಪುನೀತ್ ರಾಜಕುಮಾರ್ ಅವರ ಅಪ್ಪ, ಅಂತ ತಿಳಿಸಿ ಪುನೀತ್ ರಾಜಕುಮಾರ್ ಅಂದರೆ ರಾಜಕುಮಾರ್ ಅವರ ಮಗ ಅನ್ನುವುದನ್ನು ತಿಳಿಸಿ ಅಣ್ಣಾವ್ರ ಸಿನಿಮಾಗಳನ್ನು ತೋರಿಸಬೇಕು ಅನ್ನುವುದು ನನ್ನ ಬಯಕೆ.

ಕನ್ನಡ ಚಲನಚಿತ್ರ ರಂಗ ಎಂದೋ ಹುಟ್ಟಿತ್ತು, ಆದರೆ ಅದು ಬೆಳೆದದ್ದು 1954ರ 'ಬೇಡರ ಕಣ್ಣಪ್ಪ'ನ ಜೊತೆ. ರಾಜಕುಮಾರರಿಂದಲೇ ಬೆಳೆದು, ರಾಜಕುಮಾರರಿಗಾಗಿಯೇ ಉಳಿದ ಈ ಚಿತ್ರರಂಗ, ಅವರ ಜೊತೆಯೇ ಮುಗಿಯಿತೇನೋ ಅನ್ನುವುದು ಹಲವರ ಅನುಮಾನ! ಅದಕ್ಕೆ ಕಾರಣ ಇಲ್ಲದಿಲ್ಲ. ಹಿಂದಿ ಚಿತ್ರರಂಗದಲ್ಲಿ ದಿಲೀಪ್ ಕುಮಾರ್, ರಾಜ್ ಕಪೂರ್ ಅವರ ನಂತರ ಅಮಿತಾಭ್ ಬಚ್ಚನ್ ಯುಗ ಶುರುವಾಯ್ತು. ತಮಿಳಿನಲ್ಲಿ ಎಂಜಿಆರ್, ಶಿವಾಜಿ ಗಣೇಶನ್ ನಂತರ ಕಮಲಹಾಸನ್, ರಜನೀಕಾಂತ್ ಯುಗ. ತೆಲುಗಿನಲ್ಲಿ ರಾಮ ರಾವ್ (ಎನ್‌ಟಿಆರ್) ನಾಗೇಶ್ವರ ರಾವ್(ಎ ಎನ್ ಆರ್) ನಂತರ ಚಿರಂಜೀವಿ. ಬಾಲಕೃಷ್ಣ, ನಾಗಾರ್ಜುನ, ವೆಂಕಟೇಶ್.... ಮಲಯಾಳದಲ್ಲಿ ಪ್ರೇಂ ನಜೀರ್ ಸಾಬ್ ನಂತರ ಮಮ್ಮುಟ್ಟಿ, ಮೋಹನ್ ಲಾಲ್... ಹೀಗೆ ಹೀರೋ ಸಂತತಿ ಬದಲಾಗುತ್ತ ಬೆಳೆಯುತ್ತ ಬಂತು. ಆದರೆ ಕರ್ನಾಟಕದಲ್ಲಿ ಮಾತ್ರ ರಾಜಕುಮಾರ್ ಯುಗ ಅನ್ನುವುದು ವಿಷ್ಣುವರ್ಧನ್, ಅಂಬರೀಶ್, ಅನಂತನಾಗ್, ಶಂಕರ್ ನಾಗ್, ಪ್ರಭಾಕರ್ ಕಾಲದಲ್ಲೂ ಹಾಗೇ ಇತ್ತು. ಶಿವರಾಜಕುಮಾರ್, ರವಿಚಂದ್ರನ್ ಕಾಲದಲ್ಲೂ ಅದು ಬದಲಾಗಲಿಲ್ಲ.

ಅಣ್ಣಾಮ್ರ ಬದುಕಿರುವವರೆಗೂ ಅವರೇ ನಂಬರ್ ಒನ್. ಮೂರು ತಲೆಮಾರಿಗೂ ಅವರೊಬ್ಬರೇ ಪ್ರಶ್ನಾತೀತ ನಾಯಕ!!! ಅವರ ಅಸಾಧಾರಣ ಅಭಿನಯ ಸಾಮರ್ಥ್ಯ, ಆ ಪರ್ಸನಾಲಿಟಿ ವರ್ಸಟ್ಯಾಲಿಟಿಯನ್ನು ಸರಿಗಟ್ಟುವುದಿರಲಿ, ಅವರ ಹತ್ತಿರಕ್ಕೂ ಸುಳಿಯಲು ಯಾರಿಗೂ ಸಾಧ್ಯವಾಗಲಿಲ್ಲ ಅನ್ನುವುದು ವಾಸ್ತವ. ಅಣ್ಣಾವ್ರನ್ನು ನೋಡಿದ ಕನ್ನಡಿಗರಾರಿಗೂ ಆ ಸ್ಥಾನದಲ್ಲಿ ಮತ್ಯಾರನ್ನು ಕಲ್ಪಿಸಿಕೊಳ್ಳಲಾಗುತ್ತಿಲ್ಲ ಅನ್ನುವುದೇ ಇಂದಿನ ಕನ್ನಡ ಚಿತ್ರರಂಗದ ಅಧೋಗತಿಗೆ ಕಾರಣವಿರಬಹುದೆ...?




ಇನ್ನು ಈ 'ಸಂಪತ್ತಿಗೆ ಸವಾಲ್' ಸಿನಿಮಾಗೆ ಸಂಬಂಧಿಸಿದ ಒಂದು ಘಟನೆಯನ್ನು ಹೇಳುತ್ತೇನೆ.... ಶಿವರಾಜ್ಕುಮಾರ್ ಅವರ ಕೆಲ ಅಭಿಮಾನಿಗಳು ಅಣ್ಣಾವ್ರ ಬಳಿ ಬಂದು 'ಅಣ್ಣಾ ಶಿವರಾಜಕುಮಾರ್ ಅವರ ನಾಯಕತ್ವದಲ್ಲಿ ಸಂಪತ್ತಿಗೆ ಸವಾಲ್ ಸಿನಿಮಾವನ್ನು ರೀಮೇಕ್ ಮಾಡಿದರೆ ಹೇಗೆ...' ಎಂದು ಕೇಳಿದರು.

ಆಗ ಅಣ್ಣಾಮ್ರ 'ಭದ್ರನ ಪಾತ್ರವನ್ನೇನೋ ಶಿವಣ್ಣನ ಹತ್ರ ಮಾಡುಸ್ತೀರೀ... ವಜ್ರಮುನಿಯವರನ್ನ ಎಲ್ಲಿಂದ ತರ್ತೀರಿ? ಬಾಲಣ್ಣನವರನ್ನ ಎಲ್ ಕರ್ಕೊಂಡ್ ಬರ್ತೀರಿ?? ಸಂಪತ್ತಿಗೆ ಸವಾಲ್ ಬರೀ ರಾಜಕುಮಾರನ ಸಿನಿಮಾ ಅಲ್ರಯ್ಯ...ಅವರೆಲ್ಲರು ಇದ್ದದ್ರಿಂದ್ಲೇ ಅದು ಒಳ್ಳೆಯ ಸಿನಿಮಾ ಆದದ್ದು... ಈ ಥರ ವ್ಯರ್ಥ ಪ್ರಯತ್ನ ಮಾಡ್ಬೇಡಿ' ಅಂದಿದ್ರು!!! ಈಗ ಹೇಳಿ, ಡಾ. ರಾಜ್‌ರಂತಹ ವ್ಯಕ್ತಿ ಈ ಜಗತ್ತಿನಲ್ಲಿ ಇನ್ನೊಬ್ಬರಿದ್ದಾರೆಯೇ?! ಇರಲು ಸಾಧ್ಯವೇ...??!

---

15 ☞

ಬಿಟ್ಟು ವಿಜಯ್ ಗೆ ಗಾಳ ಹಾಕುತ್ತಿದ್ದರೂ, ಸ್ಪಷ್ಟ ನಿರ್ಧಾರ ಪ್ರಕಟಿಸಲಿಲ್ಲ.

ತಮಿಳುನಾಡಿನ ಕುಟುಂಬ ರಾಜಕಾರಣವನ್ನು ಅರಿಯುವಲ್ಲಿ ವಿಜಯ್ ವಿಫಲರಾದಂತೆ ಕಾಣ್ತಿದ್ದಾರೆ. ಇದೆಲ್ಲದರ ನಡುವೆ, ವಿಜಯ್ ಯಾವಾಗ ರಾಜಕೀಯಕ್ಕೆ ಎಂಟ್ರಿಕೊಟ್ಟರೋ, ಅಂದಿನಿಂದಲೇ ತ್ರಿಷಾ ಜತೆಗಿನ ಅಫೇರ್ ಸುದ್ದಿ ಮತ್ತೆ ಮುನ್ನಲೆಗೆ ಬಂತು. ವಿಜಯ್, ತ್ರಿಷಾ ಜತೆ ಎಲ್ಲೆಲ್ಲಿಗೆ ಹೋಗಿದ್ರು, ಎಲ್ಲಿ, ಯಾವಾಗ ಜತೆಗಿದ್ದರು ಅನ್ನೋ ಸುದ್ದಿ ಫೋಟೋ ಸಾಕ್ಷಿ ಸಹಿತ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗತೊಡಗಿತು. ಈ ಬಗ್ಗೆ ಒಮ್ಮೆಯೂ ವಿಜಯ್ ಆಗಲಿ, ತ್ರಿಷಾ ಆಗಲಿ ಸ್ಪಷ್ಟನೆ ಕೊಡಲಿಲ್ಲ. ಮತ್ತೊಂದು ಇಂಟರೆಸ್ಟಿಂಗ್ ಸುದ್ದಿ ಅಂದ್ರೆ ಕಳೆದ ವಾರವಷ್ಟೇ ಬಿಜೆಪಿ ಅಧ್ಯಕ್ಷ ನಾಗೇಂದ್ರ, ವಿಜಯ್, ರಾಜಕೀಯದಲ್ಲಿ ಅನುಭವ ಪಡೆಯಲು ಮತ್ತು ಯಶಸ್ಸು ಸಾಧಿಸಲು ಮೊದಲು ನಟಿ ತ್ರಿಷಾ ಮನೆಯಿಂದ ಹೊರಬರಬೇಕು ಎನ್ನೋ ಹೇಳಿಕೆ, ರಾಜಕೀಯ ವಲಯದಲ್ಲಿ ಭಾರೀ ಸುದ್ದಿ ಮಾಡಿತು. ಆಗಲೂ ವಿಜಯ್ ಬಾಯ್ಬಿಡಲಿಲ್ಲ. ಆಮೇಲೆ ಬಿಜೆಪಿ ಅಧ್ಯಕ್ಷ ಕ್ಷಮೆ ಕೇಳಿದರೂ, ವಿಜಯ್ ಮನೆಯೊಳಗೆ ಬಿರುಗಾಳಿ ಎದ್ದಿತು. ವಿಜಯ್ ತೊರೆದು ಲಂಡನ್ ವಾಸ ಮಾಡ್ತಿರೋ ಸಂಗೀತಾ, ಇದೀಗ ಅಧಿಕೃತವಾಗಿ ವಿಚ್ಚೇದನಕ್ಕೆ ಅರ್ಜಿ ಹಾಕಿದ್ದಾರೆ.

ಡಿಎಂಕೆಗೆ ತಾನೊಬ್ಬನೇ ಪ್ರತಿಸ್ಪರ್ಧಿ, ತಾನೇ ಸಿಎಂ ಅಭ್ಯರ್ಥಿ ಎಂದು ಬೀಗುತ್ತಿದ್ದ ವಿಜಯ್ ಗೆ ದಾಂಪತ್ಯ ಬದುಕಿನಲ್ಲಾದ ಒಡಕು ದೊಡ್ಡ ತಲೆನೋವಾಗಿದೆ., ಅಭಿಮಾನಿಗಳಲ್ಲೂ ತಳಮಳ ಮೂಡಿಸಿದೆ. ರಾಜಕೀಯ ಮಹತ್ವಾಕಾಂಕ್ಷೆಯಿಂದ, ಕೆರಿಯರ್‌ನ ಉತ್ತುಂಗದಲ್ಲಿದ್ದಾಗಲೇ ತಮಿಳು ಚಿತ್ರರಂಗ ಬಿಟ್ಟು, ಚುನಾವಣಾ ರಾಜಕೀಯಕ್ಕಿಳಿದ ಜೋಸೆಫ್ ವಿಜಯ್‌ಗೆ, ರಾಜಕಾರಣದ ಒಳಸುಳಿ ಈಗ ಅರ್ಥವಾಗುತ್ತಿರಬಹುದು.

ಚುನಾವಣಾ ಸಮೀಕ್ಷೆಗಳಲ್ಲೂ ಪ್ರಭಾವಿ ನಾಯಕನಾಗಿ ಗುರುತಿಸಿಕೊಂಡಿದ್ದರೂ, ವಿಜಯ್ ಪಕ್ಷ ಅಧಿಕಾರ ಗದ್ದುಗೆ ಏರುವುದು ಕಷ್ಟಸಾಧ್ಯ ಎಂದೇ ಸಮೀಕ್ಷೆಗಳು ವಿವರಿಸಿದ್ದವು. ಇಷ್ಟೆಲ್ಲ ರಾಜಕೀಯ ಹೋರಾಟದ ಮಧ್ಯೆ ವಿಜಯ್ ಸಂಗೀತಾ ವಿಚ್ಛೇದನ ಸುದ್ದಿ, ರಾಜಕೀಯ ಪಕ್ಷಗಳಿಗೆ ಭರ್ಜರಿ ಭೋಜನ ಸಿಕ್ಕಂತಾಗಿದೆ. ಇದನ್ನೇ ದಾಳವಾಗಿಸಿಕೊಂಡು ವಿಜಯ್ ಹಣಿಯಬಹುದು, ಅಭಿಮಾನಿಗಳಿಗೂ, ತಮ್ಮ ಆರಾಧ್ಯ ದೈವನ ಖಾಸಗಿ ಬದುಕು ಬೀದಿಗೆ ಬಂದಿದ್ದು ನುಂಗಲಾರದ ತುತ್ತಾಗಿ ಪರಿಣಮಿಸಬಹುದು. ಏನೇ ಆದರೂ, ತಮಿಳುನಾಡು ರಾಜಕೀಯದ ರಂಗೇ ಬೇರೆ ಬಿಡಿ. ಎಲೆಕ್ಷನ್ ಹೊತ್ತಿಗೆ ಇನ್ನೆಷ್ಟು ತಿರುವು ಪಡೆಯುತ್ತೋ ಏನೋ..?? ರಾಜಕೀಯ ಅಂದಮೇಲೆ ಎದುರಾಳಿಗಳ ಅಟ್ಯಾಕ್ ಮಾಮೂಲು. ಆದರೆ, ಇಂಥ ಸಮಯದಲ್ಲಿ



ವಿಜಯ್‌ರನ್ನು ಪ್ರೇಮಿಸಿ ವಿವಾಹವಾಗಿರೋ ಪತ್ನಿ ಬಿಟ್ಟುಹೋಗುವ ನಿರ್ಧಾರ ಮಾಡಬಾರದಿತ್ತು! ಒಬ್ಬ ವ್ಯಕ್ತಿ ಎಂಥ ಶತ್ರುವನ್ನಾದರೂ ಎದುರಿಸಬಹುದು... ಕೌಟುಂಬಿಕ ವಿಚಾರದಲ್ಲಿ ತೊಂದರೆ ಆದರೆ ಕುಗ್ಗಿ ಹೋಗುತ್ತಾನೆ.

ತಮಿಳುನಾಡು ಸಿಎಂ ಆಗಿ ಏನೇನನ್ನೋ ಸಾಧಿಸಬೇಕು ಅಂತ, ಒಂದು ಸಿನಿಮಾಗೆ 250 ಕೋಟಿ ರಾಯಲ್ಟಿ ಸಿಕ್ಕರೂ ನಟನೆಗೆ ಗುಡ್ ಬೈ ಹೇಳಿ ರಾಜಕೀಯ ಅಖಾಡಕ್ಕೆ ಇಳಿದಿರುವ ವಿಜಯ್ ಈ ಘಟನೆಯಿಂದ ಧೃತಿಗೆಡದಿದ್ದರೆ ಸಾಕು... ಅಂತ ಆತನ ಅಸಂಖ್ಯಾತ ಅಭಿಮಾನಿಗಳು ಆತಂಕಗೊಂಡಿದ್ದಾರೆ!

Vol. 41 No. 39 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
policenewsreporter@gmail.com http//policenews.news Police News police_news